14 February 2026 Saturday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಾವು ಕಷ್ಟದಲ್ಲಿದ್ದಾಗ ಸಮಾಧಾನಪಟ್ಟುಕೊಳ್ಳಲಿಕ್ಕೆ ನಮಗಿಂತ ಕೆಳಗಿನವರನ್ನು ನೋಡಬೇಕು! ಸಾಧನೆಗೆ ನಮಗಿಂತ ಮೇಲಿನವರನ್ನು ನೋಡಬೇಕು!

-ಸ್ನೇಹಾ ಆನಂದ್

info.varthaman@gmail.com



ಇಂದು ಲಕ್ಷ ಕಂಠಗಳ ಹನುಮಾನ್ ಚಾಲೀಸಾ: ಶಾಸಕರ ಜಂಟಿ ಸುದ್ದಿಗೋಷ್ಠಿ ಪುಟ ಸಂ. 2



ಜಾಲಮಂಗಲದಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಪುಟ ಸಂ. 3



ಕುಡಿಯುವ ನೀರಿನ ಸಮಸ್ಯೆಯಾಗದಿರಲಿ: ಶಾಸಕ ಮಂಜುನಾಥ್ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 100 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಶಿವರಾತ್ರಿ ನಂತರ ಶುಭ ಸುದ್ದಿ

## ಅಜ್ಜಯ್ಯನ ಆಶೀರ್ವಾದ ಪಡೆದು ಡಿಕೆಶಿ ವಿಶ್ವಾಸ

**ತಿಪಟೂರು:** ಶಿವರಾತ್ರಿ ಹಬ್ಬದ ನಂತರ ಶುಭ ಸುದ್ದಿ ಸಿಗಲಿದೆ. ಎಲ್ಲರಿಗೂ ಒಳ್ಳೆಯದಾಗಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಹೇಳಿದರು.

ತಿಪಟೂರು ತಾಲ್ಲೂಕಿನ ಕಾಡಸಿದ್ದೇಶ್ವರ ಮಠಕ್ಕೆ ಶುಕ್ರವಾರ ಭೇಟಿ ನೀಡಿ ಅಜ್ಜಯ್ಯನ ಆಶೀರ್ವಾದ ಪಡೆದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. ಮುಖ್ಯಮಂತ್ರಿ ಹುದ್ದೆಗೆ ಸಂಬಂಧಿಸಿದ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಮುಂದೆ ಏನಾಗುತ್ತದೆ ಎಂಬ ಬಗ್ಗೆ ಸದ್ಯಕ್ಕೆ ನಾನು



ಚರ್ಚಿಸುವುದಿಲ್ಲ. ಮುಂದೆ ಏನು ಮಾಡಬೇಕು ಎಂದು ಚಿಂತಿಸುತ್ತೇನೆ ಎಂದು ಹೇಳಿದರು. ದೆಹಲಿಯಲ್ಲಿ ಅಧಿಕಾರ ಹಂಚಿಕೆ ಪುಟ 2ಕ್ಕೆ

# ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಚಿನ್ನದ ಕೊಳಗ ಹಸ್ತಾಂತರ



**ಮೈಸೂರು:** ಮೈಸೂರು ಅರಮನೆ ಆವರಣದಲ್ಲಿರುವ ತ್ರಿನೇತ್ರೇಶ್ವರನಿಗೆ ಮಹಾಶಿವರಾತ್ರಿ ಅಂಗವಾಗಿ ವರ್ಷಕ್ಕೊಮ್ಮೆ ಚಿನ್ನದ ಕೊಳಗವನ್ನು ಧರಿಸಲಾಗುತ್ತದೆ. ಮುಜರಾಯಿ ಇಲಾಖೆಯಿಂದ ಅರಮನೆಯ ದೇವಾಲಯಕ್ಕೆ ಶನಿವಾರ ಸಂಪ್ರದಾಯದಂತೆ ಚಿನ್ನದ ಕೊಳಗ ಹಸ್ತಾಂತರಿಸಲಾಯಿತು.

ಸುಮಾರು 11 ಕೆ.ಜಿ ಇರುವ ಶುದ್ಧ ಚಿನ್ನದ ಕೊಳಗವನ್ನು ದೇವಾಲಯದ ಅರ್ಚಕರಿಗೆ ಚಾಮುಂಡಿ ಬೆಟ್ಟ ಕ್ಷೇತ್ರ ಪುಟ 2ಕ್ಕೆ

# ಭೀಕರ ಅಪಘಾತ: 7 ಯುವಕರು ಸಾವು


## ಹೊಸಕೋಟೆ ಬಳಿ ಕ್ಯಾಂಟರ್, ಬೈಕ್–ಕಾರಿನ ನಡುವೆ ಸರಣಿ ಅಪಘಾತ


**ಬೆಂಗಳೂರು:** ಹೊಸಕೋಟೆ ತಾಲ್ಲೂಕಿನ ಸತ್ಯವರ ಗ್ರಾಮದ ಬಳಿ ಶುಕ್ರವಾರ ಮುಂಜಾನೆ ನಡೆದ ಭೀಕರ ಸರಣಿ ಅಪಘಾತದಲ್ಲಿ 6 ಮಂದಿ ವಿದ್ಯಾರ್ಥಿಗಳು ಸೇರಿದಂತೆ 7 ಜನ ಸ್ಥಳದಲ್ಲೇ ಸಾವನ್ನಪ್ಪಿರುವ ದುರ್ಘಟನೆ ನಡೆದಿದೆ.

ಹೊಸಕೋಟೆ–ದಾಬಸ್ ಪೇಟೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದೆ. ಕ್ಯಾಂಟರ್, ಬೈಕ್ ಮತ್ತು ಕಾರಿನ ನಡುವೆ ಸಂಭವಿಸಿದ ಸರಣಿ ಅಪಘಾತದಲ್ಲಿ ಕಾರಿನಲ್ಲಿದ್ದ 6 ಜನ ಹಾಗೂ ಒಬ್ಬ ಬೈಕ್ ಸವಾರ ಸೇರಿ 7 ಮಂದಿ ಸ್ಥಳದಲ್ಲೇ ಜೀವಬಿಟ್ಟಿದ್ದಾರೆ.

ಹೊಸಕೋಟೆಯಿಂದ ದೇವನಹಳ್ಳಿ ಮಾರ್ಗವಾಗಿ ಬರುತ್ತಿದ್ದ ಕಾರು ಸದ್ಯ ಕಾರಿನಲ್ಲಿದ್ದ 6 ಜನ ಸಾವನ್ನಪ್ಪಿದ್ದಾರೆ. ಕಾರಿನಲ್ಲಿದ್ದ ಅಶ್ವಿನ್ ನಾಯರ್ (17)– ಆರ್‌ವಿ ಪಿಯು ಕಾಲೇಜ್ ವಿದ್ಯಾರ್ಥಿ, ಕೊತ್ತನೂರು ನಿವಾಸಿ. ಅರ್ಹನ್ ಶರೀಫ್–ಸಿಎಂಆರ್ ಶಾಲೆ ವಿದ್ಯಾರ್ಥಿ, ಎಚ್‌ವಿಆರ್ ಲೇಔಟ್. ಅಯನ್ ಅಲಿ (17)–ಸಿಎಂಆರ್ ಶಾಲೆ ವಿದ್ಯಾರ್ಥಿ. ಭರತ್ (18)–ಸಿಎಂಆರ್ ಕಾಲೇಜ್ ವಿದ್ಯಾರ್ಥಿ. ಈತನ್ ಜಾರ್ಜ್ (17) –ಆರ್‌ವಿ ಪ್ರಥಮ ಪಿಯು ಕಾಲೇಜ್ ವಿದ್ಯಾರ್ಥಿ, ಹುಳಿಮಾವು ನಿವಾಸಿ. ಫರ್ಹಾನ್ (17) ಮತ್ತು ಬೈಕ್ ಸವಾರ ಗಗನ್ (26) ಮೃತಪಟ್ಟಿದ್ದಾರೆ. ಗಗನ್ ಸಫಲ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರು.

ಅಪಘಾತದ ಮಾಹಿತಿ ತಿಳಿದ ಕೂಡಲೇ ಸ್ಥಳೀಯರು ಹಾಗೂ ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಆದರೆ, ಕಾರಿನಲ್ಲಿದ್ದವರು ಮತ್ತು ಬೈಕ್







ಸವಾರರು ಗಂಭೀರ ಗಾಯಗಳಿಂದಾಗಿ ಸ್ಥಳದಲ್ಲೇ ಪ್ರಾಣಪಕ್ಷಿ ಹಾರಿ ಹೋಗಿತ್ತು. ಮಕ್ಕಳನ್ನು ಕಳೆದುಕೊಂಡ ಪೋಷಕರು, ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು.

ಹೊಸಕೋಟೆ–ದಾಬಸ್‌ಪೇಟೆ ನೂತನ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಆರು ಮಂದಿ ವಿದ್ಯಾರ್ಥಿಗಳು ಕಾರಿನಲ್ಲಿ ಶುಕ್ರವಾರ ಬೆಳ್ಳಂಬೆಳಗ್ಗೆ ಜಾಲಿರೈಡ್ ಮಾಡೋಣವೆಂದು ಕಾರಿನಲ್ಲಿ ಹೋಗುತ್ತಿದ್ದರು. ಅತಿಯಾದ ವೇಗದ ಚಾಲನೆಯಿಂದಲೇ ಅಪಘಾತ ಸಂಭವಿಸಿದೆ ಎಂದು ಪೊಲೀಸರ ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಅಪಘಾತಕ್ಕೀಡಾದ ಎಕ್ಸ್ಯುವಿ ಕಾರು ಅಯನ್ ಅಲಿ ಎಂಬ ಯುವಕನಿಗೆ ಸೇರಿದೆ ಎಂಬುದು ತನಿಖೆಯಿಂದ ತಿಳಿದುಬಂದಿದೆ.



## ಮ.ಬೆಟ್ಟದಲ್ಲಿ 2 ಬಸ್‌ಗಳ ಡಿಕ್ಕಿ: 20 ಮಂದಿಗೆ ಗಾಯ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟದ ರಸ್ತೆಯ ತಿರುವಿನಲ್ಲಿ ಸರ್ಕಾರಿ ಮತ್ತು ಖಾಸಗಿ ಬಸ್ ನಡುವೆ ಅಪಘಾತ ಸಂಭವಿಸಿದೆ. ಅಪಘಾತದ ತೀವ್ರತೆಗೆ ಎರಡೂ ಬಸ್ ಗಳಲ್ಲಿದ್ದ 20ಕ್ಕೂ ಹೆಚ್ಚು ಪ್ರಯಾಣಿಕರು ಗಾಯಗೊಂಡಿದ್ದಾರೆ.ಮೈಸೂರಿನಿಂದ ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಿದ್ದ ಕೆಎಸ್ ಆರ್‌ಟಿಸಿ ಬಸ್ ಮತ್ತು ಎದುರಿನಿಂದ ಬಂದ ಖಾಸಗಿ ಬಸ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಮಹದೇಶ್ವರ ಬೆಟ್ಟದ ರಸ್ತೆಯ 4ನೇ ತಿರುವಿನಲ್ಲಿ ಅಪಘಾತ ಸಂಭವಿಸಿದೆ. ಹಲವು ಭಕ್ತರು ಗಂಭೀರವಾಗಿ ಗಾಯಗೊಂಡಿದ್ದಾರೆ. ಅವರನ್ನು ತಕ್ಷಣ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೆಲವರನ್ನು ಮೈಸೂರು ಅಥವಾ ಇತರ ಆಸ್ಪತ್ರೆಗಳಿಗೆ ವರ್ಗಾಯಿಸಲಾಗಿದೆ. ಜಾತ್ರೆಯ ಸಮಯದಲ್ಲಿ ಸಂಚಾರ ದಟ್ಟಣೆಯಿಂದ ಅಪಘಾತ ಸಂಭವಿಸಿರುವ ಸಾಧ್ಯತೆ ಇದೆ. ಚಾಲಕರ ಓವರ್ ಸ್ಪೀಡ್, ರಸ್ತೆಯ ಸ್ಥಿತಿ ಅಥವಾ ಇತರ ಅಂಶಗಳು ಪುಟ 2ಕ್ಕೆ

# ಮೇಕೆದಾಟುಗೆ ಕೇಂದ್ರ ಅನುಮತಿ ನೀಡಲಿ

## ಯೋಜನೆ ಶೀಘ್ರ ಜಾರಿಗೆ ರಾಜ್ಯ ಸರ್ಕಾರ ಸಿದ್ಧ: ಡಿಸಿಎಂ ಡಿ.ಕೆ.ಶಿವಕುಮಾರ್

**ಬೆಂಗಳೂರು:** ಮೇಕೆದಾಟು ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ ಅನುಮತಿ ನೀಡಿದರೆ ಕರ್ನಾಟಕ ಸರ್ಕಾರ ಯೋಜನೆಯನ್ನು ಶೀಘ್ರವೇ ಜಾರಿ ಮಾಡಲಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಶುಕ್ರವಾರ ನಡೆದ ಅಂತಾರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರ ಸಹಕಾರ ನೀಡುವ ಭರವಸೆ ಇದೆ ಎಂದು ಹೇಳಿದರು.

ಮೇಕೆದಾಟು ಯೋಜನೆ ಪರವಾಗಿ ಸುಪ್ರೀಂ ಕೋರ್ಟ್ ಈಚೆಗೆ ತೀರ್ಪು ನೀಡಿದೆ. ಆಮೂಲಕ ನಾವು ಈ ಯೋಜನೆ ಜಾರಿ ಮಾಡಲಿದ್ದೇವೆ. ಕೇಂದ್ರ ಸರ್ಕಾರದ ಅನುಮತಿಗೆ ಕಾಯುತ್ತಿದ್ದೇವೆ. ಈ ಯೋಜನೆಯಿಂದ ಬೆಂಗಳೂರು ಸೇರಿದಂತೆ ಈ ಭಾಗದ ಪ್ರದೇಶಗಳಿಗೆ ಕುಡಿಯುವ ನೀರು ಹಾಗೂ 400 ಮೆ.ವ್ಯಾಟ್



ವಿದ್ಯುತ್ ಉತ್ಪಾದನೆಗೆ ಸಹಕಾರಿಯಾಗಲಿದೆ ಎಂದು ವಿವರಿಸಿದರು.

ಬೆಂಗಳೂರಿನಲ್ಲೀಗ 1.50 ಕೋಟಿ ಜನಸಂಖ್ಯೆ ಇದೆ. ವಿಶ್ವದಾದ್ಯಂತ ಕೈಗಾರಿಕೋದ್ಯಮಿಗಳು ಬೆಂಗಳೂರಿನತ್ತ ಮುಖ ಮಾಡಿದ್ದಾರೆ. ಇಡೀ ವಿಶ್ವ ಭಾರತವನ್ನು ಬೆಂಗಳೂರು ಮೂಲಕ ನೋಡುತ್ತಿದೆ. ಇಲ್ಲಿರುವ ಹವಾಮಾನ ಹಾಗೂ ಸಂಸ್ಕೃತಿ ಎಲ್ಲರ ಪುಟ 2ಕ್ಕೆ

### ಅಣೆಕಟ್ಟು ಸುರಕ್ಷತೆಯಲ್ಲಿ ಕರ್ನಾಟಕ ಮಾದರಿ ಬೇಕಿದೆ

ಅಣೆಕಟ್ಟು ಸುರಕ್ಷತೆ ವಿಚಾರದಲ್ಲಿ ಕರ್ನಾಟಕವನ್ನು ದೇಶಕ್ಕೆ ಮಾದರಿ ರಾಜ್ಯವನ್ನಾಗಿ ಪುಟ 2ಕ್ಕೆ

# ರಾಜ್ಯ ಸರ್ಕಾರಕ್ಕೆ ಸಾವಿರ ದಿನ

## ಹಾವೇರಿಯಲ್ಲಿ ಇಂದು ಸಂಭ್ರಮಾಚರಣೆ ಕಾರ್ಯಕ್ರಮ

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ಸರ್ಕಾರ ಫೆ.14ಕ್ಕೆ ತನ್ನ ಆಡಳಿತದ 1 ಸಾವಿರ ದಿನಗಳನ್ನು ಪೂರೈಸಲಿದೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ಶನಿವಾರ ಸಂಭ್ರಮಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಸರ್ಕಾರದ ಸಾಧನೆಗೆ ಇದೊಂದು ಮೈಲುಗಲ್ಲು. ಸಿದ್ದರಾಮಯ್ಯ ಅವರು ಸುದೀರ್ಘ ಅವಧಿಯ ಮುಖ್ಯಮಂತ್ರಿಯಾಗಿ ದಾಖಲೆ ಬರೆದಿದ್ದಾರೆ. ಆದರೆ, ಹಾವೇರಿಯಲ್ಲಿ ಶನಿವಾರ ನಡೆಯುವುದು ಸಂಭ್ರಮಾಚರಣೆಯ ಕಾರ್ಯಕ್ರಮವಲ್ಲ. ಸಾವಿರ ದಿನಗಳ ಸಾರ್ಥಕ ಕೆಲಸವನ್ನು ಸಮರ್ಪಣೆ ಮಾಡುವ ಕಾರ್ಯಕ್ರಮವಾಗಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ.

ನಾವು ಮಾಡಿದ ಕೆಲಸಗಳ ವರದಿಯನ್ನು ಜನರಿಗೆ ಒಪ್ಪಿಸುವುದು ಕೂಡ ಪ್ರಜಾಪ್ರಭುತ್ವದ ಭಾಗ. ಜನರ ಅನಿಶ್ಚಿತತೆ ಕಳೆದು, ಅವರ ನೆಮ್ಮದಿಯ ಬದುಕಿಗೆ ಭೂ ಗ್ಯಾರಂಟಿ ಕೊಡುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಇದೊಂದು ಮೌನಕ್ರಾಂತಿ. ಅದನ್ನು ಸಂಭ್ರಮಿಸುವ ದಿನ ಇದಾಗಿದೆ ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.



ರಾಜ್ಯದಲ್ಲಿ 6,500 ವಸತಿ ಪ್ರದೇಶಗಳ ಜನರು ಈವರೆಗೆ ದಾಖಲೆ, ಹಕ್ಕುಪತ್ರಗಳಿಲ್ಲದೇ ಆತಂಕದಲ್ಲಿ ಬದುಕುತ್ತಿದ್ದರು. ಇಂತಹ ಜನರಿಗೆ ಶಾಶ್ವತ ಪರಿಹಾರ ಕೊಡುವ ನಿಟ್ಟಿನಲ್ಲಿ ನಮ್ಮ ಸರ್ಕಾರ 2016ರಲ್ಲಿ ಕಾನೂನು ತಿದ್ದುಪಡಿ ತಂದು ಕಂದಾಯ ಗ್ರಾಮಗಳನ್ನಾಗಿ ಘೋಷಿಸುವ ಅಭಿಯಾನ ಆರಂಭಿಸಿತು ಎಂದು ತಿಳಿಸಿದರು.

2017ರಿಂದ 2023ರ ನಡುವೆ ಈ ರೀತಿಯ

# ಸಿದ್ದು ಬಿಟ್ಟರೆ ಉಳಿದವರು ಸರ್ಕಾರ ನಡೆಸೋದು ಕಷ್ಟ!


**ಕೊಪ್ಪಳ:** ಸಿದ್ದರಾಮಯ್ಯ ಅವರಲ್ಲದೇ ಬೇರೆ ಯಾರು ಸಿಎಂ ಆದರೂ ಸರ್ಕಾರ ನಡೆಸುವುದು ಕಷ್ಟ ಎಂದು ಶಾಸಕ ಅಶೋಕ್ ಪಟ್ಟಣ್ ಅಭಿಪ್ರಾಯಪಟ್ಟರು.

ಮಾಧ್ಯಮಗಳ ಜೊತೆ ಅವರು ಮಾತನಾಡಿ, ಸಿಎಂ ಬದಲಾವಣೆ ಆಗಲ್ಲ ಅಂತ ಎಲ್ಲರೂ ಹೇಳಿದ್ದಾರೆ. ರಾಜೀನಾಮೆ ನೀಡುವಂತೆ ಹೈಕಮಾಂಡ್ ಹೇಳಿಲ್ಲ. ಡಿ.ಕೆ ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಚೆನ್ನಾಗಿದ್ದಾರೆ. ಜಗಳ ಆಗ್ತಾ ಇದೆ ಅಂಥ ಸೃಷ್ಟಿ ಮಾಡಲಾಗುತ್ತಿದೆ. ಇಕ್ಬಾಲ್ ಹುಸೇನ್ ಮೊದಲ ಬಾರಿ ಶಾಸಕರಾಗಿದ್ದಾರೆ. ಅವರಿಗೆ ಸ್ವಲ್ಪ ಪುಟ 2ಕ್ಕೆ

# ಆದಿವಾಸಿ ಬಲಿ ಪಡೆದಿದ್ದ ಪುಂಡಾನೆ ಕೊನೆಗೂ ಸೆರೆ

**ಮೈಸೂರು:** ಸರಗೂರು ಸಮೀಪದ ಮೊಳೆಯೂರು ವಲಯದ ಗ್ರಾಮದ ಸುತ್ತಮುತ್ತ ಉಪಟಳ ನೀಡುತ್ತಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದಿದ್ದಾರೆ.

ವಲಯದ ಮಟದಕಟ್ಟೆ ಬಳಿಯ ಮೂರುಗುಂಡಿ ಹಳ್ಳದಲ್ಲಿ ಸುಮಾರು 35 ವರ್ಷದ ಕಾಡಾನೆಯನ್ನು ಸೆರೆ ಹಿಡಿಯಲಾಗಿದೆ. ಸಾಕಾನೆಗಳ ಸಹಾಯದಿಂದ ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದಿದ್ದಾರೆ. ಇತ್ತೀಚೆಗೆ ಮೊಳೆಯೂರು ಗ್ರಾಮದಲ್ಲಿ ಒಬ್ಬ ಆದಿವಾಸಿಯನ್ನು ಈ ಆನೆ ಬಲಿ ಪಡೆದಿತ್ತು.




ಕಳೆದ ನಾಲ್ಕು ದಿನಗಳಿಂದ ಕಾಡಾನೆ ಸೆರೆಗೆ ಕಾರ್ಯಾಚರಣೆ ನಡೆಸಲಾಗಿತ್ತು. ಸಾಕಾನೆಗಳಾದ ಏಕಲವ್ಯ, ಸುಗ್ರೀವ, ಪ್ರಶಾಂತ, ಅಯ್ಯಪ್ಪ ಆನೆಗಳ ಪುಟ 2ಕ್ಕೆ

# ಅಣೆಕಟ್ಟು ಸುರಕ್ಷತೆ ರಾಷ್ಟ್ರೀಯ ಭದ್ರತಾ ವ್ಯಾಪ್ತಿ: ಸಿದ್ದರಾಮಯ್ಯ

**ಬೆಂಗಳೂರು:** ರಾಜಕೀಯ ಗಡಿಗಳನ್ನು ನೀರು ಗುರುತಿಸುವುದಿಲ್ಲ. ಸುರಕ್ಷತಾ ಮಾನದಂಡಗಳು ಸಹ ರಾಜಕೀಯ ಗಡಿಗಳನ್ನು ಹೊಂದಿರಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅಣೆಕಟ್ಟು ಸುರಕ್ಷತೆ ಕುರಿತ ಎರಡು ದಿನಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಣೆಕಟ್ಟು ಸುರಕ್ಷತೆಯು ಒಂದೇ ಇಲಾಖೆಯ ಜವಾಬ್ದಾರಿಯ. ಸಂಘಟಿತ ಸಾಂಸ್ಥಿಕ ಕ್ರಮದ ಅಗತ್ಯವಿರುವ ಹಂಚಿಕೆಯ ರಾಷ್ಟ್ರೀಯ ಬಾಧ್ಯತೆಯಾಗಿದೆ ಎಂದು ಹೇಳಿದರು.

ನಾವು ಹವಾಮಾನ–ಚಾಲಿತ ಜಲವಿಜ್ಞಾನದ ವಿಪರೀತಗಳನ್ನು ಎದುರಿಸುತ್ತಿದ್ದೇವೆ. ಭೂಕಂಪನದ ದುರ್ಬಲತೆಗಳು, ಜಲಾಶಯದ ಸೆಡಿಮೆಂಟೇಶನ್ ಮತ್ತು ವಯಸ್ಸಾದ ಮೂಲಸೌಕರ್ಯದ ಒತ್ತಡಗಳು ಸಂಕೀರ್ಣ, ಪರಸ್ಪರ ಸಂಬಂಧಿತ ಅಪಾಯುಗಳನ್ನು ಸೃಷ್ಟಿಸುತ್ತವೆ. ಅಣೆಕಟ್ಟು ಪುಟ 2ಕ್ಕೆ



# ಬೈರತಿಗೆ ಹೃದಯ ಪರೀಕ್ಷೆಗೆ ನ್ಯಾಯಾಧೀಶರ ಸೂಚನೆ

**ಬೆಂಗಳೂರು:** ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಬೈರತಿ ಬಸವರಾಜ್‌ಗೆ ಜಯದೇವ ಆಸ್ಪತ್ರೆಯಲ್ಲಿ ಹೃದಯ ಸಂಬಂಧಿ ಕಾಯಿಲೆಯ ತಪಾಸಣೆ ನಡೆಸಲು ನ್ಯಾಯಾಧೀಶರು ಶುಕ್ರವಾರ ಸೂಚನೆ ನೀಡಿದರು.


ವೈದ್ಯಕೀಯ ಪರೀಕ್ಷೆ ನಡೆಸಿದ ನಂತರ ನಾಳೆ ಹಾಜರುಪಡಿಸುವಂತೆ ತನಿಖಾಧಿಕಾರಿಯಾದ ಡಿವೈಎಸ್‌ಪಿ ಗೌತಮ್‌ಗೆ ನ್ಯಾಯಾಧೀಶರು ಸೂಚಿಸಿದರು. ಶನಿವಾರ ಪೊಲೀಸ್ ಕಸ್ಟಡಿಯೋ ಅಥವಾ ಜೈಲೋ ಎನ್ನುವುದು ನಿರ್ಧಾರವಾಗಲಿದೆ. ಸಿಐಡಿ ಮೇಲ್ವಿಚಾರಣೆಯಲ್ಲಿ ವೈದ್ಯಕೀಯ ತಪಾಸಣೆಗೆ ಬೈರತಿ ಬಸವರಾಜ್ ಅವರನ್ನು ಕರೆದೊಯ್ಯಲಾಗಿದೆ.

ಹೃದಯ ಸಂಬಂಧಿ ಕಾಯಿಲೆಗೆ ಬೈರತಿ ಬಸವರಾಜ್ ಚಿಕಿತ್ಸೆ ಪಡೆಯುತ್ತಿದ್ದಾರೆ. ಪುಟ 2ಕ್ಕೆ

# ಆರೋಗ್ಯಾಧಿಕಾರಿಗೆ ಅಬಕಾರಿ ಡಿಸಿ ಹುದ್ದೆ!

## ಸಿಎಂ ಸಿದ್ದರಾಮಯ್ಯ ಶಿಫಾರಸು: ಸುನಿಲ್ ಕುಮಾರ್ ಆರೋಪ

**ಬೆಂಗಳೂರು:** ಆರೋಗ್ಯ ಇಲಾಖೆಯ ಅಧಿಕಾರಿಯನ್ನು ಅಬಕಾರಿ ಇಲಾಖೆಗೆ ವರ್ಗಾಯಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ನೀಡಿದ್ದಾರೆ ಎಂದು ಶಾಸಕ ಸುನಿಲ್ ಕುಮಾರ್ ಆರೋಪಿಸಿದ್ದಾರೆ.



ಸಿಎಂ ಶಿಫಾರಸು ಪತ್ರ ಸಹಿತ ವಿವರವನ್ನು ಸುನಿಲ್ ಕುಮಾರ್ ಸಾಮಾಜಿಕ ಜಾಲತಾಣದಲ್ಲಿ ಹಾಕಿರುವ ಸುನಿಲ್ ಕುಮಾರ್ ಅವರು, ಸಿಎಂ ಸಿದ್ದರಾಮಯ್ಯ ಅವರ ಹಳಿ ತಪ್ಪಿದ ಆಡಳಿತಕ್ಕೆ ಇದು ಉದಾಹರಣೆ ಎಂದು ಟೀಕಿಸಿದ್ದಾರೆ.

ಮಂಡ್ಯ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯನ್ನು ಮೈಸೂರು ಗ್ರಾಮಾಂತರ ಜಿಲ್ಲೆ ಅಬಕಾರಿ ಡಿಸಿಯಾಗಿ ನಿಯೋಜಿಸುವಂತೆ ಸಿದ್ದರಾಮಯ್ಯ ಅವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ನಿರ್ದೇಶನ ನೀಡಿದ್ದಾರೆಂದು ಅವರು ಆರೋಪಿಸಿದ್ದಾರೆ.

ಇದು ಅಬಕಾರಿ ಹಾಗೂ ಆರೋಗ್ಯ ಇಲಾಖೆಯ ವೃಂದ ನಿಯಮಕ್ಕೆ ಸಂಪೂರ್ಣ ವಿರುದ್ಧವಾಗಿದೆ. ಸಿದ್ದರಾಮಯ್ಯನವರು ಇಂದ್ರೀಯ ವಶವಾಗಿ ಆಡಳಿತದ ಹದ ಕಳೆದುಕೊಂಡಿದ್ದಾರೆ ಎಂಬುದಕ್ಕೆ ಇದು ನಿದರ್ಶನವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಅಬಕಾರಿ ಇಲಾಖೆಯಲ್ಲಿ ನಡೆದಿರುವ 6,000 ಕೋಟಿ ರೂ.ಗೂ ಅಧಿಕ ಮೊತ್ತದ ಅವ್ಯವಹಾರಕ್ಕೂ ಹಾಗೂ ಕಿಕ್ ಬ್ಯಾಕ್ ದಂಧೆಯ ಹಿಂದೆ ಇಂಥ ಅವೈಜ್ಞಾನಿಕ ಹಾಗೂ ನಿಯಮ ಬಾಹಿರ ವರ್ಗಾವಣೆಯ ಸೂಚನೆಗಳು ಕೆಲಸ ಮಾಡಿರುವ ಸಾಧ್ಯತೆಗಳು ದಟ್ಟವಾಗಿದೆ. ಮುಖ್ಯಮಂತ್ರಿಗಳೇ ಆಯಕಟ್ಟಿನ ಇಲಾಖೆಗೆ ಮಾತ್ರ ನೀವು ಈ ರೀತಿ ಎರವಲು ಸೇವೆಯ ಶಿಫಾರಸು ಮಾಡುತ್ತೀರಾ? ಅಥವಾ ನಿಮ್ಮಿಂದ ಮಾಡಿಸುತ್ತಾರೆಯೇ ಎಂದು ಸುನೀಲ್ ಪ್ರಶ್ನಿಸಿದ್ದಾರೆ.

ಆರೋಗ್ಯ ಇಲಾಖೆಯಲ್ಲಿ ವೈದ್ಯರು ಇಲ್ಲದೇ ಸಾರ್ವಜನಿಕರು ನರಳುತ್ತಿರುವಾಗ ಜಿಲ್ಲಾ ವೈದ್ಯಾಧಿಕಾರಿ ಒಬ್ಬರನ್ನು ಅಬಕಾರಿ ಇಲಾಖೆಗೆ ನಿಯೋಜನೆ ಪುಟ 2ಕ್ಕೆ

# ಸಿದ್ದು ಸಿಎಂ ಸ್ಥಾನ ತ್ಯಜಿಸುವ ಪ್ರಶ್ನೆಯೇ ಇಲ್ಲ: ಎಚ್‌ಸಿಎಂ

**ಬೆಂಗಳೂರು:** ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ತೊರೆಯುವ ಪ್ರಶ್ನೆಯೇ ಇಲ್ಲ. ಅಲ್ಲದೆ, ನಾಯಕತ್ವ ವಿಚಾರದಲ್ಲಿ ಯಾವುದೇ ಚರ್ಚೆಗೆ ಅವಕಾಶವಿಲ್ಲ ಎಂದು ಸಚಿವ ಎಚ್.ಸಿ. ಮಹಾದೇವಪ್ಪ ಅವರು ಸಿಎಂ ಪರ ಬ್ಯಾಟಿಂಗ್ ಮಾಡಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಡುವೆ ಅಧಿಕಾರ ಹಂಚಿಕೆ ಬಗ್ಗೆ ಕೇಳಿದಾಗ, ಅಂತಹ ಯಾವುದೇ ಚರ್ಚೆಯಿಲ್ಲ. ಎಲ್ಲವೂ ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟಿದೆ ಎಂದು ಹೇಳಿದರು.

ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನ ತ್ಯಜಿಸಬೇಕಾಗಬಹುದು ಎಂಬ ಊಹಾಪೋಹಗಳ ಕುರಿತು ಪ್ರತಿಕ್ರಿಯಿಸಿದ ಮಹದೇವಪ್ಪ, ಆ ಪ್ರಶ್ನೆಯೇ ಪುಟ 2ಕ್ಕೆ

# ತ.ನಾಡು ಮಹಿಳೆಯರಿಗೆ ಭರ್ಜರಿ ಗಿಫ್ಟ್

## ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ತಲಾ 5 ಸಾವಿರ ವರ್ಗಾವಣೆ

**ಚನ್ನೈ:** ತಮಿಳುನಾಡು ವಿಧಾನಸಭಾ ಚುನಾವಣೆ ಸಮೀಸುತ್ತಿರುವ ಹಿನ್ನೆಲೆಯಲ್ಲಿ ಆಡಳಿತಾರೂಢ ಡಿಎಂಕೆ ಪಕ್ಷ ಮಹಿಳಾ ಮತದಾರರನ್ನು ಸೆಳೆಯಲು ಮಹತ್ವದ ಹೆಜ್ಜೆ ಇಟ್ಟಿದೆ. ಮಾಸಿಕ ಸಹಾಯಧನ ಯೋಜನೆಯಡಿ ತಲಾ 5 ಸಾವಿರ ಹಣವನ್ನು 1.31 ಕೋಟಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಮಾಡಿದೆ.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ಸರ್ಕಾರ ಮರಳಿ ಅಧಿಕಾರಕ್ಕೆ ಬಂದರೆ, ಮಹಿಳೆಯರಿಗೆ ನೀಡುತ್ತಿರುವ ಮಾಸಿಕ ಸಹಾಯಧನವನ್ನು 1 ಸಾವಿರದಿಂದ 2 ಸಾವಿರಕ್ಕೆ ಏರಿಕೆ ಮಾಡುವುದಾಗಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಘೋಷಿಸಿದ್ದಾರೆ.

ನಮ್ಮ ಸರ್ಕಾರ ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ಸೇರಿದಂತೆ 3 ತಿಂಗಳ ಸಹಾಯಧನವನ್ನು ತಲಾ 1 ಸಾವಿರದಂತೆ ಮತ್ತು ಬೇಸಿಗೆಯ ಖರ್ಚುಗಳನ್ನು ನಿಭಾಯಿಸಲು ಹೆಚ್ಚುವರಿಯಾಗಿ 2 ಸಾವಿರ ಸೇರಿದಂತೆ ಒಟ್ಟು 5 ಸಾವಿರ ಜಮಾ ಮಾಡುತ್ತಿದ್ದೇವೆ ಎಂದು ಸ್ಟಾಲಿನ್ ತಿಳಿಸಿದ್ದಾರೆ.

ಮುಂದಿನ ಕೆಲವು ತಿಂಗಳುಗಳವರೆಗೆ ಮಾಸಿಕ ಸಹಾಯಧನ ವಿತರಣೆಯನ್ನು ನಿಲ್ಲಿಸಲು ಬಿಜೆಪಿ ಮತ್ತು




ಎಐಎಡಿಎಂಕೆ ಪಿತೂರಿ ನಡೆಸುತ್ತಿವೆ ಎಂದು ವಿಧಾನಸಭಾ ಚುನಾವಣೆ ಮತ್ತು ಮಾದರಿ ನೀತಿ ಸಂಹಿತೆಯನ್ನು ಉಲ್ಲೇಖಿಸಿರುವ ಎಂ.ಕೆ.ಸ್ಟಾಲಿನ್ ಅವರು ವಿಡಿಯೊ ಮೂಲಕ ಆರೋಪಿಸಿದ್ದಾರೆ. ಪುಟ 2ಕ್ಕೆ

ಮೊದಲ ಪುಟದಿಂದ

## ಚಿನ್ನದ ಕೊಳಗ ಹಸ್ತಾಂತರ

ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಿ.ರೂಪ ಮತ್ತು ಅರಮನೆ ಆಡಳಿತ ಮಂಡಳಿ ಸಿಬ್ಬಂದಿ ಸಮ್ಮುಖದಲ್ಲಿ ಹಸ್ತಾಂತರ ಮಾಡಲಾಯಿತು. ನಾಳೆ ಎರಡನೇ ಶನಿವಾರ ರಜೆ ಇರುವ ಕಾರಣ ಒಂದು ದಿನ ಮುಂಚಿತವಾಗಿಯೇ ಹಸ್ತಾಂತರ ಮಾಡಲಾಯಿತು. ಮಹಾಶಿವರಾತ್ರಿ ಪ್ರಯುಕ್ತ ಭಾನುವಾರ ತ್ರಿನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜಾ ಕೈಂಕರ್ಯಗಳು ನಡೆಯಲಿವೆ. ಸೋಮವಾರ ಬೆ.11 ಗಂಟೆವರೆಗೂ ದರ್ಶನಕ್ಕೆ ಅವಕಾಶ ಇರುತ್ತದೆ. ಜಯ ಚಾಮರಾಜ ಒಡೆಯರ್ ಅವರಿಗೆ 1953ರಲ್ಲಿ ಗಂಡು ಸಂತಾನ ಪ್ರಾಪ್ತಿಯಾದ ಹಿನ್ನೆಲೆ ಅರಮನೆ ಆವರಣದಲ್ಲಿರುವ ತ್ರಿನೇಶ್ವರ ಸ್ವಾಮಿ ದೇವಸ್ಥಾನ, ನಂಜನಗೂಡಿನ ನಂಜುಂಡೇಶ್ವರ ಸ್ವಾಮಿ ದೇವಸ್ಥಾನ ಮತ್ತು ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನಗಳಿಗೆ 1954ರಲ್ಲಿ ಚಿನ್ನದ ಕೊಳಗದ ವಿಗ್ರಹಗಳನ್ನು ದೇಣಿಗೆಯಾಗಿ ನೀಡಿದ್ದರು. ತ್ರಿನೇಶ್ವರ ಸ್ವಾಮಿ ದೇವಸ್ಥಾನಕ್ಕೆ ನೀಡಿರುವ ಕೊಳಗ ಶುದ್ಧ ಅಪರಂಜಿ ಚಿನ್ನದಿಂದ ಮಾಡಿರುವ ಶಿವನು ಹಸನ್ಮುಖಿಯಾಗಿರುವ ಜಟೆಯಲ್ಲಿ ಗಂಗೆಯ ಧರಿಸಿರು ವಿಗ್ರಹ ನೋಡಲು ಮನಮೋಹಕವಾಗಿದೆ. ವರ್ಷದಲ್ಲಿ ಒಮ್ಮೆ ಮಾತ್ರ ಈ ಚಿನ್ನದ ಕೊಳಗವನ್ನು ಶಿವನಲಿಂಗಕ್ಕೆ ಧಾರಣೆ ಮಾಡಿ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗುತ್ತದೆ.

## ಕರ್ನಾಟಕ ಮಾದರಿ ಬೇಕಿದೆ

ಮಾಡಲು ಬದ್ಧವಾಗಿದೆ. ನಾವು ಅಣೆಕಟ್ಟುಗಳನ್ನು ನಿರ್ಮಿಸಿ, ರಕ್ಷಿಸಿ, ಮುನ್ನಡೆಸುತ್ತೇವೆ. ಎಲ್ಲರೂ ಜತೆಗೂಡಿ ಕೆಲಸ ಮಾಡುವುದು ಯಶಸ್ಸು. ಆ ಮೂಲಕ ನಮ್ಮ ಅಣೆಕಟ್ಟುಗಳನ್ನು ರಕ್ಷಣೆ ಮಾಡಿಕೊಂಡು ದೇಶ ಪ್ರಜ್ವಲಿಸುವಂತೆ ಮಾಡೋಣ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ನಮ್ಮಲ್ಲಿರುವ ಅನೇಕ ಅಣೆಕಟ್ಟುಗಳು 60–70 ವರ್ಷಗಳ ಹಳೆಯದಾಗಿವೆ. ಹೀಗಾಗಿ ಅಣೆಕಟ್ಟುಗಳ ಮೂಲಸೌಕರ್ಯ ದುರಸ್ತಿ ಕಾಮಗಾರಿಗಳು ಅಗತ್ಯವಾಗಿವೆ. ಇದರ ಜತೆಗೆ ಅನಿರೀಕ್ಷಿತ ಹವಾಮಾನ ವೈಪರಿತ್ಯ ನಮಗೆ ಹೆಚ್ಚಿನ ಸವಾಲೊಡ್ಡಿದೆ. ಅತಿಯಾದ ಮಳೆ, ಪ್ರವಾಹ ದೇಶದೆಲ್ಲೆಡೆ ಸಮಸ್ಯೆಯಾಗಿ ತಲೆದೋರಿವೆ. ನಮ್ಮ ಊಹೆಗಳ ಆಧಾರದ ಮೇಲೆ ಭವಿಷ್ಯದ ಅಣೆಕಟ್ಟುಗಳ ನಿರ್ವಹಣೆ ಅಸಾಧ್ಯ. ಎಲ್ಲಾ ಸವಾಲಿಗೆ ಪೂರ್ವ ತಯಾರಿ ಮಾಡಿಕೊಳ್ಳುವ ಆಯ್ಕೆಯಾಗಿ ಉಳಿದಿಲ್ಲ, ಅನಿವಾರ್ಯತೆಯಾಗಿದೆ ಎಂದು ಅವರು ತಿಳಿಸಿದರು.

## ಅಬಕಾರಿ ಡಿಸಿ ಹುದ್ದೆ!

ಮಾಡುವಂತೆ ನೀವೇ ನಿರ್ದೇಶನ ನೀಡುತ್ತೀರೆಂದರೆ ಅದೆಂತಹ ಒತ್ತಡ ಹಾಗೂ ವ್ಯಾಮೋಹ ನಿಮ್ಮನ್ನು ಕಾಡುತ್ತಿರಬಹುದು? ಅಥವಾ ಅಧಿಕಾರ ಹಸ್ತಾಂತರದ ಚಿಂತೆ ನಿಮ್ಮನ್ನು ಆವರಿಸಿದೆಯೋ ಎಂದು ವ್ಯಂಗ್ಯವಾಡಿದ್ದಾರೆ.

## ಮಹಿಳೆಯರಿಗೆ ಭರ್ಜರಿ ಗಿಫ್ಟ್

ಸತತ ಮೂರು ತಿಂಗಳವರೆಗೆ ಮಾಸಿಕ ಸಹಾಯಧನ ಜಮಾ ಆಗದಿದ್ದರೆ, ನೀವು ಎದುರಿಸುವ ಸಮಸ್ಯೆಗಳನ್ನು ನಾನು ಊಹಿಸಬಲ್ಲೆ. ಮಕ್ಕಳ ಪರೀಕ್ಷೆ, ಔಷಧಿಗೆ ಹಣ ಎಲ್ಲಿಂದ ಪಡೆಯುತ್ತೀರಿ? ಎಂದಿರುವ ಅವರು, ನಿಮಗೆ ಸಮಸ್ಯೆ ಆಗಬಾರದು ಎಂಬ ಉದ್ದೇಶದಿಂದ ನಾನು ನಿಮ್ಮ ಬ್ಯಾಂಕ್ ಖಾತೆಗಳಿಗೆ 5,000 ಜಮಾ ಮಾಡಲು ಆದೇಶಿಸಿದ್ದೇನೆ ಎಂದು ಸ್ಟಾಲಿನ್ ಹೇಳಿದ್ದಾರೆ.

## ಕೇಂದ್ರ ಅನುಮತಿ ನೀಡಲಿ

ಆಕರ್ಷಣೆಯಾಗಿದೆ. ಎಲ್ಲರೂ ಬೆಂಗಳೂರಿಗೆ ಬರಲು ಇಚ್ಛಿಸುತ್ತಿದ್ದಾರೆ. ಹೀಗಾಗಿ ಎಲ್ಲರಿಗೂ ನೀರು ಪೂರೈಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಹೀಗಾಗಿ ನಾವು ಸಮತೋಲಿತ ಅಣೆಕಟ್ಟು ನಿರ್ಮಾಣಕ್ಕೆ ಮುಂದಾಗಿದ್ದೇವೆ ಎಂದು ತಿಳಿಸಿದರು.

## ಶಿವರಾತ್ರಿ ನಂತರ ಶುಭ ಸುದ್ದಿ

ವಿಚಾರಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಹೈಕಮಾಂಡ್ ಜತೆಗೆ ಏನೆಲ್ಲ ಮಾತುಕತೆ ನಡೆಯಿತು ಎಂಬ ಪ್ರಶ್ನೆಗೆ ಚುಟುಕಾಗಿ ಪ್ರತಿಕ್ರಿಯಿಸಿದರು. ಅಜ್ಜಯ್ಯ ಅವರೊಂದಿಗೆ ವಿಶೇಷ ಸಂಬಂಧವಿದೆ. ಈ ಕ್ಷೇತ್ರದ ಶಕ್ತಿ ಎಲ್ಲರಿಗೂ ಗೊತ್ತಿದೆ. ಇದೇ ಶಕ್ತಿ, ಅಜ್ಜಯನ ಆಶೀರ್ವಾದದಿಂದ ನಮ್ಮ ಸರ್ಕಾರ ಸ್ಥಾಪನೆಯಾಗಿದೆ ಎಂದು ತಿಳಿಸಿದರು.

## ಸರ್ಕಾರ ನಡೆಸೋದು ಕಷ್ಟ!

ಮೆಚ್ಯೂರಿಟಿ ಕಡಿಮೆ ಇರುವ ಹಾಗೇ ಕಾಣಿಸುತ್ತಿದೆ. ಡಿ.ಕೆ ಶಿವಕುಮಾರ್ ಅವರಿಗೆ ಬಹಳ ಆತ್ಮೀಯರು. ಹೀಗಾಗಿ ಹೇಳುತ್ತಿದ್ದಾರೆ. ಆದರೆ ರಾಹುಲ್ ಗಾಂಧಿ ಹಾಗೂ ಎಲ್ಲ ಶಾಸಕರ ಭಾವನೆ ಸಿದ್ದರಾಮಯ್ಯ ಇರಲಿ ಅನ್ನೋದಾಗಿದೆ ಎಂದರು. ಎರಡೂವರೆ ವರ್ಷ ಒಳ್ಳೆಯ ಆಡಳಿತ ಕೊಟ್ಟಿದ್ದಾರೆ. ಹೀಗಾಗಿ ಅವರೇ ಇರಲಿ ಅನ್ನೋ ಭಾವನೆ ಇದೆ. 2028ಕ್ಕೆ ಡಿ.ಕೆ.ಶಿವಕುಮಾರ್ ಕ್ಲೇಮ್ ಮಾಡಲಿ ಎಂದು ಹೇಳಿದರು.

# 30 ವರ್ಷದ ಸೇವೆಗೆ ಗ್ರಾಮಸ್ಥರ ಅಭಿನಂದನೆ



ಮೈಸೂರು: ಕಳೆದ 30 ವರ್ಷಗಳಿಂದ ಹಂಚ್ಯಾಗ್ರಾಮ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿ ವಯೋನಿವೃತ್ತಿ ಹೊಂದಿದ ಬಸವರಾಜು ಅವರನ್ನು ಗ್ರಾಮಸ್ಥರು ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಟ್ಟರು.

ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಕೆ.ಸಣ್ಣಸ್ವಾಮಿ ಮಾತನಾಡಿ, 40 ವರ್ಷಗಳಿಂದ ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘ ಯಶಸ್ವಿಯಾಗಿ ಮುನ್ನಡೆಯುವಲ್ಲಿ ಹಾಗೂ ಸಂಘ ಯಾವುದೇ ಸಮಸ್ಯೆಗ ಎದುರಾಗದಂತೆ ಜನರಿಗೆ ನಿಗಧಿತ ಸಮಯಕ್ಕೆ ಪಡಿತರ ವಿತರಣೆ ಮಾಡುವಲ್ಲಿ ಇವರ ಪಾತ್ರ ಬಹಳ ದೊಡ್ಡದಾಗಿದೆ. ಅವರ ನಿವೃತ್ತಿ ಜೀವನ ಸುಖಕರವಾಗಿದ್ದು, ಅವರ ಸ್ಥಾನಕ್ಕೆ ಮುಂದೆ ಬರುವವರು ಇಂತಹದೇ ಸೇವೆ ಒದಗಿಸಲಿ ಎಂದರು.

ಹಂಚ್ಯಾಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಸಿ.ಕುಮಾರಸ್ವಾಮಿ ಮಾತನಾಡಿ, ಬಸವರಾಜು ಅವರು ಸೇವೆ ಸದಾಸ್ಮರಣೀಯ. ಸದರಿ ಕೃಷಿ ಪತ್ತಿನ ಸಹಕಾರ ಸಂಘ ಸ್ವಂತ ಕಟ್ಟಡ ಬೇಕೆಂಬ ಅವರ ಕನಸು ನನಸಾಗುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಮುಂದಿನ ದಿನಗಳಲ್ಲಿ ಸರ್ಕಾರದ ಹಾಗೂ ಸ್ಥಳೀಯರ ಸಹಕಾರದಿಂದ ಇದನ್ನು ಕಾರ್ಯರೂಪಕ್ಕೆ ತರಲಾಗುವುದೆಂದು ಬಸರಾಜು ಅವರ 40 ವರ್ಷದ ಕಾರ್ಯವೈಖರಿ ಸ್ಮರಿಸಿದರು.


ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರ ತಾಲ್ಲೂಕು ಸಮಿತಿ ಸದಸ್ಯ ಹಾಗೂ ಕಾಂಗ್ರೆಸ್ ಜಿಲ್ಲಾ ಪ್ರಚಾರ ಸಮಿತಿ ಸದಸ್ಯ ಎಚ್.ಡಿ.ಚೆನ್ನಯ್ಯ ಮಾತನಾಡಿ, ಅನೇಕ ಸಂಧರ್ಭಗಳಲ್ಲಿ ಬಸವರಾಜು ಅವರೊಟ್ಟಿಗೆ ಚರ್ಚೆ ಸಹ ಮಾಡಿ ಗಲಾಟೆ ಸಹ ಮಾಡಿದ್ದು, ಎಲ್ಲವನ್ನೂ ಶಾಂತ ರೀತಿಯಲ್ಲೇ ನಿಭಾಯಿಸಿದ್ದಾರೆ. ನಮ್ಮ ಚರ್ಚೆ ಸೊಸೈಟಿಯ ಅಭಿವೃದ್ಧಿ ದೃಷ್ಟಿಯಿಂದಲೇ ಹೊರತು ಬೇರೆ ಏನಿಲ್ಲಾ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಸಿ.ಬಸವರಾಜು, ಕೃಷಿಪತ್ತಿನ ಸಹಕಾರ ಸಂಘದ ಮೇಲ್ವಿಚಾರಕರಾದ ಗಿರೀಶ್, ಹಂಚ್ಯಾ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜೋಗಿಸಿದ್ದಯ್ಯ, ನಿರ್ದೇಶಕರಾದ ಎಸ್. ಕುಮಾರ್, ಎಚ್.ವಿ. ವೆಂಕಟೇಗೌಡ, ಸಾತಗಳ್ಳಿ ನಂಜಪ್ಪ, ಎಚ್.ಎಸ್.ಸ್ವಾಮಿಗೌಡ, ಶಂಕರಪ್ಪ, ಗಳಿಗರಹುಂಡಿ ಮಹದೇವ್, ಪಿ.ಲಕ್ಷ್ಮಿ ನಾರಾಯಣಚಾರಿ, ಗೌರಮ್ಮ, ಕಮಲಮ್ಮ, ಕಾಳಿಸಿದ್ದನಹುಂಡಿ ಮಹದೇವು, ರಮ್ಮನಹಳ್ಳಿ ಹಾಲಪ್ಪ, ಮುಖಂಡರಾದ ಯೋಗೀಶ್, ಸಹಕಾರ್ಯದರ್ಶಿ ನಾಗರಾಜ್, ಹೆಚ್ಚುವರಿ ಉಸ್ತುವಾರಿ ಶಿವಪ್ರಕಾಶ್ ಇನ್ನಿತರರು ಉಪಸ್ಥಿತರಿದ್ದರು.

### ವಯನಾಡ್ ಜಿಲ್ಲೆಯಲ್ಲಿ ಆದಿವಾಸಿ ಜಗತ್ತಿನ ಸ್ವಾವಲಂಬನೆಯ ಕಲ್ಪನೆಗಳು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ

# ಜಿಲ್ಲೆ ಪ್ರತಿನಿಧಿಸಿದ ಜಿಲ್ಲಾಧಿಕಾರಿ

## ಬುಡಕಟ್ಟು ಸಮುದಾಯಗಳ ವಾಸ್ತವ ಕುರಿತು ವಿವರಣೆ



ಚಾಮರಾಜನಗರ, ಕೇರಳದ ವಯನಾಡ್ ಜಿಲ್ಲೆಯ ಸುಲ್ತಾನ್ ಬತ್ತೇರಿಯಲ್ಲಿ ನಡೆದ ಮಹತ್ವದ ಆದಿವಾಸಿ ಜಗತ್ತಿನಲ್ಲಿ ಸ್ವಾವಲಂಬನೆಯ ಕಲ್ಪನೆಗಳು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಚಾಮರಾಜನಗರ ಜಿಲ್ಲೆಯನ್ನು ಜಿಲ್ಲಾಧಿಕಾರಿ ಶ್ರೀರೂಪ ಪ್ರತಿನಿಧಿಸಿದರು.

ವಯನಾಡಿನ ಸುಲ್ತಾನ್ ಬತ್ತೇರಿಯಲ್ಲಿ ನಡೆದ ಮೂರು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿದ ಚಾಮರಾಜನಗರದ ಜಿಲ್ಲಾಧಿಕಾರಿ ಶ್ರೀರೂಪ ಅವರು ಗಡಿ ಪ್ರದೇಶದ ಆದಿವಾಸಿ ಸಮುದಾಯಗಳ ಕುರಿತು ಚರ್ಚೆಗಳಿಗೆ ಮೀಸಲಾಗಿರುವ ರಾಷ್ಟ್ರೀಯ ವೇದಿಕೆಯಲ್ಲಿ ಚಾಮರಾಜನಗರ ಜಿಲ್ಲೆಯನ್ನು ಪ್ರತಿನಿಧಿಸಿದರು. ಕೇರಳದ ವಯನಾಡು, ತಮಿಳುನಾಡಿನ ನೀಲಗಿರಿ ಮತ್ತು ಕರ್ನಾಟಕ ರಾಜ್ಯದ ಚಾಮರಾಜನಗರ ಸಂಗಮದಲ್ಲಿ ನಡೆದ ಈ ವಿಚಾರ ಸಂಕಿರಣವು, ವಿದ್ವಾಂಸರು, ಸಂಶೋಧಕರು, ನೀತಿ ನಿರೂಪಕರು ಮತ್ತು ಆಡಳಿತಗಾರರನ್ನು ಒಟ್ಟುಗೂಡಿಸಿ ಸ್ಥಳೀಯ ಸಮುದಾಯಗಳು, ಆಡಳಿತ ಮತ್ತು ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳ ಕುರಿತು ಚರ್ಚಿಸಿತು.

ವಿಚಾರ ಸಂಕಿರಣ ಉದ್ಘಾಟಿಸಿದ ಜಿಲ್ಲಾಧಿಕಾರಿ ಶ್ರೀರೂಪ ಮಾತನಾಡಿ ಚಾಮರಾಜನಗರ ಜಿಲ್ಲೆಯ ಬುಡಕಟ್ಟು ಸಮುದಾಯಗಳಾದ ಸೋಲಿಗ, ಜೇನು ಕುರುಬ ಮತ್ತು ಕಾಡು ಕುರುಬ ಜನರ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು, ಶೈಕ್ಷಣಿಕ ಸವಾಲುಗಳು, ಜೀವನೋಪಾಯದ ಕಾಳಜಿಗಳು ಮತ್ತು ಅರಣ್ಯ ಅವಲಂಬಿತ ಪ್ರದೇಶಗಳಲ್ಲಿ ವಾಸಿಸುವ ವಾಸ್ತವ ಕುರಿತು ವ್ಯಾಪಕವಾಗಿ ವಿವರಿಸಿದರು.

ಆದಿವಾಸಿ ಅಭಿವೃದ್ಧಿಯ ಕುರಿತು ಅರ್ಥಪೂರ್ಣ ಚರ್ಚೆಗಳು ಕ್ಷೇತ್ರದಲ್ಲಿ ವಾಸ್ತವವಾಗಿ ಅನುಷ್ಠಾನವಾಗಬೇಕಿದೆ. ಆಡಳಿತಾತ್ಮಕ ಅನುಭವ ಮತ್ತು ಸಮುದಾಯದ ಧ್ವನಿಗಳಿಂದ ರೂಪುಗೊಳ್ಳಬೇಕು ಎಂದು ಹೇಳಿದರು. ರಾಷ್ಟ್ರೀಯ ಮಟ್ಟದ ಸಂವಾದದ ಮಹತ್ವವನ್ನು ಎತ್ತಿ ತೋರಿಸಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಇಂತಹ ವಿಚಾರ ಸಂಕಿರಣಗಳು ಅಂತರ–ಜಿಲ್ಲಾ ಸಹಯೋಗ, ಜ್ಞಾನ ಹಂಚಿಕೆ ಮತ್ತು ನೀತಿ ಸೂಕ್ಷ್ಮತೆಯನ್ನು ಬೆಳೆಸುತ್ತವೆ. ಅಂತಿಮವಾಗಿ ರಾಜ್ಯ ಗಡಿಗಳಲ್ಲಿ ಬುಡಕಟ್ಟು ಸಮುದಾಯಗಳ ಸಬಲೀಕರಣ ಮತ್ತು ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡುತ್ತವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ರಾಷ್ಟ್ರೀಯ ವಿಚಾರ ಸಂಕಿರಣದ ಸಾರಾಂಶಗಳನ್ನೊಳಗೊಂಡ ಬುಕ್ ಆಫ್ ಅಬ್ಸ್ ಟ್ರಾಕ್ಸ್ ಪುಸ್ತಕವನ್ನು ಬಿಡುಗಡೆ ಮಾಡಿದರು. ಇದು ಚರ್ಚೆಗಳ ಶೈಕ್ಷಣಿಕ ಅಡಿಪಾಯವನ್ನು ಗುರುತಿಸುತ್ತದೆ ಮತ್ತು ಸಂಶೋಧನೆ–ಬೆಂಬಲಿತ ನೀತಿ ಚರ್ಚೆಗಳ ಮಹತ್ವವನ್ನು ತಿಳಿಸಲಿದೆ. ಚಾಮರಾಜನಗರ ಜಿಲ್ಲಾಡಳಿತವು ಸಹಯೋಗ ಮತ್ತು ಸಾಂಸ್ಕೃತಿಕವಾಗಿ ಒಟ್ಟುಗೂಡುವಿಕೆಯಿಂದ ಬುಡಕಟ್ಟು ಸಮುದಾಯಗಳ ಸಮಗ್ರ ಆಡಳಿತ ಮತ್ತು ಅಭಿವೃದ್ಧಿಗೆ ತನ್ನ ಬದ್ಧತೆಯನ್ನು ಪುನರುಚ್ಚರಿಸಿತು. ಸುಲ್ತಾನ್ ಬತ್ತೇರಿಯ ಶಾಸಕರಾದ ಐ.ಸಿ. ಬಾಲಕೃಷ್ಣನ್, ಮುನ್ಸಿಪಾಲ್ಟಿ ಅಧ್ಯಕ್ಷರಾದ ರಸೀನ ಅಬ್ದುಲ್ ಖಾದರ್, ಬೆಂಗಳೂರಿನ ಎನ್.ಎಲ್.ಎಸ್.ಐ.ಯು ನ ಸಾಮಾಜಿಕ ಒಳಗೊಳ್ಳುವಿಕೆಯ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಸೋನಿ ಪೆಲ್ಲಿಸ್ಸೆರಿ, ಸುಲ್ತಾನ್ ಬತ್ತೇರಿಯ ಸೆಂಟ್ ಮೇರಿಸ್ ಕಾಲೇಜಿನ ವ್ಯವಸ್ಥಾಪಕರಾದ ಡಾ. ಜೀವರ್ಗಿಸ್ ಮಾರ್ ಬಾರ್ನಬಾಸ್, ಸ್ಥಾನಿಕ ವ್ಯವಸ್ಥಾಪಕರಾದ ರೆ. ಬೇಬಿಜಾನ್, ಬುಡಕಟ್ಟು ಅಭಿವೃದ್ಧಿ ಅಧಿಕಾರಿ ಕೆ.ಕೆ. ಮೋಹನ್ ದಾಸ್, ಪ್ರೊ. ವರ್ಗೀನಿಯಸ್ ಕ್ಲಾಕ್ಷ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮೊದಲ ಪುಟದಿಂದ

## ಪುಂಡಾನೆ ಕೊನೆಗೂ ಸೆರೆ

ಮೂಲಕ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದವು. ಕಾಡಾನೆ ಸೆರೆಹಿಡಿದು ರಾಂಪುರ ಆನೆ ಶಿಬಿರಕ್ಕೆ ಕಳುಹಿಸಲಾಗಿದೆ.

## 20 ಮಂದಿಗೆ ಗಾಯ

**ಕಾರಣವಾಗಿರಬಹುದು. ಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯ ಅಧಿಕಾರಿಗಳು ಘಟನೆ ಸ್ಥಳ ತೆರಳಿ ಪರಿಶೀಲನೆ ನಡೆಸಿದರು. ಈ ಹಿಂದೆಯೂ ಇದೇ ರಸ್ತೆಯಲ್ಲಿ ಹಲವು ಅಪಘಾತಗಳು ನಡೆದಿವೆ.**

## ಭದ್ರತಾ ವ್ಯಾಪ್ತಿ

ಸುರಕ್ಷತೆಯು ಇನ್ನು ಮುಂದೆ ತಾಂತ್ರಿಕ ಚಿಂತನೆಯಲ್ಲ. ಇದು ರಾಷ್ಟ್ರೀಯ ಭದ್ರತಾ ಕಡ್ಡಾಯವಾಗಿದೆ. ಜಲ ಆಡಳಿತದಲ್ಲಿ ಸಹಕಾರಿ ಒಕ್ಕೂಟದ ಅಗತ್ಯ ಎಂದು ಅವರು ಹೇಳಿದರು.

ಕರ್ನಾಟಕ 231 ನಿರ್ದಿಷ್ಟ ಅಣೆಕಟ್ಟುಗಳನ್ನು ಹೊಂದಿದೆ. ದೇಶದಲ್ಲಿ ಆರನೇ ಸ್ಥಾನದಲ್ಲಿದೆ. ಈ ಅಣೆಕಟ್ಟುಗಳಲ್ಲಿ ಸುಮಾರು 70 ಪ್ರತಿಶತ 25 ವರ್ಷಗಳಿಗಿಂತ ಹಳೆಯದಾಗಿವೆ. ವ್ಯವಸ್ಥಿತ ಸುರಕ್ಷತಾ ಮೌಲ್ಯಮಾಪನ, ಆಧುನೀಕರಣ ಮತ್ತು ಅಪಾಯ–ಮಾಹಿತಿ ಕಾರ್ಯಾಚರಣೆಯ ತುರ್ತು ಅಗತ್ಯವನ್ನು ಒತ್ತಿಹೇಳುತ್ತದೆ ಎಂದು ಅವರು ಹೇಳಿದರು.

## ಪ್ರಶ್ನೆಯೇ ಇಲ್ಲ

ಉದ್ಭವಿಸುವುದಿಲ್ಲ. ಹೈಕಮಾಂಡ್ ಏನು ತೀರ್ಮಾನಿಸಿದರೂ ಅದನ್ನು ಅನುಸರಿಸುವುದಾಗಿ ಸಿದ್ದರಾಮಯ್ಯ ಈಗಾಗಲೇ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು.

## ಹೃದಯ ಪರೀಕ್ಷೆಗೆ ಸೂಚನೆ

ಅವರಿಗೆ ಸ್ಟಂಟ್ ಹಾಕಿಸಲಾಗಿದೆ. ಒತ್ತಡ ಹೆಚ್ಚಾದರೆ ಹೃದಯಾಘಾತ ಆಗುವ ಸಾಧ್ಯತೆ ಹಿನ್ನೆಲೆಯಲ್ಲಿ ಪರಿಶೀಲನೆ ನಡೆಸಲಾಗಿದೆ. ಹೀಗಾಗಿ ಬೈರತಿ ಬಸವರಾಜ್ ಅವರನ್ನು ಸಿಐಡಿ ಕಸ್ಟಡಿಗೆ ನೀಡದೆ ವೈದ್ಯಕೀಯ ಪರೀಕ್ಷೆಗೆ ಸೂಚನೆ ನೀಡಲಾಯಿತು.

# ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ತಡೆಗೆ ಆಗ್ರಹ



ಮೈಸೂರು: ದೇಶದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್ಐಆರ್) ಯಿಂದಾಗಿ ಆದಿವಾಸಿಗಳು, ಬುಡಕಟ್ಟು ಜನರು, ಅಲ್ಪಸಂಖ್ಯಾತರು, ಕೂಲಿ ಕಾರ್ಮಿಕರು ಈ ದೇಶದಲ್ಲಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳಲಿದ್ದಾರೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕಳವಳ ವ್ಯಕ್ತಪಡಿಸಿದರು.

ಈ ಸಂಬಂಧ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನ ನರೇಂದ್ರ ಮೋದಿ ಅವರು ರಾಷ್ಟ್ರೀಯ ಚುನಾವಣಾ ಆಯೋಗವನ್ನು ಮುಂದಿಟ್ಟುಕೊಂಡು ಈ ದೇಶದ 100 ಕೋಟಿ ಮರದಾರರ ವಿರುದ್ಧ ಎಫ್ಐಆರ್ ದಾಖಲಿಸುತ್ತಿದ್ದಾರೆ. ತಮಗೆ ಓಟು ಹಾಕಿದ ಜನರನ್ನೇ ಅನುಮಾನದಿಂದ ಕಾಣುತ್ತಿರುವುದು ಪ್ರಜಾಪ್ರಭುತ್ವದ ದುರಂತ. ಹೀಗಾಗಿ ರಾಜ್ಯ ಸರ್ಕಾರ ಸಹಾ ಕೇರಳ ಹಾಗೂ ಪಶ್ಚಿಮ ಬಂಗಾಳ ಸರ್ಕಾರಗಳ ರೀತಿ ಅದರ ವಿರುದ್ಧ ನಿರ್ಣಯ ಅಂಗೀಕರಿಸಬೇಕು ಎಂದು ನುಡಿದರು.

ಎಸ್ಐಆರ್ ಮೂಲಕ ದೇಶದ ಜನರ ಪೌರತ್ವ ಪ್ರಶ್ನಿಸುವ ಉದ್ದೇಶದಿಂದ ಚುನಾವಣಾ ಆಯೋಗ ಕೇಳಿರುವ ದಾಖಲೆಗಳನ್ನು ಕೂಲಿಕಾರ್ಮಿಕರು, ಅಲ್ಪಸಂಖ್ಯಾರರು, ಆದಿವಾಸಿಗಳು, ದಲಿತರು ನೀಡಲು ಸಾಧ್ಯವಿಲ್ಲ. 2002ರ ಮತದಾರರ ಪಟ್ಟಿಯನ್ನು ಮಾನದಂಡವಾಗಿಟ್ಟುಕೊಂಡು ಪರಿಷ್ಕರಣಗೆ ಮುಂದಾಗಿರುವುದು ಬಡವರನ್ನು, ಕೂಲಿಕಾರ್ಮಿಕರನ್ನು, ಅಲ್ಪಸಂಖ್ಯಾತರನ್ನು ಪ್ರಜಾಪ್ರಭುತ್ವದ ವ್ಯವಸ್ಥೆಯಿಂದ ದೂರವಿಡುವ ಹುನ್ನಾರವಾಗಿದೆ ಎಂದು ತಿಳಿಸಿದರು. ಈಗಾಗಲೇ ಪಶ್ಚಿಮ ಬಂಗಾಲ, ತಮಿಳುನಾ ಡಿನಲ್ಲಿ ಎಸ್ಐಆರ್ ಮೂಲಕ ಲಕ್ಷಾಂತರ ಜನರನ್ನು ಮತದಾನದ ಹಕ್ಕಿನಿಂದ ದೂರ ಉಳಿಸಲಾಗಿದ್ದು, ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡುವ ಅಧಿಕಾರವನ್ನು ಜನಸಾಮಾನ್ಯರ ಕೈಗೆ ಕೊಟ್ಟಿದ್ದು, ಇದನ್ನೇ ಬಳಸಿಕೊಂಡು ಗುಜರಾಜ್‌ನಲ್ಲಿ ಸಾವಿರಾರು ಮುಸ್ಲಿಂ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಸುಮಾರು 250 ಬಿಜೆಪಿ ಕಾರ್ಯಕರ್ತರು ಸುಮಾರು 15 ಸಾವಿರ ಮುಸ್ಲಿಮರ ಹೆಸರು ಪಟ್ಟಿಯಿಂದ ಕೈಬಿಡುವಂತೆ ಅರ್ಜಿ ಸಲ್ಲಿಸಿದ್ದಾರೆ.ಈ ರೀತಿ ಚುನಾವಣಾ ಆಯೋಗ ತನ್ನ ಕೆಲಸ ಮಾಡುವುದರ ಬದಲು ಈ ರೀತಿ ದೇಶದ ಜನರ ಮೇಲೆ ಪ್ರಹಾರ ಮಾಡುವ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್‌ಡಿಪಿಐ ಮುಖಂಡರಾದ ಅಮ್ಜದ್ ಖಾನ್, ಶಫೀ, ನಗರಪಾಲಿಕೆ ಮಾಜಿ ಸದಸ್ಯ ಸ್ವಾಮಿ ಮತ್ತಿತರರು ಹಾಜರಿದ್ದರು.

# ಕೆಂಪಯ್ಯನಪಾಳ್ಯದಲ್ಲಿ ಕೆರೆ ಹೂಳೆತ್ತುವ ಕಾಮಗಾರಿಗೆ ಚಾಲನೆ



ರಾಮನಗರ: ಅಂತರ್ಜಲ ವೃದ್ಧಿಗಾಗಿ ಟೊಯೋಡಾ ಗೋಸಾಯಿ ಪ್ರೈ.ಲಿ. ಸಂಸ್ಥೆ ಕೆರೆಯಲ್ಲಿ ಹೂಳು ತೆಗೆಯುತ್ತಿರುವುದು ಶ್ಲಾಘನೀಯ ಕೆಲಸ ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್.ನಟರಾಜು ಅಭಿನಿಂದಿಸಿದರು.

ತಾಲ್ಲೂಕಿನ ಬಿಡದಿ ಹೋಬಳಿ ಕೆಂಪಯ್ಯನಪಾಳ್ಯ ಗ್ರಾಮದ ಕೆರೆಯನ್ನು ಟೊಯೋಡಾ ಗೋಸಾಯಿ ಪ್ರೈ.ಲಿ ಸಂಸ್ಥೆ ತನ್ನ ಸಿ.ಎಸ್.ಆರ್. ನಿಧಿಯಲ್ಲಿ ಅಭಿವೃದ್ಧಿ ಪಡಿಸಲು ಆರಂಭಿಸಿದ ಕಾಮಗಾರಿ ವೇಳೆ ಅವರು ಮಾತನಾಡಿದರು.

ಸಂಸ್ಥೆ ಪ್ರತಿ ವರ್ಷ ಒಂದು ಕೆರೆಯ ಹೂಳು ತೆಗೆಯುವುದು, ಏರಿ ದುರಸ್ಥಿ ಪಡಿಸುವ ಮೂಲಕ ನೀರು ಸಂಗ್ರಹಕ್ಕೆ ಮುಂದಾಗಿದೆ. ಸಿ.ಎಸ್.ಆರ್ ನಿಧಿಯನ್ನು ಸದ್ವಿನಿಯೋಗ ಪಡಿಸುತ್ತಿದೆ. ಸಮಾಜಕ್ಕೆ ಈ ಸಂಸ್ಥೆ ಕೊಡುಗೆ ನೀಡುತ್ತಿದೆ ಎಂದರು.

ಬನ್ನಿಕುಪ್ಪೆ (ಬಿ) ಪಂಚಾಯ್ತಿ ವ್ಯಾಪ್ತಿಯಲ್ಲಿ ಈಗಾಗಲೆ ಬನ್ನಿಕುಪ್ಪೆ (ಬಿ) ಗ್ರಾಮ, ಗಾಣಕಲ್, ಮುತ್ತುರಾಯನಪುರ ಹಾಗೂ ಕೆಂಪಯ್ಯನಪಾಳ್ಯ ಗ್ರಾಮಗಳಲ್ಲಿ ಹೈಮಾಸ್ಟ್ ಲೈಟುಗಳನ್ನು ಅಳವಡಿಸಿದೆ. ರೈತರಿಗೆ ಉಪಯುಕ್ತವಾಗುವ 5000 ಸಸಿಗಳನ್ನು ವಿತರಿಸಿದ್ದಾರೆ. ಹಳ್ಳಿಗಳ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳಣ್ನು ಕಲ್ಪಿಸುವ ಉದ್ದೇಶದಲ್ಲಿ ಸಂಸ್ಥೆಯ ಕಾರ್ಯಕ್ಕೆ ಗ್ರಾಮಸ್ಥರು ಸಹ ಧನ್ಯವಾದ ತಿಳಿಸಿದ್ದಾರೆ ಎಂದರು.

ಕೆಂಪಯ್ಯನಪಾಳ್ಯ ಕರೆಯ ಹೂಳೆತ್ತುವ ಕಾರ್ಯದ ಪೂಜಾ ಕಾರ್ಯಕ್ರಮದ ವೇಳೆ ಟೊಯೋಡಾ ಗೋಸಾಯಿ ಸಂಸ್ಥೆಯ ಉಪವ್ಯವಸ್ಥಾಪಕ ಮಂಜುನಾಥ್, ಮಾನವ ಸಂಪನ್ಮೂಲ ಅಧಿಕಾರಿ ನಾಗಮಣಿ ದಯಾನಂದ, ಗ್ರಾಮದ ಮುತ್ತುರಾಜು, ಮಹದೇವಯ್ಯ, ಬೆಟ್ಟಪ್ಪ, ಗೋವಿಂದರಾಜು, ಸತೀಶ್.ವಿ, ನವೀನ್, ಮಹೇಶ್, ಅಂಜನ್ ಮುಂತಾದವರು ಹಾಜರಿದ್ದರು.

ಮೊದಲ ಪುಟದಿಂದ

## ರಾಜ್ಯ ಸರ್ಕಾರಕ್ಕೆ ಸಾವಿರ ದಿನ

1 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ಕೊಟ್ಟು, 1,557 ಕಂದಾಯ ಗ್ರಾಮಗಳನ್ನು ಘೋಷಿಸಲಾಗಿತ್ತು. ಆರು ವರ್ಷಗಳಲ್ಲಿ 1 ಲಕ್ಷ ಕುಟುಂಬಕ್ಕೆ ಹಕ್ಕುಪತ್ರ ನೀಡಲಾಗಿತ್ತು. ಅದರಲ್ಲಿ ಇನ್ನೂ 3.50 ಲಕ್ಷ ಕುಟುಂಬಗಳಿಗೆ ಈ ಸೌಲಭ್ಯ ಒದಗಿಸುವ ಕೆಲಸವನ್ನು ಹಿಂದಿನ ಸರ್ಕಾರ ಮಾಡಲಿಲ್ಲ ಎಂದು ದೂರಿದರು. 2023ರಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಇದನ್ನು ಆದ್ಯತೆಯಾಗಿ ತೆಗೆದುಕೊಂಡು ಎರಡೂವರೆ ವರ್ಷಗಳಲ್ಲಿ 2.20 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ಒದಗಿಸಿದೆ. ಹೊಸಪೇಟೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ 1.10 ಲಕ್ಷ ಹಕ್ಕುಪತ್ರಗಳನ್ನು ನೀಡಲಾಗಿತ್ತು. ಫೆ.14ರಂದು ನಡೆಯುವ ಕಾರ್ಯಕ್ರಮದಲ್ಲಿ 1.06 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ವಿತರಿಸುವ ಮೂಲಕ ಅವರ ದಶಕಗಳ ಸಮಸ್ಯೆಗೆ ಶಾಶ್ವತ ಪರಿಹಾರ ನೀಡಿ, ಬದುಕಿಗೆ ಭೂ ಗ್ಯಾರಂಟಿ ಕೊಡುವ ಕೆಲಸವನ್ನು ನಮ್ಮ ಸರ್ಕಾರ ಮಾಡಲಿದೆ ಎಂದು ತಿಳಿಸಿದರು. ಸಿಎಂ ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ನನಗೆ ಆ ವಿಚಾರದ ಬಗ್ಗೆ ಮಾತನಾಡಲು ಅಪೇಕ್ಷೆ ಇಲ್ಲ. ಆದರೆ, ಕಾಲಕಾಲಕ್ಕೆ ಏನೇನು ಆಗಬೇಕೋ ಅದು ಆಗುತ್ತದೆ ಎಂದು ಹೇಳಿದರು.

### ಮಹಾರಾಜ ಕಾಲೇಜು ಮೈದಾನದಲ್ಲಿ ಶಾಸಕರ ಜಂಟಿ ಸುದ್ದಿಗೋಷ್ಠಿ

# ಇಂದು ಲಕ್ಷ ಕಂಠಗಳ ಹನುಮಾನ್ ಚಾಲೀಸಾ



ಮೈಸೂರು: ಲೋಕ ಕಲ್ಯಾಣದ ಸಂಕಲ್ಪದೊಂದಿಗೆ ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಶನಿವಾರ(ಇಂದು) ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯಲಿರುವ ಐತಿಹಾಸಿಕ 'ಸಾಮೂಹಿಕ ಹನುಮಾನ್ ಚಾಲೀಸಾ ಪಾರಾಯಣ ಮಹಾಯಜ್ಞ'ಕ್ಕೆ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ.

ರೈತರು, ಸೈನಿಕರು ಹಾಗೂ ಜನಸಾಮಾನ್ಯರ ಒಳಿತಿಗಾಗಿ ಹಲವಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಈ ಪಾರಾಯಣದಲ್ಲಿ ಈ ಬಾರಿ ಅಂದಾಜು 75 ಸಾವಿರದಿಂದ 1 ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಇದಕ್ಕಾಗಿ ಮೈದಾನದಲ್ಲಿ ಬೃಹತ್ ಶಾಮಿಯಾನ ಹಾಕಲಾಗಿದ್ದು, ಗಣ್ಯರು, ಸ್ವಾಮೀಜಿಗಳು ಮತ್ತು ಸಂತರಿಗಾಗಿ ವಿಶೇಷ ವೇದಿಕೆ ನಿರ್ಮಿಸಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಭಕ್ತರಿಗಾಗಿ ಕುಡಿಯುವ ನೀರು, ಪ್ರಸಾದ ಹಾಗೂ ಹನುಮದ್ ರಕ್ಷೆ ನೀಡಲು ವ್ಯವಸ್ಥೆ ಮಾಡಲಾಗಿದೆ. ಸುಮಾರು 40 ರಿಂದ 50 ಸಾವಿರ ಭಕ್ತರು ಕುಳಿತು ಪಾರಾಯಣ ಮಾಡಲು ಆಸನದ ವ್ಯವಸ್ಥೆ ಕಲ್ಪಿಸಲಾಗಿದೆ. ತುರ್ತು ಸಂದರ್ಭಕ್ಕಾಗಿ ತಾತ್ಕಾಲಿಕ ಶೌಚಾಲಯಗಳು ಮತ್ತು ವೈದ್ಯಕೀಯ ಸೇವಾ ಘಟಕಗಳನ್ನು ತೆರೆಯಲಾಗಿದೆ. ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, "ಶನಿವಾರ ಮತ್ತು ಭಾನುವಾರ ಮೈಸೂರಿನಲ್ಲಿ ಐತಿಹಾಸಿಕ ಕಾರ್ಯಕ್ರಮ ನಡೆಯಲಿದ್ದು, ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾಗಲಿದ್ದಾರೆ. ಸಂಗೀತದ ಮೂಲಕ ರೋಗಗಳನ್ನು ವೈಜ್ಞಾನಿಕವಾಗಿ ಗುಣಪಡಿಸಬಹುದೆಂದು ಜಗತ್ತಿಗೆ ತೋರಿಸಿಕೊಟ್ಟ ಕೀರ್ತಿ ಶ್ರೀಗಳದ್ದು. ಅವರ ನೇತೃತ್ವದಲ್ಲಿ ನಡೆಯುವ ಈ ಪಾರಾಯಣ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ ಎಂದರು.

ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, "ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರು ಸದಾ ಆರ್ತರ ಪರವಾಗಿ ಯೋಚಿಸುತ್ತಾರೆ. ಭಕ್ತರನ್ನು ಭಕ್ತಿಮಾರ್ಗದ ಕಡೆಗೆ ಕೊಂಡೊಯ್ಯುತ್ತಿರುವ ಶ್ರೀಗಳ ಸಾನ್ನಿಧ್ಯದಲ್ಲಿ ಪಾರಾಯಣದ ಜೊತೆಗೆ ಶಿವ ಪಾರ್ವತಿ ಕಲ್ಯಾಣ ಕೂಡ ನಡೆಯಲಿದೆ" ಎಂದು ತಿಳಿಸಿದರು. ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್ ಮಾತನಾಡಿ, "2016ರ ನಂತರ ಇದು ಎರಡನೇ ಬಾರಿಗೆ ನಡೆಯುತ್ತಿರುವ ಬೃಹತ್ ಪಾರಾಯಣವಾಗಿದೆ. ನಗರದ ಜನತೆ ಸ್ವಯಂಪ್ರೇರಣೆಯಿಂದ ಶ್ರೀಗಳ ಸಂಕಲ್ಪಕ್ಕೆ ಬೆಂಬಲ ನೀಡಿದ್ದಾರೆ" ಎಂದರು. ಮಾಜಿ ಮೇಯರ್ ನಾರಾಯಣ ಮಾತನಾಡಿ, "ಪೌರ ಕಾರ್ಮಿಕರ ಮಕ್ಕಳಿಗೆ ಸಂಸ್ಕೃತ ಮತ್ತು ಪೂಜಾ ವಿಧಿವಿಧಾನಗಳನ್ನು ಕಲಿಸುವ ಮೂಲಕ ಶ್ರೀಗಳು ಧಾರ್ಮಿಕ ಅರಿವು ಮೂಡಿಸಿದ್ದಾರೆ. ದೇವರಾಜ ಅರಸು ಬಡಾವಣೆ ಸೇರಿದಂತೆ ಹಲವು ಕಡೆ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿದ್ದಾರೆ. ಈ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ" ಎಂದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಎಂ.ರಾಜೇಂದ್ರ, ಅವಧೂತ ದತ್ತಪೀಠದ ಕಾರ್ಯದರ್ಶಿ ಹೆಚ್.ವಿ.ಪ್ರಸಾದ್ ಮುಂತಾದವರು ಉಪಸ್ಥಿತರಿದ್ದರು.

# ಅಂಬೇಡ್ಕರ್ ಭವನ ಭೂಮಿಪೂಜೆ



ಗುಂಡ್ಲುಪೇಟೆ ತಾಲೂಕಿನ ಮಾಡ್ರಹಳ್ಳಿ ಗ್ರಾಮದಲ್ಲಿ ಡಾ.ಬಿ.ಅರ್.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಶಾಸಕ ಎಚ್.ಎಂ.ಗಣೇಶ ಪ್ರಸಾದ್ ಗುದ್ದಲಿ ಪೂಜೆ ನೇರವೆರಿಸಿದರು

ಈ ವೇಳೆ ಮಾತನಾಡಿದ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಸರ್ಕಾರದ ಸುತ್ತೋಲೆಯಂತೆ ಗ್ರಾಮ ಮಟ್ಟದ ಸಮುದಾಯ ಭವನಕ್ಕೆ 20 ಲಕ್ಷ ಹೋಬಳಿ ಮಟ್ಟದ ಸಮುದಾಯ ಭವನಕ್ಕೆ 50 ಲಕ್ಷ ತಾಲೂಕು ಮಟ್ಟದ ಸಮುದಾಯ ಭವನಕ್ಕೆ ಒಂದು ಕೋಟಿ ರೂ ಅನುದಾನ ನೀಡಲು ಸರ್ಕಾರ ಸುತ್ತೂಲೆ ಹೊರಡಿಸಿದೆ ಅದರಂತೆ ಸಮಾಜ ಕಲ್ಯಾಣ ಇಲಾಖೆಯಿಂದ 20 ಲಕ್ಷ ಅನುದಾನ ನೀಡಲಾಗಿದೆ ಎಂದರು ಸಮುದಾಯ ಭವನ ಕಟ್ಟುವುದಕ್ಕಿಂತ ಸಮುದಾಯ ಭವನ ಬಳಕೆ ಆಗಬೇಕು ಬಹಳಷ್ಟು ಕಡೆಗಳಲ್ಲಿ ಸಮುದಾಯ ಭವನಗಳು ನಿರ್ಮಾಣ ಮಾಡಿ ಉಪಯೋಗಿಸುತ್ತಿಲ್ಲ ಅದೇ ರೀತಿ ಮಾಡ್ರಹಳ್ಳಿ ಸಮುದಾಯದ ನಿರುಪಯುಕ್ತವಾಗದೇ ಸದ್ಭಳಕೆಯಾಗಲಿ ಎಂದು ಕಿವಿ ಮಾತು ಹೇಳಿದರು

ವಿದ್ಯಾರ್ಥಿಗಳು ಅಧ್ಯಯನಕ್ಕೆ ಸಮುದಾಯ ಭವನವನ್ನು ಸದ್ಭಳಕೆ ಮಾಡಿಕೊಳ್ಳಿ ಇನ್ನೂ ಹೆಚ್ಚಿನ ಅನುದಾನ ಕೂಡಲು ಅವಕಾಶ ಸಿಕ್ಕರೆ ಅನುದಾನ ನೀಡಲಾಗುವುದು ಸಮಾಜ ಕಲ್ಯಾಣ ಇಲಾಖೆಯ ಸಚಿವರು ಹೆಚ್ ಸಿ ಮಹದೇವಪ್ಪ ಈ ಬಾಗದವರೇ ಅಗಿದ್ದು ಹೆಚ್ಚಿನ ಅನುಧಾನ ದೂರಕಿಸಿಕೂಡಲು ಪ್ರಯತ್ನಿಸುತ್ತೆನೆ ಎಂದು ಬರವಸೆ ನೀಡಿದರು ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ ಮಾತನಾಡಿದರು ಈ ಸಂದರ್ಭದಲ್ಲಿ ಎಪಿಎಂಸಿ ಅದ್ಯಕ್ಷ ಅರ್ ಎಸ್ ನಾಗರಾಜ್ ಮಾಜಿ ತಾ. ಪಂ. ಅದ್ಯಕ್ಷ ಹೆಚ್ ಎನ್ ಬಸವರಾಜ್.ನೀಲಕಂತಪ್ಪ. ಮುಖಂಡರಾದ ಚನ್ನಪ್ಪ ನಾಗಪ್ಪ.ಯಜಮಾನ ಚಾಮುಂಡರಾಜು ಮುಖ್ಯ ಶಿಕ್ಷಕರು ನಾಗೇಂದ್ರ.ದಸಂಸ ಮುಖಂಡ ರಂಗಸ್ವಾಮಿ. ಚಂದ್ರು ನವೀನ್. ಪ್ರಭಾವತಿ. ಮಹೇಶ್(ಮಾಯಿ) ಸೋಮಹಳ್ಳಿ ರವಿ ಗೋಪಾಲರಾಜ್. ಮರಿಸ್ವಾಮಿ ಶಶಿಕುಮಾರ್. ತಿರುಪತಿ. ಪಾಪಣ್ಣ.ಸಿದ್ದರಾಜು ಮಹದೇವ್ ರಾಜಶೇಖರ್ ಮಂಜಪ್ಪ ಇನ್ನೂ ಇತರರಿದ್ದರು

# ಮರು ಡಾಂಬರೀಕರಣಕ್ಕೆ ಚಾಲನೆ



ಹನೂರು: ಗ್ರಾಮೀಣ ಭಾಗದಿಂದ ನಗರ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳಿಗೆ ಮರು ಡಾಂಬರೀಕರಣ ಮಾಡಿ ಸಾರ್ವಜನಿಕರು, ವಾಹನ ಸವಾರರಿಗೆ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಲಾಗುತ್ತಿದೆ ಎಂದು ಶಾಸಕ ಎಂ.ಆರ್. ಮಂಜುನಾಥ್ ತಿಳಿಸಿದರು.

ಹನೂರು ಪಟ್ಟಣದ ವೈಶಂ ಪಾಳ್ಯ ಗ್ರಾಮದಿಂದ ಮಲೆಮಾದೇಶ್ವರ ಬೆಟ್ಟ ಮುಖ್ಯ ರಸ್ತೆಗೆ ಸೇರುವ ಸಂಪರ್ಕ ರಸ್ತೆಗೆ ಒಂದು ಕೋಟಿ ವೆಚ್ಚದಲ್ಲಿ ಮರು ಡಾಂಬರೀಕರಣ ಕಾಮಗಾರಿಗೆ ನೀಡಿ ಅವರು ಮಾತನಾಡಿದರು. ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಲವಾರು ವರ್ಷಗಳಿಂದ ಮುಖ್ಯರಸ್ತೆ ಹಾಗೂ ಗ್ರಾಮೀಣ ಪ್ರದೇಶಗಳ ರಸ್ತೆಯನ್ನು ಅಭಿವೃದ್ಧಿ ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದ ಹಿನ್ನೆಲೆ ಹಲವು ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಇದೇ ನಿಟ್ಟಿನಲ್ಲಿ ಮಲೆ ಮಾದೇಶ್ವರ ಬೆಟ್ಟ ಮುಖ್ಯ ರಸ್ತೆಯಿಂದ ವೈಶ್ಯಂ ಪಾಳ್ಯ ಗ್ರಾಮದ ಶಿವನ ದೇವಸ್ಥಾನದ ಹೊರಗೆ ಮರು ಡಾಂಬರೀಕರಣ ಮಾಡಲಾಗುತ್ತಿದೆ ಇದರಿಂದ ನಾಗನತ್ತ, ಬೈರನತ್ತ, ತೋಮಿಯರ್ ಪಾಳ್ಯ, ಶಾಗ್ಯ ಗ್ರಾಮಗಳ ನಿವಾಸಿಗಳಿಗೆ ವಾಹನ ಸವಾರರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು.

ಇದಲ್ಲದೆ ಹನೂರು ಪಟ್ಟಣದಿಂದ ಕೊಳ್ಳೇಗಾಲ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಮಾರ್ಗ ಮಧ್ಯದ ಹುಲಸುಗುಡ್ಡೆ ಬೋರೆ ಗ್ರಾಮದಿಂದ ಕಣ್ಣೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೂ 85 ಲಕ್ಷ ವೆಚ್ಚದಲ್ಲಿ ಡಾಂಬರೀಕರಣ ಮಾಡಲಾಗುತ್ತಿದೆ ಎಂದರು. ಇದೆ ವೇಳೆ ಮುಖಂಡರಾದ ಮೂರ್ತಿ, ಮಹದೇವಪ್ಪ, ಮಹೇಶ್, ರಾಜಪ್ಪ, ಗೋವಿಂದ, ಚಿನ್ನರಾಜ್, ಮೈಕಲ್, ಗೋಪಾಲ್, ಮಹದೇವಪ್ಪ,ಮಂಜೇಶ್ ಗೌಡ, ಜಯರಾಮು,ವೆಂಕಟಾಚಲ, ಸೇರಿದಂತೆ ಇನ್ನಿತರರು ಹಾಜರಿದ್ದರು.

# ಗ್ಯಾರಂಟಿ ಯೋಜನೆಗಳು 1000 ದಿನಗಳು ಪೂರೈಸಿದೆ: ಅಧ್ಯಕ್ಷ ಕುಮಾರ್

ಕೆ.ಆರ್.ಪೇಟೆ: ನಮ್ಮ ಕರ್ನಾಟಕ ರಾಜ್ಯ ಸರ್ಕಾರವು ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ 1000ದಿನಗಳು ಪೂರೈಸಿರುವ ಹಿನ್ನೆಲೆಯಲ್ಲಿ ತಾಲ್ಲೂಕಿನ ಎಲ್ಲಾ ಹೋಬಳಿ ಮಟ್ಟದಲ್ಲಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜನಜಾಗೃತಿ ಸಭೆ ಹಾಗೂ ಫಲಾನುಭವಿಗಳ ಸಮಾವೇಶವನ್ನು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷರು ಹಾಗೂ ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳೀಗೌಡ ನೇತೃತ್ವದಲ್ಲಿ ಅತಿ ಶೀಘ್ರವೇ ನಡೆಸಲಾಗುವುದು. ಇದಕ್ಕೆ ಎಲ್ಲಾ ಐದೂ ಇಲಾಖೆಗಳ ಅಧಿಕಾರಿಗಳು ಪೂರ್ಣ ಸಿದ್ದತೆ ಮಾಡಿಕೊಳ್ಳಬೇಕು ಎಂದು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್ ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಿ.ಎಂ.ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಅನುಷ್ಠಾನಕ್ಕೆ ತರಲಾಗಿರುವ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ 1000ದಿನಗಳು ಪೂರೈಸಿರು ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಕಡೆ ಜನರಲ್ಲಿ ಜಾಗೃತಿ ಮೂಡಿಸುವ ಸಭೆಗಳು ಹಾಗೂ ಫಲಾನುಭವಿಗಳ ಸಮಾವೇಶಗಳನ್ನು ನಮ್ಮ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ನೇತೃತ್ವದಲ್ಲಕಿ ನಡೆಸಲಾಗುತ್ತಿದೆ. ಅದೇ ರೀತಿ ನಮ್ಮ ಕೆ.ಆರ್.ಪೇಟೆ ತಾಲ್ಲೂಕಿನ ಎಲ್ಲಾ 34 ಗ್ರಾಮ ಪಂಚಾಯ್ತಿ ಕೇಂದ್ರಗಳಲ್ಲಿಯೂ ಫಲಾನುಭವಿಗಳ ಸಮಾವೇಶ ಹಾಗೂ ಜನಜಾಗೃತಿ ಮೂಡಿಸುವ ಸಭೆಯನ್ನು ಆಯೋಜಿಸಲಾಗುವುದು. ಈ ಸಭೆಗಳಲ್ಲಿ ಗೃಹಲಕ್ಷ್ಮಿ ?ಮ ಯೋಜನೆ, ಗೃಹಜ್ಯೋತಿ, ಶಕ್ತಿ ಯೋಜನೆ, ಯುವನಿಧಿ, ಅನ್ನಭಾಗ್ಯ ಯೋಜನೆ ಫಲಾನುಭವಿಗಳ ಸಭೆ ನಡೆಸಿ ಕುಂದು ಕೊರತೆಗಳನ್ನು ಆಲಿಸಲಾಗುವುದು. ಗ್ಯಾರಂಟಿ ಯೋಜನೆಗಳಿಂದ ಅನುಕೂಲ ಪಡೆದುಕೊಂಡಿರುವ ಫಲಾನುಭವಿಗಳ ಅನಿಸಿಕೆಯನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು. ಐದು ಗ್ಯಾರಂಟಿ ಯೋಜನೆಗಳಲ್ಲಿ ಯಾವುದಾದರೂ ಲೋಪವಿದ್ದಲ್ಲಿ ಬಗೆ ಹರಿಸಲು ಸ್ಥಳದಲ್ಲಿಯೇ ಕ್ರಮ ವಹಿಸಲಾಗುವುದು. ಇದಕ್ಕೆ ವಿದ್ಯುತ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಆಹಾರ ಇಲಾಖೆ, ಸಾರಿಗೆ ಇಲಾಖೆ, ಉದ್ಯೋಗ ವಿನಿಮಯ ಕೇಂದ್ರ ಇಲಾಖೆಗಳ ಸಂಪೂರ್ಣ ಮಾಹಿತಿಗಳೊಂದಿಗೆ ಕಡ್ಡಾಯವಾಗಿ ಹಾಜರಾಗಬೇಕು. ಸಭೆಗಳಲ್ಲಿ ಜನರಿಗೆ ಮಾಹಿತಿ ನೀಡಬೇಕು. ಜೊತೆಗೆ ಸಮಸ್ಯೆಗಳಲ್ಲಿ ಸ್ಥಳದಲ್ಲಿಯೇ ಬಗೆಹರಿಸಲು ಸೂಕ್ತ ಸಿದ್ದತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಎ.ಬಿ.ಕುಮಾರ್ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಸಭೆಯಲ್ಲಿ ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ವಿ.ಪುಟ್ಟಸ್ವಾಮೀಗೌಡ, ತಾಲ್ಲೂಕು ಆಹಾರ ಇಲಾಖೆಯ ಶಿರಸ್ತೇದಾರ್ ನಟರಾಜ್, ತಾಲ್ಲೂಕು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ರೂಪಾ ಅವರು ತಮ್ಮ ತಮ್ಮ ಇಲಾಖೆಯ ಪ್ರಗತಿಯ ವರದಿಯನ್ನು ಮಂಡಿಸಿದರು. ಸಭೆಯಲ್ಲಿ ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಡಾ.ಕೆ.ಸುಷ್ಮಾ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರಾದ ಮೆಣಸ ಸಿ.ಆರ್.ಪಿ.ಕುಮಾರ್, ಬೂಕನಕೆರೆ ರೂಪಾಚಂದ್ರಶೇಖರ್, ಬೊಮ್ಮೇನಹಳ್ಳಿ ಲತಾಹರೀಶ್, ಕನಕದಾಸನಗರ ಶಿವಮ್ಮ, ಕೆ.ಎಸ್.ಆರ್.ಟಿ.ಸಿ ಶಿವಣ್ಣ, ಸಿಂಗನಹಳ್ಳಿ ಗೋಪಾಲ್, ಬಂಡಿಹೊಳೆ ಯೋಗೇಶ್(ಉಮೇಶ್), ಹಾಫೀಜ್‌ಉಲ್ಲಾ, ಗೋವಿಂದನಹಳ್ಳಿ ಶ್ಯಾಮಣ್ಣ, ಬೂಕನಕೆರೆ ಬಿ.ಸಿ.ಮಾಧು, ದೊಡ್ಡತಾರಹಳ್ಳಿ ಸೋಮಶೇಖರ್, ಶಿವಲಿಂಗಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ವಿಷಯ ನಿರ್ವಾಹಕಿ ನಂದಿನಿ ಇತರರು ಉಪಸ್ಥಿತರಿದ್ದರು.

# ಬೇಟಿ ಪಡಾವ್ರೋ, ಬೇಟಿ ಬಚಾವ್ರೋ

## ಜಾಲಮಂಗಲದಲ್ಲಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ



ರಾಮನಗರ: ಅಧುನಿಕ ಕಾಲದಲ್ಲಿ ಮಹಿಳೆ ಮತ್ತಷ್ಟು ಬಲಾಢ್ಯಳಾಗುತ್ತಿದ್ದಾಳೆ, ಹೆಣ್ಣು ಮಕ್ಕಳು ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮ ಸಾಧನೆ ಮಾಡಬೇಕು ಎಂದು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಧೀಶರು ಆಗಿರುವ ಜಿಲ್ಲಾ ಬಾಲನ್ಯಾಯ ಮಂಡಳಿ ಅಧ್ಯಕ್ಷರಾದ ನಿವೇದಿತಾ.ಟಿ.ಎಂ. ಕರೆ ನೀಡಿದರು.

ತಾಲ್ಲೂಕಿನ ಜಾಲಮಂಗಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿರುವ ನಾಡಪ್ರಭು ಶ್ರೀ ಮಾಗಡಿ ಕೆಂಪೇಗೌಡರ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ದಕ್ಷಿಣ ಜಿಲ್ಲೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಾಲಾ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾ ಮಹಿಳಾ ಸಬಲೀಕರಣ ಘಟಕ, ಜಿಲ್ಲಾ ವಕೀಲರ ಸಂಘದ ಸಹಯೋಗದೊಂದಿಗೆ ಬೇಟಿ ಬಚಾವೋ, ಬೇಟಿ ಪಡಾವೋ ಯೋಜನೆಯಡಿ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಹೆಣ್ಣುಮಕ್ಕಳು ಈಗ ಬಾಹ್ಯಾಕಾಶಕ್ಕೂ ಹೋಗಿ ಬಂದಿದ್ದಾರೆ. ಇದು ಉತ್ತಮ ಬೆಳವಣಿಗೆ ಎಂದರು.

ಬೇಟಿ ಬಜಾವೋ, ಬೇಟಿ ಪಡಾವೋ ಯೋಜನೆಯಡಿ ಹೆಣ್ಣು ಮಕ್ಕಳ ದಿನಾಚರಣೆ ಆಚರಿಸಲಾಗುತ್ತಿದೆ. ಬೇಟಿ ಪಡಾವೋ ಎಂದರೆ ಹೆಚ್ಚು ಸಂಖ್ಯೆಯ ಹೆಣ್ಣು ಮಕ್ಕಳು ಶಿಕ್ಷಿತರಾಗಬೇಕುಂಬುದು. ವೈದ್ಯರು, ಇಂಜಿನಿಯರ್, ಕಲಾವಿದರಾಗಬೇಕು, ಸಿನೆಮಾ ನಟಿಯರಾಗಬೇಕೆಂಬುದು ಅನೇಕ ಹೆಣ್ಣು ಮಕ್ಕಳು ಆಸೆ ಪಡುತ್ತಾರೆ. ವೃತ್ತಿ ಯಾವುದೇ ಇರಲಿ ಶಿಕ್ಷಣ ಪಡೆಯುವುದು ಮುಖ್ಯ ಎಂದರು.

ಹೆಣ್ಣು ಮಕ್ಕಳು ತಮ್ಮ ಆರೋಗ್ಯವನ್ನು ಉತ್ತಮವಾಗಿ ಕಾಪಾಡಿಕೊಳ್ಳಬೇಕು, ಆಧುನಿಕ ಕಾಲ ಘಟ್ಟದಲ್ಲಿ ಬೆರಳ ತುದಿಯಲ್ಲಿ ಬೇಕಾದ ಮಾಹಿತಿಗಳು ಮೊಬೈಲ್‌ಗಳಲ್ಲಿ ದೊರೆಯುತ್ತದೆ. ಹೆಣ್ಣು ಮಕ್ಕಳು ಇದನ್ನು ಉಪಯೋಗಿಸಿಕೊಂಡು ತಮಗೆ ಬೇಕಾಗುವ ಉತ್ತಮ ವಿಷಯಗಳನ್ನು ತಿಳಿದುಕೊಂಡು ವಿವಿಧ ರೀತಿಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಇತರರಿಗೆ ಪ್ರೇರಣೆಯಾಗಬೇಕೆಂದರು.

ಡಯಟ್‌ನ ಹಿರಿಯ ಉಪನ್ಯಾಸಕರಾದ ಕೆ.ಪಿ. ಬಾಬು ಅವರು ಉಪನ್ಯಾಸ ನೀಡಿದರು.

ಬೆಂಗಳೂರು ದಕ್ಷಿಣ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಕೆ. ಕೆಂಪಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಸೋಮಲಿಂಗಯ್ಯ ಪಿ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಡಾ. ಲಕ್ಷ್ಮೀದೇವಿ ಎಸ್. ಅವರು ಮಾತನಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ದಿನೇಶ್, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷರಾದ ಜಯರಾಂ, ಕಾರ್ಯದರ್ಶಿ ಚಂದ್ರಶೇಖರ್, ಜಾಲಮಂಗಲ ಗ್ರಾಮ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿ ಕಾರಿ ಲತಾ, ಜಾಲಮಂಗಲ ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶಿವನಂಜಯ್ಯ, ಜಾಲಮಂಗಲದ ಸರ್ಕಾರಿ ಪ್ರೌಢಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ರಾದ ಸುರೇಶ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರಾದ ದಿನೇಶ್, ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರಾದ ಚೆನ್ನವೀರಯ್ಯ, ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಚಂದ್ರಯ್ಯ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ತಮ್ಮಣ್ಣ ಸೇರಿದಂತೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಉತ್ತಮ ಅವಕಾಶಗಳಿವೆ, ಬಳಸಿಕೊಳ್ಳಿ – ನಾಗರತ್ನಮ್ಮ

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರಾದ ನಾಗರತ್ನಮ್ಮ ಅವರು ಮಾತನಾಡಿ, ಇಂದು ಶಿಕ್ಷಣ ಕ್ಷೇತ್ರ ವಿಫುಲವಾಗಿ ಬೆಳೆದಿದ್ದು, ಅಗಾಧ ಅವಕಾಶಗಳಿವೆ, ಆದರೆ ಈ ಹಿಂದೆ ಹೆಣ್ಣು ಮಕ್ಕಳು ಅವಕಾಶದಿಂದ ವಂಚಿತರಾಗುತ್ತಿದ್ದರು ಅವರಿಗೆ ಸೂಕ್ತ ಶಿಕ್ಷಣ ದೊರೆಯುತ್ತಿರಲಿಲ್ಲ, ದೌರ್ಜನ್ಯಕ್ಕೊಳಗಾಗುತ್ತಿದ್ದರು, ಆದರೆ ಇಂದು ಪರಿಸ್ಥಿತಿ ಬದಲಾಗಿದೆ ಹೆಣ್ಣುಮಕ್ಕಳು ಬಲಶಾಲಿಗಳು ಎಂದು ನಿರೂಪಿಸುತ್ತಿದ್ದಾರೆ ಎಂದರು.

### ಕಂಫರ್ಟ್ ಜೋನ್ ಸೃಜಿಸಲು ಶಿಕ್ಷಕರಿಗೆ ಸಲಹೆ

ಹೆಣ್ಣು ಮಕ್ಕಳಿಗಾಗಿ ಸರ್ಕಾರದಿಂದ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಆ ಯೋಜನೆಗಳನ್ನು ಶಿಕ್ಷಕರು ಮಕ್ಕಳಿಗೆ ತಿಳಿಸಿಕೊಡಬೇಕು. ಅದರೊಂದಿಗೆ ಶಿಕ್ಷಕರು ಉತ್ತಮ ಜೀವನ ರೂಪಿಸಿಕೊಳ್ಳಲು ಬೇಕಾದ ಸಲಹೆಗಳನ್ನು ನೀಡಬೇಕು. ಮಕ್ಕಳ ಮನಸ್ಸು ತುಂಬಾ ಸೂಕ್ಷ್ಮವಾಗಿರುತ್ತದೆ. ಮಕ್ಕಳು ತಮ್ಮ ಸಮಸ್ಯೆಗಳನ್ನು ಶಿಕ್ಷಕರ ಬಳಿ ಹೇಳಿಕೊಳ್ಳಲು ಕಂಪರ್ಟ್ ಜೋನ್ ಸೃಷ್ಟಿಸುವಂತೆ ಅವರು ತಿಳಿಸಿದರು.

### ಜ್ಞಾನವೇ ಶಕ್ತಿ– ನ್ಯಾಯಾಧೀಶೆ ಸವಿತಾ.ಪಿ.ಆರ್

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಸವಿತಾ ಪಿ.ಆರ್. ಅವರು ಮಾತನಾಡಿ, ಇಂದಿನ ಆಧುನಿಕ ಯುಗದಲ್ಲಿ ಜ್ಞಾನವೇ ಶಕ್ತಿ. ಉತ್ತಮ ಜ್ಞಾನವಿದ್ದವರು ಅದ್ಭುತ ಸಾಧನೆಗಳನ್ನು ಮಾಡಬಹುದು. ಜ್ಞಾನಕ್ಕೆ ಮುಖ್ಯ ಪುಸ್ತಕಗಳ ಓದು, ಉತ್ತಮರ ಸಹವಾಸ ಮಾಡಿ ಉತ್ತಮ ಜ್ಞಾನ ಸಂಪಾದನೆ ಮಾಡಬೇಕು ಎಂದರು.

### ಕೌಶಲ ಗುರುತಿಸಿ

ಪ್ರತಿಯೊಬ್ಬ ಹೆಣ್ಣು ಮಕ್ಕಳಿಗೂ ದೈಹಿಕ ಹಾಗೂ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ಬಗ್ಗೆ, ಉನ್ನತ ಶಿಕ್ಷಣದ ಕುರಿತು ಶಿಕ್ಷಕರು ಪ್ರೇರಣೆ ನೀಡಬೇಕು. ಈಗಿನ ಶಿಕ್ಷಣದಲ್ಲಿ ಕೌಶಲ್ಯ ಮುಖ್ಯವಾಗಿದೆ. ಮಕ್ಕಳಲ್ಲಿರುವ ಕಲೆ, ಕೌಶಲ್ಯವನ್ನು ಗುರುತಿಸಬೇಕು. ಮಕ್ಕಳಿಗೆ ಯಾವ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ಇದೆ ಅದರ ಕಡೆ ಗಮನ ಕೊಟ್ಟು, ಅದರಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೆ ಉನ್ನತ ಮಟ್ಟಕ್ಕೆ ಏರಲು ಸಾಧ್ಯವಾಗುತ್ತದೆ ಎಂದರು.

# ಪ್ರಜಾಪ್ರಭುತ್ವ ರಕ್ಷಣೆ ಯುವಕರ ಜವಾಬ್ದಾರಿ: ಮುಖ್ಯಮಂತ್ರಿ ಚಂದ್ರು




ಮೈಸೂರು: ದೇಶದಲ್ಲಿ ಶೇ.50ರಷ್ಟು ಮಂದಿ ಇರುವ ಯುವ ಸಮೂಹದಿಂದಲೇ ಪ್ರಜಾಪ್ರಭುತ್ವ ರಕ್ಷಣೆ ಜವಾಬ್ದಾರಿಯಾಗಿದೆ ಎಂದು ನಟ ಮುಖ್ಯಮಂತ್ರಿ ಚಂದ್ರು ಹೇಳಿದರು.

ವಿಜಯನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಹಾಗೂ ದಾರಿ ಪೌಂಡೇಶನ್ ಸಹಯೋಗದಲ್ಲಿ ಆಯೋಜಿಸಿದ್ದ ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವಶಕ್ತಿ ಕೈಯಲ್ಲಿ ಮುಕ್ತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಇಂದು ದೇಶದಲ್ಲಿ ಕಾರ್ಯಾಂಗ, ನ್ಯಾಯಾಂಗ ಹಾಗೂ ಶಾಸಕಾಂಗ ಎಲ್ಲವೂ ಹಾದಿ ತಪ್ಪಿವೆ. ಪ್ರಜಾಪ್ರಭುತ್ವದಲ್ಲಿ ಮತ ದಾರರೇ ಅಂತಿಮವಾಗಿದೆ. ಅದರಲ್ಲಿ ಯೂವ ಸಮೂಹವೇ ಹೆಚ್ಚಿದ್ದು, ನೀವು ಆಯ್ಕೆ ಮಾಡಬೇಕಾದರೇ ಮುನ್ನೆಚ್ಚರಿಕೆಯಿಂದ ಆಯ್ಕೆ ಮಾಡ ಬೇಕಿದೆ. ಅಯ್ಕೆ ಮಾಡಿ ಅನಂತರ ವ್ಯವಸ್ಥೆಯನ್ನು ಟೀಕಿಸುವ ಬದಲಿಗೆ ಆಯ್ಕೆಯಲ್ಲೇ ಉತ್ತಮರನ್ನು ಆಯ್ಕೆ ಮಾಡಬೇಕಿದೆ ಎಂದು ಹೇಳಿದರು.

ಪತ್ರಕರ್ತ ಕೆ.ನರಸಿಂಹಮೂರ್ತಿ, ಮಂಡ್ಯ ರೈತರ ಶಾಲೆ ಮುಖ್ಯಸ್ಥ ಸತ್ಯಮೂರ್ತಿ, ದಾರಿ ಫೌಂಡೇಶನ್ ಅಧ್ಯಕ್ಷ ಎಲ್.ರಂಗಯ್ಯ, ವಿಜಯನಗರ ಸರ್ಕಾರಿ ಮಹಿಳಾ ಪ್ರಥಮದರ್ಜೆ ಕಾಲೇಜು ಪ್ರಾಂಶುಪಾಲ ಪ್ರೊ.ಕೆ.ಸಿ.ಭದ್ರಗಿರಿಯಯ್ಯ, ದಾರಿ ಫೌಂಡೇಶನ್ ಕಾರ್ಯದರ್ಶಿ ತಗಡೂರು ವೀರೇಶ್ ಕುಮಾರ್ ಮಹಾಮನೆ, ಖಜಾಂಚಿ ವಿಶ್ವನಾಥ್ ಕುಲಕರ್ಣಿ, ಸಂಚಾಲಕರಾದ ಪ್ರಭಾಕರ್, ಎಂ.ಕೆ.ಅಪ್ಪಯ್ಯ, ರಾಮಾನುಜಪ್ಪ, ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎಂ.ಎ.ಮಲ್ಲಿಕಾರ್ಜುನ, ಎಸ್.ಆನಂದ್‌ಕುಮಾರ್, ಪತ್ರಾಂಕಿತ ವ್ಯವಸ್ಥಾಪಕಿ ಆರಿಫ್ಹಾ ಸುಲ್ತಾನಾ ಇನ್ನಿತರರು ಉಪಸ್ಥಿತರಿದ್ದರು.

# ಸರ್ಕಾರಿ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಕಾರ್ಯಕ್ರಮಗಳಂತೆ ಪರಿವರ್ತಿಸಿರುವ ಶಾಸಕ



ಗುಂಡ್ಲುಪೇಟೆ ಮಾಡ್ರಹಳ್ಳಿ ಗ್ರಾಮದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಅರ್ ಅಂಬೇಡ್ಕರ್ ಸಮುದಾಯ ಭವನ ನಿರ್ಮಾಣ ಕಾಮಗಾರಿ ಗುದ್ದಲಿ ಪೂಜೆ ಕಾರ್ಯಕ್ರಮಕ್ಕೆ ಸ್ವಾಗತರ್ಹ

ಆದರೆ ಗಣೇಶ್ ಪ್ರಸಾದ್ ರವರು ಸರ್ಕಾರಿ ಕಾರ್ಯಕ್ರಮಗಳನ್ನು ಪಕ್ಷದ ಕಾರ್ಯಕ್ರಮದಂತೆ ಪರಿವರ್ತಿಸುತ್ತಿರುವುದು ತುಂಬಾ ಖಂಡನೀಯ ಸಾರ್ವಜನಿಕರ ತೆರಿಗೆ ಹಣದಲ್ಲಿ ಸರ್ಕಾರದ ಕಾರ್ಯಕ್ರಮ ಮಾಡಲಿ ಸರ್ಕಾರದಿಂದ



ಮಂಜೂರಾಗಿರುವ ಅಂಬೇಡ್ಕರ್ ಭವನದ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದ ಚಿಹ್ನೆ ಮತ್ತು ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕರ ಭಾವಚಿತ್ರಗಳನ್ನು ಹಾಕಿಕೊಂಡರಿವುದು ಎಷ್ಟು ಸರಿ ಇದು ಕಾಂಗ್ರೆಸ್ ಪಕ್ಷದ ಹಣದಲ್ಲಿ ಕಾಮಗಾರಿ ಗುದ್ದಲಿ ಪೂಜೆ ಮಾಡುತ್ತಿಲ್ಲ ಸರ್ಕಾರದ ಶಿಷ್ಟಾಚಾರ ಹರಿಯದ ಗಣೇಶ್ ಪ್ರಸಾದ್ ರವರಿಗೆ ಅಧಿಕಾರಿಗಳು ಸರ್ಕಾರದ ಶಿಷ್ಟಾಚಾರದ ಬಗ್ಗೆ ಪಾಠ ಅಗತ್ಯವಾಗಿದೆ ಸರ್ಕಾರಿ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದ ಚಿಹ್ನೆ ಮತ್ತು ರಾಷ್ಟ್ರೀಯ ನಾಯಕರ ಭಾವಚಿತ್ರವಿರುವುದನ್ನು ಅಧಿಕಾರಿಗಳು ನೋಡಿ ನೋಡದಂತೆ ಇರುವ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ಮೇಲೆ ಕ್ರಮ ಆಗಬೇಕೆಂದು ಇದೇ ಸಂದರ್ಭದಲ್ಲಿ ಮೂಡ್ನಕೂಡು ಪ್ರಕಾಶ್ ಒತ್ತಾಯಿಸಿದರು

# ಜಲ್ಲಿಕಲ್ಲು ಸುರಿದ ಟಿಪ್ಪರ್: ಎಚ್ಚರಿಕೆ

ಗುಂಡ್ಲುಪೇಟೆ : ತಾಲ್ಲೂಕಿನ ತೆರಕಣಾಂಬಿ –ಬೊಮ್ಮಲಾಪುರ ರಸ್ತೆ ಯಲ್ಲಿ ಅಡ್ಡಾಡಿದ್ದಿ ಟಿಪ್ಪರ್ ಓಡಿಸಿಕೊಂಡು ರಸ್ತೆ ಪೂರ್ತಿ ಜಲ್ಲಿಕಲ್ಲುಗಳನ್ನು ಸುರಿದು ಸಾರ್ವಜನಿಕರಿಗೆ ರಸ್ತೆಯಲ್ಲಿ ವಾಹನ ಚಾಲನೆ ಮಾಡಲು ಅಡಚಣೆ ಉಂಟು ಮಾಡಿ ಜನರಿಗೆ ತೊಂದರೆ ನೀಡಿದ ಟಿಪ್ಪರ್ ಅಡ್ಡಗಟ್ಟಿ ಡ್ರೈವರ್ ಗೆ ಭ್ರಷ್ಟಾಚಾರ ನಿರ್ಮೂಲನಾ ಸಮಿತಿ (ರಿ ) ರಾಜ್ಯಾಧ್ಯಕ್ಷೆ ಲಕ್ಷ್ಮಿ ಮಹೇಶ್ ಎಚ್ಚರಿಕೆ ನೀಡಿದರು.



ಈ ಸಂದರ್ಭದಲ್ಲಿ ಮಾತಮಾಡಿ ಟಿಪ್ಪರ್ ನಲ್ಲಿದ್ದ ದಾಖಲೆ ಯಲ್ಲೇ ಓವರ್ ಟನ್ ಇರುವುದು ಪತ್ತೆಯಾಗಿದ್ದು, ಅವಕಾಶ ಇರುವುದಕ್ಕಿಂತ 6/7ಟನ್ ಓವರ್ ಲೋಡ್ ಇರುವುದು ಕಂಡುಬಂದಿದ್ದು ಈ ವಿಚಾರವಾಗಿ ತಪಾಸಣೆ ಮಾಡಬೇಕಿದ್ದ ಎಲ್ಲಾ ಇಲಾಖೆಗಳು ವಿಫಲವಾಗಿದ್ದು ಗಣಿ ಮತ್ತು ಕ್ರಷರ್ ಮಾಲೀಕರ ಕೈಗೊಂಬೆಯಾಗಿದ್ದಾರೆ ಎಂದು ಲಕ್ಷ್ಮಿ ಮಹೇಶ್ ಆರೋಪಿಸಿದರು.

ಟಿಪ್ಪರ್ ಚಾಲಕ ತಾನು ತಪ್ಪು ಮಾಡಿದ್ದಾಗಿ ಒಪ್ಪಿಕೊಂಡು ಇನ್ನು ಮುಂದೆ ಸರಿಯಾದ ಪ್ರಮಾಣದಲ್ಲಿ ತೆ ಗೆ ದ್ ು ಕೆ ೊ ಂ ಡ್ ು ಹೋಗುವುದಾಗಿ ಕೇಳಿಕೊಂಡ ಹಿನ್ನಲೆ ಎಚ್ಚರಿಕೆ ನೀಡಿ ವಾಹನ ವನ್ನು ಬಿಟ್ಟು ಕಳುಹಿಸಿದ್ದೇವೆ ಗಣಿ ಮತ್ತು ಕ್ರಷರ್ ಮಾಲೀಕರು ಸಹ ನಿಯಮ ಮೀರಿ ಟಿಪ್ಪರ್ ಗಳಿಗೆ ಓವರ್ ಲೋಡ್ ಹಾಕಿ ಜನರ ಪ್ರಾಣದ ಜೊತೆ ಚೆಲ್ಲಾಟವಾಗಿದೆ ಹೊರಾಟ ಮುಂದುವರೆಸುವುದಾಗಿ ಹೇಳಿದರು.

# ಮತ್ಯ ಸಂಜೀವಿನಿಗೆ ಚಾಲನೆ

ಗುಂಡ್ಲುಪೇಟೆ: ಜಿಲ್ಲಾ ಪಂಚಾಯತ್ ಚಾಮರಾಜನಗರ, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಕೌಶಲ್ಯಾ ಅಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕ, ತಾಲ್ಲೂಕು ಪಂಚಾಯತಿ ಪಂಚಾಯತ್ ರಾಜ್ ಇಲಾಖೆ ಮತ್ತು ಮೀನುಗಾರಿಕೆ ಇವರ ಸಹಯೋಗದಲ್ಲಿ ಮತ್ಯ ಸಂಜೀವಿನಿ ಯೋಜನೆ ಕಾರ್ಯಕ್ರಮಕ್ಕೆ ಚಿಕ್ಕುಂಡಿ ಗ್ರಾಮದಲ್ಲಿ ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಚಾಲನೆ ನೀಡಿದರು.

ನಂತರ ಮಾತನಾಡಿ ಚಿಕ್ಕುಂಡಿ ಗ್ರಾಮದಲ್ಲಿ ಇರುವ ಕೆರೆಗೆ ಮತ್ಸ್ಯ ಸಂಜೀವಿನಿ ಕಾರ್ಯಕ್ರಮದಡಿಯಲ್ಲಿ ಮಹಿಳಾ ಸ್ವಸಹಾಯ ಸಂಘಕ್ಕೆ ಅನುಕೂಲವಾಗಲು ಮೀನು ಸಾಕಾಣಿಕೆ ಮಾಡಲು ಅವಕಾಶ ನಿಡಿದ್ದು ಇದು ಸರ್ಕಾರದ ಮಹತ್ವಪೂರ್ಣ ಯೊಜನೆಯಾಗಿದ್ದು ಮುಂದಿನ ದಿನಗಳಲ್ಲಿ ತಾಲ್ಲೂಕಿನಾದ್ಯಂತ ವಿಸ್ತರಣೆಯಾಗಲಿ ಎಂದರು. ಈ ಸಂದರ್ಭದಲ್ಲಿ ಮಹಿಳಾ ಸಂಘದ ಸದಸ್ಯರು ಚಿಕ್ಕುಂಡಿ ಗ್ರಾಮದ ಮುಖಂಡರು ಮತ್ತಿತರರಿದ್ದರು.



## ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ

# ಕುಡಿಯುವ ನೀರಿಗಾಗಿ ರಾಮಸಮುದ್ರ ನಿವಾಸಿಗಳಿಂದ ಮನವಿ

ಚಾಮರಾಜನಗರ, ರಾಮಸಮುದ್ರ ಬಡಾವಣೆಗಳಲ್ಲಿ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವಂತೆ ಒತ್ತಾಯಿಸಿ ನಿವಾಸಿಗಳಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ರಾಮಸಮುದ್ರ ಬಡಾವಣೆಯ 5 ವಾರ್ಡ್‌ಗಳಲ್ಲೂ ಐದಾರು ತಿಂಗಳಿನಿಂದಲ್ಲೂ ಕುಡಿಯುವ ನೀರು ಇಲ್ಲದೆ ತೊಂದರೆ ಅನುಭವಿಸುವಂತಾಗಿದೆ. ಚಂದಕವಾಡಿ ಜಾತ್ರೆವಿದ್ದು ಕುಡಿಯುವ ನೀರಿನ ತತ್ತರಿಸಿಹೋಗಿದ್ದಾರೆ ಬಡಾವಣೆಯ ವಾರ್ಡ್ ಗಳಿಗೆ ಕುಡಿಯುವ ನೀರು, ರಸ್ತೆ ನಿರ್ಮಾಣ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಪ್ರತಿಭಟನೆ ನಡೆಸಲಾಗಿದೆ ಯಾವುದೇ ಪ್ರಯೋಜನವಾಗಿಲ್ಲ. ಕುಡಿಯುವ ನೀರಿಗಾಗಿ ನಿವಾಸಿಗಳು ಆಗಾಧವಾದ ತೊಂದರೆ ಅನುಭವಿಸುತ್ತಿದ್ದಾರೆ. ಯಾವುದೇ ಬೋರ್‌ವೆಲ್ ದುರಸ್ಥಿ ಪಡಿಸಿಲ್ಲ. ನಗರಸಭೆ ಬಹಳ ದಿವ್ಯನಿರ್ಲಕ್ಷತೆ ವಹಿಸಿದೆ. ಬಡಾವಣೆಯ ಮುಖ್ಯರಸ್ತೆಯಾದ ಹಳ್ಳದ ಬೀದಿಯ ರಸ್ತೆಯು ಸಮಸ್ಯೆಯಿಂದ



ಕೂಡಿದ್ದು ಜನರು ತಿರುಗಾಡಲು ದಿನನಿತ್ಯ ತೊಂದರೆಯಾಗುತ್ತಿದೆ. ರಾಮಸಮುದ್ರದ ಆಯ್ದ ಬೀದಿಗಳಿಗೆ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಲು ನಗರೋತ್ತಾನ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗಿ ಟೆಂಡರ್ ಆಗಿರುತ್ತದೆ. ಆದರೆ ಗುತ್ತಿಗೆದಾರರು ರಸ್ತೆಂ ಮನ್ನು ನಿರ್ಮಾಣ ಮಾಡದೆ ವಿಳಂಬ ನೀತಿ ಅನುಸರಿಸುತ್ತಿದ್ದಾರೆ. ರಸ್ತೆಯ ಕಾಮಗಾರಿಯನ್ನು ಬೇಗ ಮುಗಿಸಿಕೊಡಿ ಎಂದು ಹಲವು ಬಾರಿ ಮನವಿ ಮಾಡಿದರು. ಯಾವುದೇ ಪ್ರಯೋಜನವಾಗಿಲ್ಲ ಎಂದರು.

ನಗರಸಭೆಯ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ರಸ್ತೆ ಕಾಮಗಾರಿಯನ್ನು ಮುಗಿಸಿರುವುದಿಲ್ಲ. ಹಾಗೂ ರಾಮಸಮುದ್ರದ ಪೌರಕಾರ್ಮಿಕರ ಕಾಲೋನಿ ಹತ್ತಿರ ಒಳಚರಂಡಿಯು ಬ್ಲಾಕ್ ಆಗಿ ಒಳಚರಂಡಿಯ ನೀರು ರಸ್ತೆಯ ಮೇಲೆ ಬಂದು ಅವಸ್ಥೆಯಿಂದ ಕೂಡಿದ್ದು ಮಲೀನವಾದ ನೀರಿನಿಂದ ಅಲ್ಲಿನ ನಿವಾಸಿಗಳು ವಾಸಿಸಲು ತುಂಬಾ ತೊಂದರೆಯಾಗಿರುತ್ತದೆ. ಇದರ ಬಗ್ಗೆ ಕೂಡ ನಗರಸಭೆಯ ಅಧಿಕಾರಿಗಳಿಗೆ ತಿಳಿಸಿದ್ದರು ಕೂಡ ಸಮಸ್ಯೆಯನ್ನು ಇನ್ನೂ ಬಗೆಹರಿಸಿರುವುದಿಲ್ಲ. ಹಾಗೂ ರಾಮಸಮುದ್ರದ ಬಡಾವಣೆಯ ದುರ್ಗಿಗುಡಿ ಬೀದಿ, ಹಳ್ಳದಬೀದಿ, ಕುರುಬರ ಬೀದಿ, ಆದಿಜಾಂಬವರ ಬೀದಿ, ನಾಯಕರ ಬೀದಿ ಕೋಟೆಬೀದಿ, ಅಂಬೇಡ್ಕರ್ ಬಡಾವಣೆ, ಚಿಕ್ಕಹೊಸ ಬಡಾವಣೆ ಬೀದಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿ ಅಲ್ಲಿನ ಬೋರ್‌ಗಳು ನೀರಿಲ್ಲದೆ ಬತ್ತಿ ಹೋಗಿರುತ್ತದೆ. ಬೋರ್‌ವೆಲ್‌ಗಳನ್ನು ರೀಬೋರ್ ಮಾಡಬೇಕೆಂದು ಹಲವಾರು ಬಾರಿಮನವಿ ಮಾಡಿದರು ಸಹ ರೀಬೋರ್ ಮಾಡಿರುವುದಿಲ್ಲ. ಹಾಗೂ ಹಲವು ಬೀದಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಚರಂಡಿಯನ್ನು ನಿರ್ಮಾಣ ಮಾಡದೇ ಅವ್ಯವಸ್ಥೆಯಿಂದ ಕೂಡಿರುತ್ತದೆ. ಬಡಾವಣೆಯ ಸಮಸ್ಯೆಗಳನ್ನು ಕೂಡಲೇ ಸರಿಪಡಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿಯಲ್ಲಿ ಒತ್ತಾಯಿಸಿದರು ಮುಖಂಡರಾದ ರಾಮಸಮುದ್ರ ಶಿವು, ಆರ್ ವಿ ಮಹದೇವಸ್ವಾಮಿ, ಮಾಸ್ಟರ್ ಲಿಂಗರಾಜು, ನಾಗ ಬಸವಣ್ಣ, ಆರ್ ಎಂ ವಿಜಯಕುಮಾರ್, ನವೀನ್ ಇತರರು ಹಾಜರಿದ್ದರು.

# ಜೆಜೆಪಿ ಮುಖಂಡ ಸುಬ್ಬನಾಯಕ ಸೇರಿದಂತೆ ಅನೇಕರು ಕಾಂಗ್ರೆಸ್ ಸೇರ್ಪಡೆ

## ಗ್ರಾಮ ಅಭಿವೃದ್ಧಿ ಹಾಗೂ ಕಾಂಗ್ರೆಸ್ ಪಕ್ಷದ ಜನಪರ ಕಾರ್ಯಕ್ರಮ ಮೆಚ್ಚಿ ಕಾಂಗ್ರೆಸ್ ಸೇರ್ಪಡೆ : ಸುಬ್ಬನಾಯಕ



ಚಾಮರಾಜನಗರ, ತಾಲೂಕಿನ ತಮ್ಮಡಹಳ್ಳಿ ಗ್ರಾಮದ ಹಿರಿಯ ಬಿಜೆಪಿ ಮುಖಂಡ ಹಾಗೂ ತಾ.ಪಂ. ಮಾಜಿ ಸದಸ್ಯ ಸುಬ್ಬನಾಯಕ ಮತ್ತು ಬೆಂಬಲಿಗರು ಇಂದು ಬಿಜೆಪಿ ತೊರೆದು ಶಾಸಕ ಸಿ. ಪುಟ್ಟರಂಗಶೆಟ್ಟಿ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಗ್ರಾಮದಲ್ಲಿ ನಡೆದ ಕಾಂಗ್ರೆಸ್ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಶಾಸಕ ಸಿ. ಪುಟ್ಟರಂಗಶೆಟ್ಟಿ ಹಾಗೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಅವರು ಸುಬ್ಬನಾಯಕ, ನಗರಸಭಾ ಮಾಜಿ ಅಧ್ಯಕ್ಷ ಸುರೇಶ್‌ನಾಯಕ, ತಾ.ಪಂ. ಮಾಜಿ ಸದಸ್ಯ ಶಿವಪುರ ನಂಜುಂಡೇಗೌಡ, ಮುಖಂಡರಾದ ಮಂಜುನಾಥ್ ಬೆಳ್ಳಶೆಟ್ಟಿ, ಚಿಕ್ಕಂಗಶೆಟ್ಟಿ ಸೇರಿದಂತೆ ಅನೇಕ ಮುಖಂಡರನ್ನು ಪಕ್ಷಕ್ಕೆ ಸ್ವಾಗತ ಕೋರಿ, ಪಕ್ಷದ ಶಾಲ್ಯ ಹಾಕಿ ಬರ ಮಾಡಿಕೊಂಡರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಸಿ. ಪುಟ್ಟರಂಗಶೆಟ್ಟಿ,ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಮಾಜಿಕ ನ್ಯಾಯ ಹಾಗೂ ಅಭಿವೃದ್ಧಿ ಸಾಧ್ಯ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಶಿವಕುಮಾರ್ ಅವರ ನೇತೃತ್ವದ ನಮ್ಮ ಸರ್ಕಾರ ಸುಭದ್ರವಾಗಿದ್ದು, ಬಹಳಷ್ಟು ಯೋಜನೆಗಳನ್ನು ಅನುಷ್ಠಾನ ಮಾಡುತ್ತಿದೆ. ಈಗಾಗಲೇ ಗ್ರಾಮದಲ್ಲಿ ನಾಯಕ ಸಮುದಾಯದವರು ಹೆಚ್ಚು ವಾಸಿಸುತ್ತಿರುವುದರಿಂದ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ವಾಲ್ಮೀಕ ಭವನ ನಿರ್ಮಾರ್ಣಕ್ಕೆ ಅನುದಾನ ನೀಡಿದ್ದೇನೆ. ಅದೇ ರೀತಿ ನಾಯಕ ಜನಾಂಗದ ಮುಖ್ಯ ರಸ್ತೆಯನ್ನು ಸಿಮೆಂಟ್ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ 80 ಲಕ್ಷ ರೂ. ನೀಡಿದ್ದು, ತಮ್ಮಡಹಳ್ಳಿ ಗ್ರಮವನ್ನು ಮಾದರಿ ಗ್ರಾಮವನ್ನಾಗಿಸಲು ಇನ್ನು ಹೆಚ್ಚಿನ ಅಭಿವೃದ್ಧಿ ಮಾಡಲು ನಿಮ್ಮೆಲ್ಲರ ಸಹಕಾರ ಮುಖ್ಯವಾಗಿದೆ ಎಂದರು.

ಕಾಂಗ್ರೆಸ್ ಪಕ್ಷ ಸೇರ್ಪಡೆಯಾದ ಸುಬ್ಬನಾಯಕ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಕನಿಷ್ಟ ಯೋಜನೆಗಳ ಸಲಹಾ ಸಮಿತಿಯ ಮಾಜಿ ಅಧ್ಯಕ್ಷ ಎಸ್‌ಪಿಕೆ ಉಮೇಶ್, ಜಿ.ಪಂ.ಮಾಜಿ ಸದಸ್ಯ ಅರಕಲವಾಡಿ ಸೋಮನಾಯಕ, ಬ್ಲಾಕ್ ಅಧ್ಯಕ್ಷರಾದ ಮಹಮದ್ ಅಸ್ಗರ್, ಎ.ಎಸ್.ಗುರುಸ್ವಾಮಿ, ನಗರಸಭಾ ಮಾಜಿ ಸದಸ್ಯ ರಾಜಪ್ಪ, ಮಹೇಶ್ ಕುದರ್, ಚುಡಾ ಮಾಜಿ ಅಧ್ಯಕ್ಷ ಸುಹೇಲ್ ಅಲಿ ಖಾನ್, ಅಯೂಬ್ ಖಾನ್, ಗ್ರಾ.ಪಂ. ಮಾಜಿ ಅಧ್ಯಕ್ಷ ಪಿ. ಶೇಖರಪ್ಪ, ಮಾಜಿ ಉಪಾಧ್ಯಕ್ಷ ಗುರುಮಲ್ಲಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಎಂ.ಶಿವಸ್ವಾಮಿ, ಗ್ಯಾರಂಟಿ ಯೋಜನೆಯ ಸಮಿತಿಯ ಸದಸ್ಯರಾದ ಚಿನ್ನಸ್ವಾಮಿ, ಆರ್. ರಾಜು, ಉಡಿಗಾಲ ನಂಜಪ್ಪ, ಕೊಂಗಳಪ್ಪ, ಯು.ಪಿ. ಮಹದೇವಸ್ವಾಮಿ, ಸಾಗಡೆಗ್ರಾ.ಪಂ. ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಗುರುಬಸಪ್ಪ, ಆರ್. ಪರುಷೋತ್ತಮ್, ಹೊಸಹಳ್ಳಿ ಮಧುಸೂದನ್ ಮೊದಲಾಧವರು ಇದ್ದರು.


**ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು**

ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು – 570 005


ಸಂಖ್ಯೆ:ಮೈಅಪ್ರಾ:ನಯೋಶಾ:ಭೂಉಬ:ನಯೋ–1:E–43571:2025–26 ದಿನಾಂಕ: 06.02.2026

**ಸಾರ್ವಜನಿಕ ಪ್ರಕಟಣೆ**

**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ)ರನ್ವಯ**

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, **ನಾಗನಹಳ್ಳಿ** ಗ್ರಾಮದ ಸ.ನಂ.185/1ರ 01ಎಕರೆ 26ಗುಂಟೆ ಮತ್ತು 185/6ರ 00–28ಗುಂಟೆ ವಿಸ್ತೀರ್ಣದ ಜಮೀನನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀ ಬಿ.ಎಸ್.ನವೀನ್‌ಕುಮಾರ್ ಬಿನ್ ಬಿ.ಎನ್.ಶ್ರೀನಿವಾಸ್ ಇವರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗುತ್ತದೆ. ವಾಣಿಜ್ಯ ಚಟುವಟಿಕೆ ಕಾಮಗಾರಿಗಳು ನಡೆಯುವ ಸಂಧರ್ಭದಲ್ಲಿ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಾಯವಾಗುತ್ತದೆ ಮತ್ತು ಯೋಜನಾಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಪ್ರದೇಶಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ಅಭಿವೃದ್ಧಿ ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN




ಸಹಿ/–

ನಗರ ಯೋಜಕ ಸದಸ್ಯರು,

ವಾಸಾಸಂಇ/ಮೈಸೂರು/1654/ಶಿರಡಿಸಾಯಿ/2025–26 ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.


# ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷಗೆ ಸನ್ಮಾನ



ಚಾಮರಾಜನಗರ, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು ಅವರನ್ನು ಶ್ಯಾನಾಡ್ರಾಹಳ್ಳಿ ಗ್ರಾಮ ಘಟಕದ ವತಿಯಿಂದ ಸನ್ಮಾನಿಸಲಾಯಿತು.

ಶ್ಯಾನಾಡ್ರಾಹಳ್ಳಿ ಗ್ರಾಮ ಘಟಕದ ಪದಾಧಿಕಾರಿಗಳು ತಾಲೂಕಿನ ಮೂಡ್ಲುಪುರ ಅವರ ತೋಟದ ಮನೆಯಲ್ಲಿ ಭೇಟಿ ಮಾಡಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿದ ಹಾಲಿನ ನಾಗರಾಜು ಮಾತನಾಡಿ, ಈ ಸನ್ಮಾನ ಮಾಡಿಸಿಕೊಳ್ಳಲು ನನಗೆ ಇಷ್ಟ ಇರಲಿಲ್ಲ. ನಿಮ್ಮೆಲ್ಲರ ಪ್ರೀತಿ, ವಿಶ್ವಾಸದಿಂದ ಸನ್ಮಾನ ಮಾಡಿಸಿಕೊಂಡಿದ್ದೇನೆ. ಎಂದರು. ಶ್ಯಾನಾಡ್ರಾಹಳ್ಳಿ ಗ್ರಾಮ ಘಟಕ ಅಧ್ಯಕ್ಷ ಬಸವರಾಜು ಮಾತ ನಾಡಿ, ಸನ್ಮಾನಿಸಿದ.ಶ್ಯಾನಾಡ್ರಾಹಳ್ಳಿ ಗ್ರಾಮ ಸುತ್ತಮುತ್ತಾ ಅಂತರ್ಜಲ ಕುಸಿತವಾಗಿ ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿತ್ತು. ಅಂತಹ ಸಂದರ್ಭದಲ್ಲಿ ಹೋರಾಟ ರೂಪಿಸಿದಾಗ ಸಂಘದ ಜಿಲ್ಲಾಧ್ಯಕ್ಷ ಹಾಲಿನ ನಾಗರಾಜು ಅವರು ನಮ್ಮ ಜೊತೆ ಕೈ ಜೋಡಿಸಿ ಕೆ' ಕಬಿನಿ ನೀರಾವರಿ ಏತಯೋಜನೆಯಲ್ಲಿ ನಮ್ಮೂರಿನ ಕೆರೆಗಳಿಗೆ ನೀರು ತುಂಬಿಸಿ ಅಂತರ್ಜಲ ವೃದ್ಧಿಸಲು ಕಾರಣರಾದ ಹಿನ್ನಲೆಯಲ್ಲಿ ನಮ್ಮ ಶ್ಯಾನಾಡ್ರಾಹಳ್ಳಿ ಘಟಕದ ವತಿಯಿಂದ ಸನ್ಮಾನಿಸಲಾಗಿದೆ' ಎಂದರು. ತಾಲೂಕು ಅಧ್ಯಕ್ಷ ಸತೀಶ್, ಮಲ್ಲಿಕಾ ರ್ಜುನ, ನಾಗರಾಜಪ್ಪ, ತೋಟದ ಶಂಕರಪ್ಪ, ಪರಮೇಶ್ವರಪ್ಪ, ವಸಂತ, ಪ್ರಕಾಶ್, ಮಲ್ಲೇಶ್, ರಾಮಣ್ಣ, ಗುರು, ನರಮಂಗಲ ನಾಗಮಲ್ಲಪ್ಪ, ಮಹದೇವಪ್ರಸಾದ್, ಗುರುವಿನಪುರ ಚಂದ್ರು, ಮಲೆಯೂರು ಮಹೇಂದ್ರ, ಪ್ರಕಾಶ್ಗಾಂಧಿ, ಮಹೇಶ್ ಇದ್ದರು.

# ಪ್ರೊ.ನಂಜುಂಡಸ್ವಾಮಿ ಜನ್ಮದಿನಾಚರಣೆ



ಗುಂಡ್ಲುಪೇಟೆ: ತಾಲ್ಲೂಕು ರೈತಸಂಘದ ವತಿಯಿಂದ ಪಟ್ಟಣದಲ್ಲಿ ಪ್ರೊ.ನಂಜುಂಡಸ್ವಾಮಿ ಅವರ 90 ನೇ ವರ್ಷದ ಜನ್ಮದಿನಾಚರಣೆಯನ್ನು ಆಚರಿಸಲಾಯಿತು.

ಪಟ್ಟಣದ ಡಿ ದೇವರಾಜ ಅರಸು ಕ್ರೀಡಾಂಗಣದಿಂದ ಟ್ರಾಕ್ಟರ್ ರ್ಯಾಲಿ ಮೂಲಕ ಪ್ರೊ.ನಂಜುಂಡಸ್ವಾಮಿ ಅವರ ಭಾವಚಿತ್ರವನ್ನು ಹಳೆ ಪ್ರವಾಸಿ ಮಂದಿರದ ಮಾರ್ಗವಾಗಿ ತಾಲ್ಲೂಕು ಕಚೇರಿ ವರೆಗೆ ಮೆರವಣಿಗೆ ಮಾಡಲಾಯಿತು. ನಂತರ ತಾಲ್ಲೂಕು ಕಚೇರಿ ಆವರಣದಲ್ಲಿ ಪ್ರೊ. ನಂಜುಂಡಸ್ವಾಮಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಲಾಯಿತು ರೈತರಿಂದ ರಕ್ತದಾನ ಶಿಬಿರ ಆಯೋಜನೆ ಮಾಡುವ ಮೂಲಕ ಅರ್ಥಪೂರ್ಣವಾಗಿ ಕಾರ್ಯಕ್ರಮ ಆಯೋಹಿಸಿ ರಕ್ತದಾನ ಮಾಡಿದ ರೈತರಿಗೆ ಹಣ್ಣುಹಂಪಲು ವಿತರಿಸಲಾಯಿತು, ಕಾರ್ಯಕ್ರಮಕ್ಕೆ ಭಾಗಿಯಾಗಿದ್ದ ರೈತರು ಸಾರ್ವಜನಿಕರಿಗೆ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ರೈತಸಂಘದ ತಾಲ್ಲೂಕು ಅಧ್ಯಕ್ಷ ದಿಲೀಪ್ ಹಂಗಳ, ಮಾಧು ಹಂಗಳ, ಕುಮಾರ್, ಲೋಕೇಶ್, ಜಿಲ್ಲಾಧ್ಯಕ್ಷ ಮಹದೇವಪ್ಪ ಮಾಡ್ರಹಳ್ಳಿ, ಕುಂದಕೆರೆ ಸಂಪತ್ತು, ಮಹೇಶ್ ಹಾಲಹಳ್ಳಿ, ಪ್ರಕಾಶ್ ಕಬ್ಬಹಳ್ಳಿ, ಶಿವಮಲ್ಲು ಹೊನ್ನೆಗೌಡನಹಳ್ಳಿ, ಶಿವಮಲ್ಲು ,ಅಮ್ಜಿತ್ ಖಾನ್, ಮಹೇಶ್, ಸಿದ್ದಪ್ಪ ಶಿರಮಳ್ಳಿ, ಶಿವಕುಮಾರ್, ಮಹದೇವಪ್ಪ, ಸೇರಿದಂತೆ ಮತ್ತಿತರರಿದ್ದರು.

# ನೀರಿನ ಸಮಸ್ಯೆಯಾಗದಿರಲಿ

## ಸಮಸ್ಯೆ ಕಂಡು ಬಂದರೆ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ

ಹನೂರು: ತಾಲೂಕಿನ 25 ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾವುದೇ ಗ್ರಾಮಗಳಲ್ಲಿಯೂ ಕುಡಿ ಯುವ ನೀರಿನ ಸಮಸ್ಯೆಯಾಗದಂತೆ ಪ್ರತಿಯೊಬ್ಬ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು ಒಂದೊಮ್ಮೆ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದರೆ ಅಂತಹ ಅಧಿಕಾರಿಗಳ ವಿರುದ್ಧ ಕಟ್ಟು ನಿಟ್ಟಿನ ಕ್ರಮ ವಹಿಸಲಾಗುವುದು ಎಂದು ಶಾಸಕ ಎಂ ಆರ್ ಮಂಜುನಾಥ್ ಖಡಕ್ ಎಚ್ಚರಿಕೆ ನೀಡಿದರು.



ಹನೂರು ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಕುಡಿಯುವ ನೀರಿನ ಸಂಬಂಧ ಕರೆಯಲಾಗಿದ್ದ ಪಿಡಿಒಗಳ ಸಭೆಯಲ್ಲಿ ಅವರು ಮಾತನಾಡಿದರು. ಹನೂರು ತಾಲೂಕಿನ ಕೌದಳ್ಳಿ, ಶೆಟ್ಟಳ್ಳಿ ಕುರಟ್ಟಿ ಹೊಸೂರು, ದಿನ್ನಳ್ಳಿ, ಮಾಟಳ್ಳಿ, ರಾಮಪುರ ಗ್ರಾಮ ಪಂಚಾಯಿತಿಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಇರುವುದು ಗಮನಕ್ಕೆ ಬಂದಿದೆ. ತುರ್ತಾಗಿ ಖಾಸಗಿ ಬೋರ್ವೆಲ್ ಗಳ ಮುಖಾಂತರ ಪ್ರತಿ ಗ್ರಾಮಗಳಿಗೂ ಕುಡಿಯುವ ನೀರು ಪೂರೈಕೆ ಮಾಡಬೇಕು ಒಂದೊಮ್ಮೆ ಖಾಸಗಿ ಬೋರ್ವೆಲ್ ಗಳಲ್ಲಿ ನೀರು ಸಿಗದಿದ್ದರೆ ಅಗತ್ಯವಿರುವ ಕಡೆ ತುರ್ತಾಗಿ ಕೊಳವೆಬಾವಿ ಕೊರೆಸಿ ನೀರಿನ ಸಮಸ್ಯೆ ಉಂಟಾಗದಂತೆ ಕ್ರಮ ವಹಿಸಬೇಕು. ಸಮಸ್ಯೆ ಹೆಚ್ಚಾಗದಂತೆ ಪ್ರತಿಯೊಬ್ಬರೂ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಿಗೆ ಖುದ್ದು ಇಒ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಎಇಇ ರವರು ಭೇಟಿ ನೀಡಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ತಾಕೀತು ಮಾಡಿದರು. ಸಭೆಯಲ್ಲಿ ತಹಸೀಲ್ದಾರ್ ಚೈತ್ರ, ಇಒ ಉಮೇಶ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಎಇಇ ಸುಧನ್ವ ನಾಗ್, ತಾಪಂ ವ್ಯವಸ್ಥಾಪಕ ರಮೇಶ್, ಕರ್ನಾಟಕ ಗೃಹ ಮಂಡಳಿಯ ಎಇಇ ಮಹೇಶ್ ಪಿಡಿಒಗಳಾದ ಸುರೇಶ್, ರಾಮು, ನಂಜುಂಡಸ್ವಾಮಿ, ಮಾದೇಶ್, ಶಿವಣ್ಣ, ಪುಷ್ಪಲತಾ,ದೊರೆಯ, ಸಿದ್ದಪ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು.

## ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ 50 ಲಕ್ಷ ವಿಶೇಷ ಅನುದಾನ

**ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಕಡೆ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ 50 ಲಕ್ಷ ವಿಶೇಷ ಅನುದಾನ ಮೀಸಲಿಡಲಾಗಿದೆ. ಮುಂದಿನ ದಿನಗಳಲ್ಲಿ ಮಳೆ ಬೀಳದಿದ್ದರೆ ಕುಡಿಯುವ ನೀರಿಗೆ ಮತ್ತಷ್ಟು ಸಮಸ್ಯೆ ಬರಲಿದೆ ಈ ನಿಟ್ಟಿನಲ್ಲಿ ಅಧಿಕಾರಿಗಳು ಮೂರು ತಿಂಗಳುಗಳ ಕಾಲ ನಿರಂತರವಾಗಿ ಯಾವುದೇ ಸಮಸ್ಯೆ ಬಂದರೂ ನನ್ನ ಗಮನಕ್ಕೆ ಅಥವಾ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಸಮಸ್ಯೆಯನ್ನು ಬಗೆಹರಿಸಬೇಕು ಒಟ್ಟಾರೆ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗ ದಂತೆ ಸಮಸ್ಯೆ ಬಗೆಹರಿಸಬೇಕು ಎಂದರು.**

**ಎರಡನೇ ಹಂತದಲ್ಲಿ 191 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಕೆ ಮಾಡುವ ಜಲ್ ಜೀವನ್ ಮಿಷನ್ ಯೋಜನೆ ಕಾಮಗಾರಿ ಕೆಲವು ಕಡೆ ಸಹಿತವಾಗಿರುವುದರಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ ಅರಣ್ಯ ಇಲಾಖೆಯಿಂದ ಪೈಪ್ ಲೈನ್ ಹಾಗೂ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಅನುಮತಿ ಸಿಕ್ಕರೆ ಕಾಮಗಾರಿ ಪೂರ್ಣಗೊಳಿಸಲು ಇನ್ನೂ ನಾಲ್ಕು ತಿಂಗಳುಗಳ ಕಾಲಾವಕಾಶ ಬೇಕಿದೆ. ಈಗಾಗಲೇ ಕಳೆದ ಆರು ತಿಂಗಳಿನಿಂದ ನಿರಂತರವಾಗಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಿದ್ದೇನೆ ಅತಿ ಶೀಘ್ರದಲ್ಲಿಯೇ ಈ ಕಾಮಗಾರಿಯನ್ನು ಪೂರ್ಣಗೊಳಿಸುವುದರ ಮೂಲಕ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.**

# ಅದಾನಿ ಸೋಲಾರ್ ಪ್ಲಾಂಟ್‌ನಿಂದ ಅನ್ನ ಸಂತರ್ಪಣೆ

ಹನೂರು: ಮಹಾ ಶಿವರಾತ್ರಿ ಜಾತ್ರಾ ಮಹೋತ್ಸವ ಅಂಗವಾಗಿ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುತ್ತಿರುವ ಪಾದಯಾತ್ರಿಗಳಿಗೆ ಅದಾನಿ ಸೋಲಾರ್ ಪ್ಲಾಂಟ್ ವತಿಯಿಂದ ಅನ್ನ ಸಂತರ್ಪಣ ಕಾರ್ಯವನ್ನು ಏರ್ಪಡಿಸಲಾಗಿತ್ತು.

ಕಳೆದ 5 ವರ್ಷಗಳಿಂದ ವಿವಿಧ ಸೇವೆ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು, ಈ ಬಾರಿಯ ಶಿವರಾತ್ರಿ ಸಾವಿರಾರು ಪಾದಯಾತ್ರಿಗಳಿಗೆ ಅನ್ನ ಸಂತರ್ಪಣ ಕಾರ್ಯವನ್ನು ಕೈಗೊಂಡಿತ್ತು.

ಅದಾನಿ ಸೋಲಾರ್ ಪ್ಲಾಂಟ್ ನ ಹೆಚ್.ಆರ್. ವೇಣುಗೋಪಾಲ್ ಅವರು ಮಾತನಾಡಿ, ಶಿವ, ಈಶ್ವರನ ಪ್ರತಿ ರೂಪ ಮಲೆ ಮಹದೇಶ್ವರ ಸ್ವಾಮಿಯ ಪುಣ್ಯ ಕ್ಷೇತ್ರಕ್ಕೆ ತೆರಳುತ್ತಿರುವ ಪಾದಯಾತ್ರಿಗಳಿಗೆ ಅನ್ನ ಸಂತರ್ಪಣಾ ಕಾರ್ಯ ನೆರವೇರಿಸುತ್ತಿರುವುದು ಸಂತಸ ಮತ್ತು ಸಾರ್ಥಕತೆಯನ್ನು ತಂದಿದೆ ಎಂದರು. ಪಿ.ಎಸ್.ಹೆಚ್. ಸೆಲ್ವಂ ಮಾತನಾಡಿ, ಮಲೆಮಹದೇಶ್ವರ ಬೆಟ್ಟಕ್ಕೆ ಅಪಾರ ಸಂಖ್ಯೆಯ ಭಕ್ತರು ಪಾದಯಾತ್ರೆಯಲ್ಲಿ ತೆರಳುತ್ತಾರೆ ಈ ವೇಳೆ ಅನೇಕ ಸಂಘ ಸಂಸ್ಥೆ, ದಾನಿಗಳು, ಮಾದಪ್ಪನ ಪರಮ ಸದ್ಭಕ್ತರು ತಮ್ಮ ಕೈಲಾದ ಸಹಾಯವನ್ನು ಮಾಡುವುದನ್ನು ಕಂಡು ಕಳೆದ 6 ವರ್ಷಗಳಿಂದ ನಮ್ಮ ಕೈಲಾದ ಅಳಿಲು ಸೇವೆಯನ್ನು ಮಾಡುತ್ತಿದ್ದೇವೆ. ಮಹದೇಶ್ವರ ಸ್ವಾಮಿ ಸರ್ವರಿಗೂ ಒಳಿತನ್ನು ಮಾಡಲಿ, ಇದೇ ರೀತಿ ಕಾರ್ಯ ಮಾಡಲು ಶಕ್ತಿಯನ್ನು ನೀಡಲಿ ಎಂದು ಶಿವರಾತ್ರಿ ಹಬ್ಬದ ಶುಭಾಶಯಗಳನ್ನು ಕೋರಿದರು. ಈ ಸಂದರ್ಭದಲ್ಲಿ ಎ ಎಸ್ ಒ ಪ್ರದೀಪ್ ಕುಮಾರ್, ಕೆಂಪರಾಜು, ಸಂತೋಷ್ ಕುಮಾರ್, ಸಿಬ್ಬಂದಿಗಳಾದ ಗೋವಿಂದ ರಾಜು, ಪ್ರಭುಸ್ವಾಮಿ, ಶಿವಶಂಕರ್, ನಂದೀಶ್, ಲೋಕೇಶ್ ಇನ್ನಿತರರು ಇದ್ದರು.



# ಟೋಲ್‌ನಲ್ಲಿ ಕನ್ನಡಫಲಕಕ್ಕೆ ಆಗ್ರಹ



ಮೈಸೂರು: ಪ್ರಜಾಪ್ರಭುತ್ವ ಶೇ.50ರಷ್ಟು ಇರುವುದರಿಂದ ಮತದಾನ ಹಾಕುತ್ತಿದ್ದೇವೆ. ನಾಯಕರನ್ನು ಆಯ್ಕೆ ಮಾಡಿಕೊಳ್ಳುವ ನಿಟ್ಟಿದ್ದೇವೆ. ಸಂವಿಧಾನದ ಅಡಿಯಲ್ಲಿ ಕಾರ್ಯಾಂಗ, ನ್ಯಾಯಾಂಗ ಕಲುಷಿತ ಯಾವುದು ಸಂವಿಧಾನ ಅಡಿಯಲ್ಲಿ ಅಣ್ಣ ಎನೇ ಚಿಕ್ಕಪ್ಪ ಹಾಕಿ ಸರಿಯಾದ ಸಂವಾದ ಕರ್ನಾಟಕ ಕನ್ನಡ ರಕ್ಷಣ ವೇದಿಕೆ ಜಿಲ್ಲಾ ಘಟಕದಿಂದ ರಾಜ್ಯದಲ್ಲಿ ಕನ್ನಡ ನಾಮಫಲಕಗಳ ಅನುಷ್ಠಾನಕ್ಕೆ ಆಗ್ರಹಿಸಿ ಮೈಸೂರು–ನಂಜನಗೂಡು ಹೆದ್ದಾರಿಯ ಟೋಲ್ ಮುಂಭಾಗ ಪ್ರತಿಭಟಿಸಿದರು.

ರಾಜ್ಯಾಧ್ಯಕ್ಷ ತ್ಯಾಗು ನಾಗರಾಜ್ ಮಾತನಾಡಿ, ಮೈಸೂರು ಜಿಲ್ಲೆಯಿಂದ ನಂಜನಗೂಡು ಕಡೆಗೆ ಹೋಗುವ ಟೋಲ್ ನಲ್ಲಿ ತ್ರಿಭಾಷೆ ನೀತಿ ಕುಂಠಿತವಾಗುವಂತೆ ಮಾಡಿ ಆಂಗ್ಲಭಾಷೆಯಲ್ಲಿ ಪ್ರಥಮ ಮಾನ್ಯತೆ ನೀಡಿ ಅಗೌರವ ತರುವಂತೆ ಮಾಡಿರುತ್ತಾರೆ. ಈ ಕೂಡಲೇ ಇದನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು. ಜಿಲ್ಲಾಘಟಕದ ಅಧ್ಯಕ್ಷ ಸಂತೋಷ್, ಪ್ರಧಾನ ಕಾರ್ಯದರ್ಶಿ ಗೌತಮ್ ವಿಶ್ವಕರ್ಮ, ಖಜಾಂಚಿ ಅನುರಾಜ್ ಗೌಡ, ಉಪಾಧ್ಯಕ್ಷ ಕೀರ್ತಿಕುಮಾರ್, ಸಿಂಧುವಳ್ಳಿ ಶಿವಕುಮಾರ್ ಉಪಸ್ಥಿತರಿದ್ದರು.

# ಆಡಿಟೋರಿಯಂ, ಗ್ರಂಥಾಲಯ ಸದುಪಯೋಗವಾಗಲಿ

ಹನೂರು : ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಡಿಟೋರಿಯಂ ಹಾಗೂ ಗ್ರಂಥಾಲಯ ನಿರ್ಮಾಣ ಮಾಡಲಾಗುತ್ತಿದ್ದೂ ಇದರ ಸದುಪಯೋಗವನ್ನು ಮಕ್ಕಳು ಪಡೆದುಕೊಳ್ಳಬೇಕು ಎಂದು ಶಾಸಕ ಎಂ ಆರ್ ಮಂಜುನಾಥ್ ತಿಳಿಸಿದರು.

ಪಟ್ಟಣದ ಆರ್ ಎಸ್ ದೊಡ್ಡಿ ಗ್ರಾಮದಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಡಿಟೋರಿಯಂ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ನಂತರ ಮಾತನಾಡಿದರು. ಹನೂರು ತಾಲೂಕು ಕೇಂದ್ರದಲ್ಲಿರುವ ಪ್ರಥಮ ದರ್ಜೆ ಕಾಲೇಜಿನಲ್ಲಿ ಈಗಾಗಲೇ ಸುಸಜ್ಜಿತ ಕಟ್ಟಡ, ನುರಿತ ಶಿಕ್ಷಕರು, ಇದ್ದು ಗ್ರಾಮೀಣ ಭಾಗದ ಮಕ್ಕಳು ಇಲ್ಲಿಯೇ ವಿದ್ಯಾ ಭ್ಯಾಸ ಪಡೆದುಕೊಂಡು ಉತ್ತಮ ವಾದ ಅಂಕ ಗಳಿಸುವ ಮೂಲಕ ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳುವ ಮೂಲಕ ಸಮಾಜಕ್ಕೆ ಒಳ್ಳೆಯ ವ್ಯಕ್ತಿಗಳಾಗಬೇಕು ಎಂದರು.

### ಹೆಚ್ಚಿನ ದಾಖಲಾತಿಯಾಗಲಿ

ತಾಲೂಕು ಕೇಂದ್ರದಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಈಗಾಗಲೇ ಎಲ್ಲ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿದ್ದು,ಮಕ್ಕಳು ಹೆಚ್ಚಿನ ದಾಖಲಾತಿ ಪಡೆದುಕೊಳ್ಳಲು ಮುಂದಾಗಬೇಕಿದೆ.ಹಾಗಾಗಿ ಇಲ್ಲಿರುವ ಸೌಲಭ್ಯಗಳ ಬಗ್ಗೆ ಪ್ರಚಾರ ಮಾಡುವ ಮೂಲಕ ಮುಂದಿನ ಶೈಕ್ಷಣಿಕ ವರ್ಷಕ್ಕೆ ಹೆಚ್ಚು ಹೆಚ್ಚು ಮಕ್ಕಳು ದಾಖಲಾಗುವಂತೆ ನೋಡಿಕೊಳ್ಳಿ ಎಂದರು.

### ವಿದ್ಯಾರ್ಥಿಗಳೊಂದಿಗೆ ಸಂವಾದ



ಗುದ್ದಲಿ ಪೂಜೆಯ ಸಂದರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿನಿಯರ ಜೊತೆಗೆ ಮಾತು ಕತೆ ನಡೆಸಿ ಮಾತನಾಡಿದ ಅವರು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಅಂಕಕ್ಕೆ ಸೀಮಿತವಾದರೆ ಸಾಲದು. ಪ್ರಸ್ತುತ ದಿನಮಾನಗಳಲ್ಲಿ ಪ್ರತಿನಿತ್ಯ ಸುದ್ದಿ ಪತ್ರಿಕೆಗಳನ್ನು ಓದುವ ಮೂಲಕ ಹೆಚ್ಚಿನ ಜ್ಞಾನ ಪಡೆದುಕೊಳ್ಳಬೇಕು. ಜೊತೆಗೆ ಹೆಚ್ಚು ಹೆಚ್ಚು ಓದುವ ಮೂಲಕ ಸರ್ಕಾರಿ ನೌಕರಿ ಗಿಟ್ಟಿಸಿ ಕೊಳ್ಳಲು ಮುಂದಾಗಬೇಕಿದೆ. ಆ ನಿಟ್ಟಿನಲ್ಲಿ ನಿಮ್ಮ ಕನಸು ದೊಡ್ಡ ಪ್ರಮಾಣದಲ್ಲಿರಲಿ. ಆ ಕನಸು ನನಸು ಮಾಡಲು ಛಲ ಬಿಡದೆ ಓದುವ ಮೂಲಕ ನನಸು ಮಾಡಿಕೊಳ್ಳಲು ಮುಂದಾಗಬೇಕಿದೆ ಎಂದರು. ಇದೆ ಸಂದರ್ಭದಲ್ಲಿ ಕಾಲೇಜಿನ ಗ್ರಂಥ ಪಾಲಕ ಸುರೇಂದ್ರ, ಮುಖಂಡರಾದ ರಾಜುಗೌಡ, ನಟರಾಜು ಇದ್ದರು

# ಮೂಲಸೌಕರ್ಯ ಒದಗಿಸಲು ಆದ್ಯತೆ

ಚಾಮರಾಜನಗರ, ತಾಲೂಕಿನ ಶಿವಪುರ ಗ್ರಾಮಪಂಚಾಯಿತಿ ವ್ಯಾಪ್ತಿಯ ಮಲ್ಲಯ್ಯನಪುರ ಗ್ರಾಮದಲ್ಲಿ ಜಿಲ್ಲಾ ಪಂಚಾಯಿತಿ ಹಾಗೂ ಶಿಕ್ಷಣಇಲಾಖೆ ಯಿಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರ್ಮಿಸಿರುವ ನೂತನ ಒಂದು ಕೊಠಡಿಯನ್ನು ಶಾಸಕ ಸಿ.ಪುಟ್ಟರಂಗ ಶೆಟ್ಟಿ ಉದ್ಘಾಟಿಸಿದರು.

ನಂತರ ಅವರು ಮಾತನಾಡಿ, ರಾಜ್ಯಸರ್ಕಾರ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಸಮವಸ್ತ್ರ, ವಿದಾರ್ಥಿ ವೇತನ ಸೇರಿದಂತೆ ಹಾಸ್ಟೆಲ್ ಸೌಲಭ್ಯ ಕಲ್ಪಿಸುತ್ತಿದೆ, ವಿದ್ಯಾರ್ಥಿಗಳು ಸರ್ಕಾರದ ಸೌಲಭ್ಯ ಪಡೆದುಕೊಂಡು ಸುಶಿಕ್ಷಿತರಾಗಬೇಕು, ಚಾಮರಾಜನಗರದಲ್ಲಿ ಪದವಿಪೂರ್ವ, ಪದವಿ, ಸುವರ್ಣಗಂಗೋತ್ರಿ, ಎಂಜಿನಿಯರಿಂಗ್ ಕಾಲೇಜು, ಕೇಂದ್ರಿಯವಿದ್ಯಾಲಯ, ಕೃಷಿವಿಜ್ಞಾನಕಾಲೇಜು, ಮೆಡಿಕಲ್ ಕಾಲೇಜು, ಕರ್ನಾಟಕ ಪಬ್ಲಿಕ್ ಶಾಲೆ, ಆದರ್ಶ ಶಾಲೆಗಳಿದ್ದು, ಪ್ರಸ್ತುತ ವ್ಯಾಸಂಗ ಮಾಡುವ ಹಾಗೂ ಮುಂದಿನಸಾಲಿನ ವಿದ್ಯಾರ್ಥಿಗಳ ಉನ್ನತಶಿಕ್ಷಣಕ್ಕೆ ಪೂರಕವಾಗಲಿವೆ ಎಂದರು. ಯಾವುದೇ ದೇಶ ಅಭಿವೃದ್ಧಿಯತ್ತ ಸಾಗಬೇಕಾದರೆ ಅದು ಶಿಕ್ಷಣದಿಂದ ಮಾತ್ರ, ಸಂವಿಧಾನಾತ್ಮಕ ಸೌಲಭ್ಯ ಪಡೆಯಲು ಇಂದು ಶಿಕ್ಷಣವೇ ಆಧಾರ ಎಂಬುದನ್ನು ನಾವು ಮನಗಾಣಬೇಕು, ಓದುವ ಮಕ್ಕಳ ಕೈಗೆ ಪೋಷಕರು



ಮೊಬೈಲ್ ಕೊಡಬಾರದು, ಅವರ ಓದಿನಬಗ್ಗೆ ಗಮನ ಹರಿಸಬೇಕು, ತಮ್ಮ ಅಧಿಕಾರವಧಿ ಇರುವವರೆಗೂ ಶಾಲೆಗಳಿಗೆ ಬೇಕಾದ ಕುಡಿಯುವನೀರು, ಕೊಠಡಿಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಗ್ರಾ.ಪಂ ಮಾಜಿ ಅಧ್ಯಕ್ಷೆ ಎಂ.ಸಿ.ಮಹದೇವಮ್ಮ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಅಂಬಿಕಾ, ಉಪಾಧ್ಯಕ್ಷ ಮರಿಸ್ವಾಮಿ, ಸದಸ್ಯ ಎಪಿಎಂಸಿ ಸದಸ್ಯ ಎ.ಎಸ್.ಪ್ರದೀಪ್, ಬಿಇಒ ಹನುಮಶೆಟ್ಟಿನಿವೃತ್ತ ಬಿಇಒ ಸೋಮಣ್ಣೇಗೌಡ ಸಿಆರ್ಪಿ ಮಹದೇವಯ್ಯ, ಮುಖ್ಯಶಿಕ್ಷಕಿ ಶಶಿಕಲಾ, ಅಸ್ಲಂಪಾಷ, ಯಜಮಾನ್ ನಂಜುಂಡಸ್ವಾಮಿ, ಸುಬ್ಬೇಗೌಡ, ಮಲ್ಲಯ್ಯನಪುರ ಶಿವಣ್ಣ ನೋಡಲ್ ಅಧಿಕಾರಿಗಳಾದ ತ್ಯಾಗರಾಜು, ಶಿವಕುಮಾರ್, ಪೋಷಕರು, ಸಹಶಿಕ್ಷಕರು, ಗ್ರಾಮಸ್ಥರು ಹಾಜರಿದ್ದರು.

## ವಾಯುವಿನಿಂದ ನೀರು ಉತ್ಪಾದಿಸುವ ಘಟಕ ಪರಿಶೀಲನೆ

# ಸರ್ಕಾರಿ ಶಾಲೆಗೆ ಜಿಲ್ಲಾಧಿಕಾರಿ ಶ್ರೀರೂಪ ಭೇಟಿ

ಚಾಮರಾಜನಗರ, ನಗರ ಸಮೀಪದ ಸೋಮವಾರ ಪೇಟೆ ಸರ್ಕಾರಿ ಪ್ರಾಥಮಿಕ ಶಾಲೆಗೆ ಜಿಲ್ಲಾಧಿಕಾರಿ ಶ್ರೀರೂಪ ಅವರು ಸೋಮವಾರ (ಫೆ.9) ಭೇಟಿ ನೀಡಿ, ಏರೋ ವಾಟರ್ ಕಂಪನಿಯವರು ಶಾಲೆಯಲ್ಲಿ ಅಳವಡಿಸಿರುವ ದಿನಕ್ಕೆ 100 ಲೀಟರ್ (ಎಲ್.ಪಿ.ಡಿ) ಸಾಮರ್ಥ್ಯದ ವಾಯುವಿನಿಂದ ನೀರು ಉತ್ಪಾದಿಸುವ (ಏರ್–ಟು–ವಾಟರ್) ಘಟಕದ ಕಾರ್ಯವೈಖರಿ ಪರಿಶೀಲಿಸಿದರು. ವಾತಾವರಣದ ಗಾಳಿಯಿಂದ ಶುದ್ಧ ಕುಡಿಯುವ ನೀರನ್ನು ಉತ್ಪಾದಿಸುವ ಈ ಘಟಕವು ಸ್ಥಳೀಯ ತೇವಾಂಶ ಮತ್ತು ತಾಪಮಾನ ಸೇರಿದಂತೆ ಪರಿಸರ ಪರಿಸ್ಥಿತಿಗಳಿಗೆ ಹೇಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ಪರಿಶೀಲಿಸಿದರು. ಘಟಕದ ಕಾರ್ಯಾಚರಣೆ ವಿಧಾನಗಳು ಮತ್ತು ಉತ್ಪಾದಿತ ನೀರಿನ ಶುದ್ಧತೆಯನ್ನು ವೀಕ್ಷಿಸಿದರು.

ಅಂತರ್ಜಲ ಕುಸಿತವಾಗುತ್ತಿರುವುದು ಹಾಗೂ ಮುಂದಿನ ದಿನಗಳಲ್ಲಿ ತೀವ್ರ ಬೇಸಿಗೆ ಎದುರಾಗುವ ಹಿನ್ನೆಲೆಯಲ್ಲಿ ಶುದ್ಧ ಕುಡಿಯುವ ನೀರಿನ ಅವಶ್ಯಕತೆ ಹೆಚ್ಚಿರುವ ಆದಿವಾಸಿ ವಸತಿಗಳು ಹಾಗೂ ಶಾಲೆಗಳಲ್ಲಿ ಇಂತಹ ವಾಯುವಿನಿಂದ ನೀರು ಉತ್ಪಾದಿಸುವ



ಘಟಕಗಳನ್ನು ಸ್ಥಾಪಿಸುವ ಸಾಧ್ಯತೆ ಕುರಿತು ಚರ್ಚೆಗಳು ನಡೆಯುತ್ತಿವೆ.

ನೀರಿನ ಕೊರತೆ ಮತ್ತು ಅಂತರ್ಜಲ ಕುಸಿತದಂತಹ ದೀರ್ಘಕಾಲಿಕ ಸಮಸ್ಯೆಗಳಿಗೆ ವಾಯುವಿನಿಂದ ನೀರು ಉತ್ಪಾದಿಸುವ ತಂತ್ರಜ್ಞಾನಗಳು ಪರಿಣಾಮಕಾರಿ ಪರಿಹಾರವಾಗಿವೆ. ಜಿಲ್ಲೆಯಲ್ಲಿ ದೂರದ ಹಾಗೂ ಆದಿವಾಸಿ ಪ್ರದೇಶಗಳಲ್ಲಿ ಇಂತಹ ನವೀನ ತಂತ್ರಜ್ಞಾನಗಳನ್ನು ಅಳವಡಿಸುವುದು ಸುಸ್ಥಿರ ಮತ್ತು ಭವಿಷ್ಯ ನಿರ್ದೇಶಿತ ಅಭಿವೃದ್ಧಿಯತ್ತ ಜಿಲ್ಲಾಡಳಿತದ ಬದ್ಧತೆಯನ್ನು ತೋರಿಸುತ್ತದೆ.

ಶಾಲಾ ಭೇಟಿಯ ವೇಳೆ ಜಿಲ್ಲಾಧಿಕಾರಿಗಳು ಶಾಲೆಯ ಎಲ್ಲಾ ತರಗತಿಗಳಿಗೆ ಭೇಟಿ ನೀಡಿ, ವಿದ್ಯಾರ್ಥಿಗಳೊಂದಿಗೆ ಅವರ ಕಲಿಕೆ ಕುರಿತು ಸಂವಾದ ನಡೆಸಿದರು. ಶಾಲೆಯ ಶೈಕ್ಷಣಿಕ ವಾತಾವರಣವನ್ನು ಪರಿಶೀಲಿಸಿದರು. ಶಾಲೆಯ ಅಗತ್ಯಗಳು ಮತ್ತು ಮೂಲಭೂತ ಸೌಲಭ್ಯಗಳ ಕುರಿತು ಪ್ರಸ್ತಾವನೆ ಸಲ್ಲಿಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚನೆ ನೀಡಿದರು.

## ಫೆಬ್ರವರಿ 21 ರಂದು ಜಿಲ್ಲಾ ಮಟ್ಟದ ಉದ್ಯೋಗ ಮೇಳ

# ಉದ್ಯೋಗ ಆಕಾಂಕ್ಷಿಗಳಿಗೆ ಉದ್ಯೋಗ ಕಲ್ಪಿಸುವುದು ನಮ್ಮ ಗುರಿ: ಕೆ. ಆರ್. ನಂದಿನಿ

**ಮಂಡ್ಯ:** ಫೆಬ್ರವರಿ 21 ರಂದು ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಳ್ಳಲಾಗಿರುವ ಜಿಲ್ಲಾ ಮಟ್ಟದ ಉದ್ಯೋಗ ಮೇಳ ದಲ್ಲಿ ಎಲ್ಲಾ ವರ್ಗದ ಉದ್ಯೋಗ ಆಕಾಂಕ್ಷಿಗಳಿಗೆ ಉದ್ಯೋಗವನ್ನು ಕಲ್ಪಿಸುವುದು ಮತ್ತು ವಿಶೇಷವಾಗಿ ವಿಶೇಷ ಚೇತನರಿಗೆ ಉದ್ಯೋಗವನ್ನು ಕಲ್ಪಿಸಲು ಅಗತ್ಯ ಕ್ರಮಗಳನ್ನು ಮಾಡಿಕೊಳ್ಳಿ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಕೆ ಆರ್ ನಂದಿನಿ ಅವರು ಹೇಳಿದರು.



ಕೌಶಲ್ಯಭಿವೃದ್ಧಿ, ಉದ್ಯಮಶೀಲತಾ ಮತ್ತು ಜೀವನೋಪಾಯ ಇಲಾಖೆ, ದೀನ್ ದಯಾಳ್ ಅಂತ್ಯೋದಯ ಗ್ರಾಮೀಣ ಕೌಶಲ್ಯ ಯೋಜನೆ, ಜಿಲ್ಲಾಡಳಿತ, ಜಿಲ್ಲಾಪಂಚಾಯತ್ ಹಾಗೂ ಮಂಡ್ಯ ವಿಶ್ವವಿದ್ಯಾನಿಲಯದ ಸಹಭಾಗಿತ್ವದಲ್ಲಿ "ಜಿಲ್ಲಾಮಟ್ಟದ ಉದ್ಯೋಗ ಮೇಳ – 2026 " ವನ್ನು ಕಲಾಭವನದಲ್ಲಿ ಫೆಬ್ರವರಿ 21 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆ ವರಗೆ ಮಂಡ್ಯ ವಿಶ್ವವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದು ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಪೂರ್ವಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಶೇಷ ಚೇತನ ಅಭ್ಯರ್ಥಿಗಳನ್ನು ಗುರುತಿಸಿ ವಿಶೇಷ ಚೇತನ ಅಭ್ಯರ್ಥಿಗಳಿಗಾಗಿ ನಿಗಧಿಪಡಿಸಿರುವ "ವಿಶೇಷ ಕೊಠಡಿ"ಯಲ್ಲಿ ಸಂದರ್ಶನಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಸೂಚಿಸಿದರು.

ತಾಲ್ಲೂಕುವಾರು ವ್ಯಾಪ್ತಿಯಲ್ಲಿ ಉದ್ಯೋಗ ಮೇಳ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಬೇಕು.ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳನ್ನು ಶಿಷ್ಟಾಚಾರದಂತೆ ಆಹ್ವಾನಿಸಬೇಕು ಎಂದು ಹೇಳಿದರು.

ಉದ್ಯೋಗ ಮೇಳ ಕುರಿತು ಜನ ಪ್ರತಿನಿಧಿಗಳ ವೀಡಿಯೋ/ ಆಡಿಯೋ ಸಂದೇಶಗಳನ್ನು ಚಿತ್ರೀಕರಿಸಿ, ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸ್ವಚ್ಛ ವಾಹಿನಿ ವಾಹನಗಳ (ಗ್ರಾಮೀಣ ಮತ್ತು ನಗರ ಪ್ರದೇಶ) ಮೂಲಕ ವ್ಯಾಪಕ ಪ್ರಚಾರ ಮಾಡಬೇಕುಎಂದು ತಿಳಿಸಿದರು.

**ವಿಶೇಷ ಚೇತನರಿಗೆ ಹೆಚ್ಚು ಒತ್ತು ನೀಡಿ**

ಶಿಕ್ಷಣ ಸಂಸ್ಥೆಗಳಲ್ಲಿ ಹಾಗೂ ಹೆಚ್ಚಿನ ಜನ ಸಂದಣಿ ಇರುವ ಪ್ರದೇಶಗಳಲ್ಲಿ ಬ್ಯಾನರ್, ಪೋಸ್ಟರ್ ಗಳನ್ನು ಅಳವಡಿಸಬೇಕು. 18 ವರ್ಷ ಮೇಲ್ಪಟ್ಟ ಪುರುಷ, ಮಹಿಳಾ, ತೃತೀಯ ಲಿಂಗಿಗಳು ಹಾಗೂ ವಿಶೇಷ ವರ್ಗ, ವಿಶೇಷಚೇತನ ಅಭ್ಯರ್ಥಿಗಳು ಭಾಗವಹಿಸಬಹುದು.

ಉದ್ಯೋಗದಾತ ಸಂಸ್ಥೆಗಳ ನೋಂದಣಿ ಮತ್ತು ನಿರ್ವಹಣಾ ಸಮಿತಿಯು ವಿವಿಧ ವಲಯಗಳ ಉದ್ಯೋಗದಾತ ಸಂಸ್ಥೆಗಳನ್ನು ಸಂಪರ್ಕಿಸಿ, ನೋಂದಾಯಿಸಿಕೊಳ್ಳಬೇಕು ಉದ್ಯೋಗದಾತ ಸಂಸ್ಥೆಗಳಿಗೆ ಅಗತ್ಯವಿರುವ ಅಭ್ಯರ್ಥಿಗಳ ವಿದ್ಯಾರ್ಹತೆ ವಿವರಗಳನ್ನು ಸಂಗ್ರಹಿಸಬೇಕು ಎಂದು ಹೇಳಿದರು. ತಾಲ್ಲೂಕುವಾರು ಎಲ್ಲಾ ಸಂಜೀವಿನಿ ಸಿಬ್ಬಂದಿಗಳು ಎಲ್ಲಾ ಶಿಕ್ಷಣ ಸಂಸ್ಥೆಗಳ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಬೇಕು ಅಭ್ಯರ್ಥಿಗಳ ನೋಂದಣಿ ಮಾಡಬೇಕು

ಉದ್ಯೋಗ ಮೇಳದಲ್ಲಿ ಭಾಗವಹಿಸುವ ಉದ್ಯೋಗದಾತ ಸಂಸ್ಥೆಗಳ ಪಟ್ಟಿ ಸಂಗ್ರಹಿಸಿ ನೋಂದಣಿಯಿಸಬೇಕು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪ ಸಂಖ್ಯಾಂತರು, ವಿಶೇಷ ಚೇತನರು, ಲೈಂಗಿಕ ಅಲ್ಪಸಂಖ್ಯಾಂತರು, ವಿಶೇಷ ವರ್ಗದ ನಿರುದ್ಯೋಗಿಗಳಿಗೆ ನೋಂದಾಯಿಸಿಕೊಳ್ಳುವಂತೆ ತಿಳಿಸಿದರು.

ಹಾಗೂ ಉದ್ಯೋಗ ಮೇಳ ದಿನದಂದು ಬೆಳಿಗ್ಗೆ 9.00 ಗಂಟೆಗೆ ಅಭ್ಯರ್ಥಿಗಳು ಮಂಡ್ಯ ವಿಶ್ವ ವಿದ್ಯಾಲಯ ಆವರಣದಲ್ಲಿ ಹಾಜರಾಗುವಂತೆ ತಿಳಿಸಿದರು.

ಉದ್ಯೋಗ ಮೇಳದಂದು ನೋಂದಣಿ ಕೌಂಟರ್ ಮತ್ತು ಸಹಾಯವಾಣಿ ಕೇಂದ್ರವನ್ನು ಸ್ಥಾಪಿಸಬೇಕು ಉದ್ಯೋಗದಾತ ಸಂಸ್ಥೆಗಳಿಗೆ, ಅಭ್ಯರ್ಥಿಗಳಿಗೆ ಪ್ರತ್ಯೇಕ ಕೌಂಟರ್ ನಿರ್ಮಿಸಿ ನೀರು ಮತ್ತು ಊಟದ ವ್ಯವಸ್ಥೆ ಕಲ್ಪಿಸಬೇಕು ಸಂದರ್ಶನ ಕೊಠಡಿಗಳಲ್ಲಿ ಚೇರ್ ಟೇಬಲ್ ಹಾಗೂ ಅಗತ್ಯ ಸೌಲಭ್ಯ ಕಲ್ಪಿಸಬೇಕು ಎಂದು ಸೂಚಿಸಿದರು.

ಸಂದರ್ಶನ ಕೊಠಡಿಗಳನ್ನು ಸ್ವಚ್ಛಗೊಳಿಸಲು ಅಗತ್ಯ ಡಿ ಗ್ರೂಪ್ ಸಿಬ್ಬಂದಿಗಳನ್ನು ನಿಯೋಜಿಸುವುದು ಸಂದರ್ಶನ ಕೊಠಡಿಗಳ ಬಗ್ಗೆ ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಬ್ಯಾನರ್ ಗಳನ್ನು ಅಳವಡಿಸಬೇಕು ಎಂದು ಹೇಳಿದರು.

ವೇದಿಕೆ ಕಾರ್ಯಕ್ರಮಕ್ಕೆ ಶಿಷ್ಟಾಚಾರದನ್ವಯ ಅಗತ್ಯ ವ್ಯವಸ್ಥೆ ಕಲ್ಪಿಸಿ ವೇದಿಕೆ ಕಾರ್ಯಕ್ರಮ ನಂತರ ಸ್ವ–ಉದ್ಯೋಗ ಕುರಿತು ತಜ್ಞರಿಂದ ಉಪಾನ್ಯಾಸವನ್ನು ಏರ್ಪಡಿಸಬೇಕು ಎಂದು ಸೂಚಿಸಿದರು.

ಸ್ವಚ್ಛ ವಾಹಿನಿ ವಾಹನಗಳೊಂದಿಗೆ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಶುಚಿತ್ರ ಮತ್ತು ನೈರ್ಮಲ್ಯ ಕಾಪಾಡಬೇಕು ಹಾಗೂ ಉದ್ಯೋಗ ಮೇಳ ದಿನದಂದು ಅಗತ್ಯ ವೈದ್ಯಕೀಯ ಸೌಲಭ್ಯಗಳೊಂದಿಗೆ ಸಿಬ್ಬಂದಿಗಳನ್ನು ನೇಮಿಸಬೇಕು ಹಾಗೂ ಆಂಬ್ಯುಲೆನ್ಸ್ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ತಿಳಿಸಿದರು.

ಉದ್ಯೋಗ ಆಕಾಂಕ್ಷಿಗಳು ಆಧಾರ್ ಕಾರ್ಡ್ ಮತ್ತು ಫೋಟೋ ಅರ್ಹತಾ ಅಂಕ ಪಟ್ಟಿಯನ್ನು ತರಬೇಕು.ಅಭ್ಯರ್ಥಿಗಳು ಉದ್ಯೋಗ ಮೇಳದಲ್ಲಿ ನೊಂದಾಯಿಸಿಕೊಂಡವರಿಗೆ ಊಟದ ಟೋಕನ್ ಅನ್ನು ನೀಡಬೇಕು ಸಭೆಯಲ್ಲಿ ಸಮಾಜಕಲ್ಯಾಣ ಇಲಾಖೆಯ ಶ್ರೀನಿವಾಸ್, ಕೃಷಿ ಇಲಾಖೆ ಅಧಿಕಾರಿ ಹರ್ಷ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕ ಆಶಾ, ಕುಷ್ಟರೋಗ ನಿರ್ಮೂಲನಾಧಿಕಾರಿ ಡಾ. ಸೋಮಶೇಖರ್, ಕೌಶಲ್ಯ ಅಭಿವೃದ್ಧಿ ಅಧಿಕಾರಿ ನಾಗನಂದ್ ರವರು ಕಾರ್ಯಕ್ರಮ ದಲ್ಲಿ ಉಪಸ್ಥಿತರಿದ್ದರು.

## ಐತಿಹಾಸಿಕ ಪರಂಪರೆ ರಕ್ಷಣೆಗೆ ಜಿಲ್ಲಾಡಳಿತ ಬದ್ಧ

**ಕೋಲಾರ:** ಜಿಲ್ಲೆಯ ಐತಿಹಾಸಿಕ ಅಸ್ಮಿತೆಯಾದ ಶಾಸನಗಳು, ವೀರಗಲ್ಲುಗಳು ಹಾಗೂ ಪುರಾತತ್ವ ಸ್ಮಾರಕಗಳನ್ನು ವೈಜ್ಞಾನಿಕವಾಗಿ ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಜಿಲ್ಲೆಯ ವೈಭವಯುತ ಇತಿಹಾಸವನ್ನು ಪರಿಚಯಿಸಲು ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ ಎಂದು ಜಿಲ್ಲಾಧಿಕಾರಿ ಡಾ. ಎಂ.ಆರ್. ರವಿ ಅವರು ತಿಳಿಸಿದರು.

ಶುಕ್ರವಾರ ಕೆಸ್ವಾನ್ ಸಭಾಂಗಣದಲ್ಲಿ ನಡೆದ ಜಿಲ್ಲಾ ಪಾರಂಪರಿಕ ಸಂರಕ್ಷಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯ ಪಾರಂಪರಿಕ ತಾಣಗಳ ಅಭಿವೃದ್ಧಿ ಹಾಗೂ ಭದ್ರತೆಗೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಪ್ರಮುಖ ಸೂಚನೆಗಳನ್ನು ನೀಡಿದರು.

**ಸುಸಜ್ಜಿತ ಜಿಲ್ಲಾ ವಸ್ತು ಸಂಗ್ರಹಾಲಯಕ್ಕೆ 5 ಎಕರೆ ಜಮೀನು:** ಜಿಲ್ಲೆಯಲ್ಲಿ ಪತ್ತೆಯಾಗಿರುವ ಸುಮಾರು 2,000ಕ್ಕೂ ಹೆಚ್ಚು ಶಾಸನಗಳು ಹಾಗೂ ಅರಕ್ಷಿತ ವೀರಗಲ್ಲುಗಳನ್ನು ಒಂದೆಡೆ ಸಂರಕ್ಷಿಸಲು ಬೃಹತ್ ವಸ್ತು ಸಂಗ್ರಹಾಲಯವನ್ನು ನಿರ್ಮಿಸಲಾಗುವುದು. ಈ ಯೋಜನೆಗಾಗಿ ಜಿಲ್ಲಾಡಳಿತ ವತಿಯಿಂದ 5 ಎಕರೆ ಜಮೀನು ನೀಡಲು ಸಿದ್ಧವಿದ್ದು, ಈಕಂಬಳ್ಳಿ ಬಳಿ ಒಳಾಂಗಣ ಮತ್ತು ಹೊರಾಂಗಣ ಸಂಗ್ರಹಾಲಯ ರೂಪಿಸುವ ಬಗ್ಗೆ ಸಾಧ್ಯತಾ ವರದಿ ನೀಡಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.



## ಮರಳಿಹಳ್ಳಿಗೆ ಗಾಂಧೀಜಿ ಮತ್ತು ಗ್ರಾಮಸ್ವರಾಜ್ ಕುರಿತು ಚಿಂತನ –ಮಂಥನ ಕಾರ್ಯಕ್ರಮ

**ಮಂಡ್ಯ:** ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ಹೊರಾವರಣ ಸ್ನಾತಕೋತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಬಿ. ಹೊಸೂರು ಕಾಲೋನಿ, ಮಂಡ್ಯ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಬೆಂಗಳೂರು ಹಾಗೂ ಗ್ರಾಮ ಪಂಚಾಯಿತಿ ಬಿ .ಹೊಸೂರು ಇವರ ಸಹಯೋಗದೊಂದಿಗೆ ಗಾಂಧಿ ಗ್ರಾಮ ಭಾರತ "ಮರಳಿ ಹಳ್ಳಿಗೆ" ಗಾಂಧೀಜಿ ಮತ್ತು ಗ್ರಾಮಸ್ವರಾಜ್ ಕುರಿತ ಚಿಂತನ– ಮಂಥನ ಕಾರ್ಯಕ್ರಮವನ್ನು ಫೆಬ್ರವರಿ 16 ಹಾಗೂ ಫೆಬ್ರವರಿ 17ರಂದು ನೂತನ ಗಾಂಧಿ ಭವನ ಬಿ .ಹೊಸೂರು ಕಾಲೋನಿ (ಕೇಂದ್ರೀಯ ವಿದ್ಯಾಲಯದ ಹಿಂಭಾಗ), ಹಮ್ಮಿಕೊಳ್ಳಲಾಗಿದೆ.

**ಫೆ. 16 ಮತ್ತು 17ರಂದು ಗಾಂಧಿ ಗ್ರಾಮ ಭಾರತ**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಂಡ್ಯ ವಿಧಾನಸಭಾ ಶಾಸಕರು ಪಿ .ರವಿಕುಮಾರ್ ಗೌಡರವರು ವಹಿಸಲಿದ್ದಾರೆ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರು ನಾಡೋಜ ಡಾ. ವೂಡೇ ಪಿ. ಕೃಷ್ಣ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿಗಳು ಪ್ರೊ. ವಿಜಯಾ ಬಿ .ಕೋರಿಶೆಟ್ಟಿ, ಜಿಲ್ಲಾಧಿಕಾರಿಗಳು ಡಾ. ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಡಾ. ಶೋಭರಾಣಿ ವಿ .ಜೆ, ಕರ್ನಾಟಕ ಸಂಘದ ಅಧ್ಯಕ್ಷರು ಪ್ರೊ. ಜೈಪ್ರಕಾಶಗೌಡ ರವರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ದಿಕ್ಸೂಚಿ ನುಡಿಯನ್ನು ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸದಸ್ಯರು ಪ್ರೊ. ನಟರಾಜ್ ಬೂದಾಳು ರವರು ನುಡಿಯಲಿದ್ದಾರೆ.

**ಸಮಾರೋಪ ಸಮಾರಂಭ:** ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳಿಂದ ಅನುಭವ ಹಂಚಿಕೆ.

ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಅಧ್ಯಕ್ಷರು ಪ್ರೊ. ಜೈಪ್ರಕಾಶಗೌಡ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕದಲ್ಲಿ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರು ಹರೀಶ್ ಟಿ.ಕೆ, ಬಿ.ಹೊಸೂರು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮಹೇಶ್ ಎನ್ .ಹೆಚ್ ರವರುಗಳು ಭಾಗವಹಿಸಲಿದ್ದಾರೆ.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಹೊರಾವರಣ ಸ್ನಾತಕೋತ್ತರ ಅಧ್ಯಯನ ಕೇಂದ್ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶೇಷ ಅಧಿಕಾರಿಗಳು ಪ್ರೊಫೆಸರ್ ವಿಷ್ಣು ಎಂ. ಶಿಂದೆ ರವರು ವಹಿಸಲಿದ್ದಾರೆ.

## ಪಾಂಡವಪುರ ತಾಲ್ಲೂಕು ಕಚೇರಿಗೆ ಜಿಲ್ಲಾಧಿಕಾರಿಗಳ ಅನಿರೀಕ್ಷಿತ ಭೇಟಿ

**ಮಂಡ್ಯ:** ಜಿಲ್ಲಾಧಿಕಾರಿಗಳು ಶುಕ್ರವಾರ ಪಾಂಡವಪುರ ತಾಲ್ಲೂಕು ಕಚೇರಿಗೆ ಅನಿರೀಕ್ಷಿತ ಭೇಟಿ ನೀಡಿ ಕಚೇರಿಯ ವಿವಿಧ ಶಾಖೆಗಳ ಕಾರ್ಯನಿರ್ವಹಣೆ, ಕಡತ ವಿಲೇವಾರಿ, ಸಿಬ್ಬಂದಿಗಳ ಹಾಜರಾತಿ ಹಾಗೂ ಸಾರ್ವಜನಿಕ ಸೇವೆಗಳ ಅನುಷ್ಠಾನವನ್ನು ಪರಿಶೀಲಿಸಿದರು.



ಇ–ಆಫೀಸ್‌ನಲ್ಲಿನ ಬಾಕಿ ಕಡತಗಳನ್ನು ಕಾಲಮಿತಿಯೊಳಗೆ ವಿಲೇವಾರಿ ಮಾಡುವಂತೆ ಹಾಗೂ ಆದಾಯ, ಜಾತಿ, ನಿವಾಸ, ವಂಶವೃಕ್ಷ, ಭೂಹಿಡುವಳಿ ಪ್ರಮಾಣಪತ್ರ ಸೇರಿದಂತೆ ಎಲ್ಲಾ ಸೇವೆಗಳನ್ನು ಸಕಾಲ ಯೋಜನೆಯಡಿ ನಿಗದಿತ ಅವಧಿಯಲ್ಲಿಯೇ ಒದಗಿಸುವಂತೆ ಕಟ್ಟುನಿಟ್ಟಾಗಿ ಸೂಚಿಸಿದರು. ವಿಳಂಬವಾದಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ನಂತರ ಉಪ ವಿಭಾಗಾಧಿಕಾರಿಗಳ ಕಚೇರಿಗೆ ಭೇಟಿ ನೀಡಿ ಸಭೆ ನಡೆಸಿ ಸಾರ್ವಜನಿಕ ಸೇವೆಗಳ ತ್ವರಿತ ವಿತರಣೆ ಹಾಗೂ ಸರ್ಕಾರದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಕುರಿತು ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರ್, ಪಾಂಡವಪುರ ಸೇರಿದಂತೆ ಕಚೇರಿ ಸಿಬ್ಬಂದಿಗಳು ಹಾಜರಿದ್ದರು.

## ಸಂಕ್ಷಿಪ್ತ ಸುದ್ದಿ

### ಕರಾಮುವಿ ಪ್ರವೇಶಾತಿ ನವೀಕರಣಕ್ಕೆ ಅರ್ಜಿ

**ರಾಮನಗರ:** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2021–22 ರಿಂದ 2024–25ರ ಜನವರಿ ಆವೃತ್ತಿಗಳಲ್ಲಿ ಪ್ರಥಮ, ದ್ವಿತೀಯ ಸಾಲಿಗೆ ಪ್ರವೇಶಾತಿ ಪಡೆದ ಯುಜಿ ಪದವಿ ವಿದ್ಯಾರ್ಥಿಗಳು ಹಾಗೂ 2022–23 ಮತ್ತು 2024–25ನೇ ಸಾಲಿನ ಜನವರಿ ಆವೃತ್ತಿಗಳಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶಾತಿ ಪಡೆದ ಪಿಜಿ ಪದವಿ ವಿದ್ಯಾರ್ಥಿಗಳಿಗೆ, 2025–26ನೇ ಸಾಲಿನಲ್ಲಿ (ಜನವರಿ ಆವೃತ್ತಿ) ದ್ವಿತೀಯ, ತೃತೀಯ ವರ್ಷದ ಬಿ.ಎ., ಬಿ.ಕಾಂ., ಬಿ.ಎಸ್ಸಿ., (ಜನರಲ್/ ಹೋಮ್ ಸೈನ್ಸ್/ ಐಟಿ.,/ ಬಿ.ಸಿ.ಎ.,/ ಬಿ.ಬಿ.ಎ.) ಹಾಗೂ ದ್ವಿತೀಯ ಬಿ.ಎಸ್.ಡಬ್ಲ್ಯು. ಮತ್ತು ಅಂತಿಮ ವರ್ಷದ ಎಂ.ಎ., ಎಂ.ಕಾಂ., ಎಂ.ಬಿ.ಎ., ಎಂ.ಎಸ್ಸಿ., ಎಂ.ಸಿ.ಎ., ಎಂ.ಎಸ್.ಡಬ್ಲ್ಯು., ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶಾತಿ ನವೀಕರಣಕ್ಕಾಗಿ ಬೋಧನಾ ಶುಲ್ಕ ಪಾವತಿಸಲು ಅಧಿಸೂಚನೆ ಹೊರಡಿಸಲಾಗಿದೆ. ಈಗಾಗಲೇ ಪ್ರವೇಶಾತಿ ನವೀಕರಣ ಶುಲ್ಕವನ್ನು ಪಾವತಿಸಲು ಪ್ರಾರಂಭವಾಗಿದ್ದು, ವಿದ್ಯಾರ್ಥಿಗಳು ಪ್ರವೇಶಾತಿ ನವೀಕರಣ ಮಾಡಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಪ್ರಾದೇಶಿಕ ನಿರ್ದೇಶಕರು, ಕರಾಮುವಿ ರಾಮನಗರ ಪ್ರಾದೇಶಿಕ ಕೇಂದ್ರ, ನಂ. 103, ಇ ಬ್ಲಾಕ್, ಶಾಂತಿನಿಕೇತನ ಸಮೂಹ ಶಿಕ್ಷಣ ಸಂಸ್ಥೆ, ಬಿ.ಎಂ. ರಸ್ತೆ, ವಿವೇಕಾನಂದನಗರ, ರಾಮನಗರ–562159. ದೂ. 8861732487, 8618501602, 9743184848 ಹಾಗೂ 9900356226ಅನ್ನು ಸಂಪರ್ಕಿಸುವಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕರಾದ ಲಲಿತಾಂಬ ಎಂ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಹಿಳಾ ಉದ್ದಿಮೆದಾರರಿಂದ ಅರ್ಜಿ

**ರಾಮನಗರ:** ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಗೃಹಲಕ್ಷ್ಮೀ ಡಿಜಿಟಲ್ ಮಾರ್ಕೆಟಿಂಗ್ ಆಪ್‌ನಲ್ಲಿ ಮಹಿಳಾ ಉದ್ಯಮಿಗಳನ್ನು ನೋಂದಾಯಿಸಲು 2026ರ ಜ.9 ರಿಂದ ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್ ಆಪ್ ಅನ್ನು ಲಾಂಚ್ ಮಾಡಲಾಗಿದೆ. ಬೆಂಗಳೂರು ದಕ್ಷಿಣ ಜಿಲ್ಲೆಯಿಂದ ಮಹಿಳಾ ಉದ್ಯಮಿಗಳು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಡಿಜಿಟಲ್ ಮಾರ್ಕೆಟಿಂಗ್ ಆಪ್ ನಲ್ಲಿ ನೋಂದಾಯಿಸಿಕೊಳ್ಳಲು ಮಹಿಳಾ ಉದ್ದಿಮೆದಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗೆ ತಾಲ್ಲೂಕು ಮಟ್ಟದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಜಿಲ್ಲಾ ಮಟ್ಟದಲ್ಲಿ ಉಪನಿರ್ದೇಶಕರ ಕಚೇರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪಂಚಾಯತ್ ಭವನ, 2ನೇ ಮಹಡಿ ಬಿ.ಎಂ. ರಸ್ತೆ ಬೆಂಗಳೂರು ದಕ್ಷಿಣ ಇಲ್ಲಿ ಮಹಿಳಾ ಅಭಿವೃದ್ಧಿ ನಿಗಮದ ಅಭಿವೃದ್ಧಿ ನಿರೀಕ್ಷಕರನ್ನು ಅಥವಾ ಮೊಬೈಲ್ ಸಂಖ್ಯೆ : 9480221411 ಅನ್ನು ಸಂಪರ್ಕಿಸುವಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಂತ ಸೇವಾಲಾಲ್ ಜಯಂತಿ ನಾಳೆ

**ರಾಮನಗರ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶ್ರೀಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮವನ್ನು ಫೆ.15ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಕಂದಾಯ ಭವನದಲ್ಲಿರುವ ಮೂರನೇ ಮಹಡಿಯ ಕೊಠಡಿ ಸಂಖ್ಯೆ: 409ರಲ್ಲಿ ಆಯೋಜಿಸಲಾಗಿದೆ.



ಶ್ರೀ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮಕ್ಕೆ ಜಿಲ್ಲೆಯ ಎಲ್ಲಾ ಸಮುದಾಯದ ಅಧ್ಯಕ್ಷರು, ಕಾರ್ಯದರ್ಶಿ, ಮುಖಂಡರು, ಎಲ್ಲಾ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಕಡ್ಡಾಯವಾಗಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಹಾ ಶಿವ ರಾತ್ರಿ -ಉಪವಾಸ ಜಾಗರಣೆಯ ಪವಿತ್ರ ದಿನ

ಮಹಾ ಶಿವರಾತ್ರಿ ಎನ್ನುವುದು ಕೇವಲ ಒಂದು ಹಬ್ಬವಲ್ಲ; ಅದು ಅಧ್ಯಾತ್ಮ ಮತ್ತು ವಿಜ್ಞಾನಗಳ ಸಂಗಮದ ದಿನ . ಮಹಾ ಶಿವರಾತ್ರಿಗೆ ವಿಶೇಷ ಮಹತ್ವವಿದೆ. ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಆಚರಿಸಲಾಗುವ ಈ ಪರ್ವದ ಕುರಿತಾದ ಸಮಗ್ರ ಮಾಹಿತಿ ಇಲ್ಲಿದೆ.

**ಶಿವತತ್ವದ ಅನ್ವೇಷಣೆ**

ಭಾರತೀಯ ಪರಂಪರೆಯಲ್ಲಿ ಶಿವ ಎಂದರೆ ಕೇವಲ ಒಬ್ಬ ದೇವನಲ್ಲ, ಅದೊಂದು ಅನಂತ ತತ್ವ. 'ಶಿವ' ಎಂದರೆ ಮಂಗಳಕರವಾದುದು ಎಂದರ್ಥ. ಪ್ರಕೃತಿಯ ಲಯಕರ್ತನಾದ ಈ ಪರಶಿವನು ಶೂನ್ಯದಿಂದ ಹುಟ್ಟಿ ಶೂನ್ಯದಲ್ಲಿಯೇ ಲೀನವಾಗುವ ಮಹಾಶಕ್ತಿ. ಮಹಾ ಶಿವರಾತ್ರಿಯ ಈ ಪವಿತ್ರ ದಿನದಂದು ಜಗತ್ತಿನ ಪ್ರತಿಯೊಂದು ಅಣುವಿನಲ್ಲೂ ಶಿವಚೈತನ್ಯವು ಜಾಗೃತವಾಗಿರುತ್ತದೆ ಎಂಬ ನಂಬಿಕೆಯಿದೆ. ಇದು ಕತ್ತಲೆಯಿಂದ ಬೆಳಕಿನೆಡೆಗೆ, ಅಜ್ಞಾನದಿಂದ ಸುಜ್ಞಾನದತ್ತ ಸಾಗುವ ಹಾದಿಯ ಸಂಕೇತ.

**ಶಿವಪುರಾಣದ ಕಥೆಗಳು ಮತ್ತು ಮಹತ್ವ**


ಮಹಾ ಶಿವರಾತ್ರಿಯ ಉಗಮದ ಬಗ್ಗೆ ಶಿವಪುರಾಣದಲ್ಲಿ ಹಲವಾರು ಆಸಕ್ತಿದಾಯಕ ಮತ್ತು ಅರ್ಥಪೂರ್ಣ ಕಥೆಗಳಿವೆ. ಅವುಗಳಲ್ಲಿ ಪ್ರಮುಖವಾದ ಕಥೆ ಹೀಗಿದೆ.

ಸಮುದ್ರ ಮಂಥನ ಮತ್ತು ನೀಲಕಂಠ

ದೇವ–ದಾನವರು ಅಮೃತಕ್ಕಾಗಿ ಸಮುದ್ರ ಮಂಥನ ಮಾಡುವಾಗ ಮೊದಲು ಹಾಲಾಹಲ ಎಂಬ ಭಯಾನಕ ವಿಷವು ಹೊರಬಂದಿತು. ಇಡೀ ಸೃಷ್ಟಿಯನ್ನು ನಾಶಮಾಡಬಲ್ಲ ಆ ವಿಷವನ್ನು ಶಿವನು ಕುಡಿದು ಜಗತ್ತನ್ನು ರಕ್ಷಿಸಿದನು. ವಿಷವು ಗಂಟಲಲ್ಲೇ ಉಳಿದು ಅವನ ಕಂಠ ನೀಲವಾಯಿತು. ಈ ತ್ಯಾಗವನ್ನು ಸ್ಮರಿಸುವ ದಿನವೂ ಇದೇ ಆಗಿದೆ.

**ಪೂಜಾ ವಿಧಿ ಮತ್ತು ಮಂತ್ರಗಳ ಶಕ್ತಿ**

ಶಿವರಾತ್ರಿಯಂದು ಶಿವನನ್ನು ಆರಾಧಿಸಲು ಅತ್ಯಂತ ಸರಳ ಮತ್ತು ಪ್ರಭಾವಶಾಲಿ ಮಾರ್ಗವೆಂದರೆ ಶಿವ ಪಂಚಾಕ್ಷರಿ ಮಂತ್ರ ಮತ್ತು ಸ್ತೋತ್ರಗಳು.



**ಶಿವ ಪಂಚಾಕ್ಷರಿ ಮಂತ್ರ**

**"ಓಂ ನಮಃ ಶಿವಾಯ"**

ಈ ಐದು ಅಕ್ಷರಗಳು ಪಂಚಭೂತಗಳನ್ನು (ನೆಲ, ಜಲ, ಅಗ್ನಿ, ವಾಯು, ಆಕಾಶ) ಪ್ರತಿನಿಧಿಸುತ್ತವೆ. ಮನಸ್ಸನ್ನು ಶಾಂತಗೊಳಿಸಲು ಈ ಮಂತ್ರದ ಜಪ ಅತ್ಯಗತ್ಯ.

**ಶ್ರೀ ಶಿವಾಷ್ಟಕಮ್ (ಒಂದು ಅಂಶ)**

**ಪ್ರಭುಂ ಪ್ರಾಣನಾಥಂ ವಿಭುಂ ವಿಶ್ವನಾಥಂ ಜಗನ್ನಾಥ ನಾಥಂ ಸದಾನಂದ ಭಾಜಂ ।**
**ಭವದ್ಭವ್ಯ ಭೂತೇಶ್ವರಂ ಭೂತನಾಥಂ ಶಿವಂ ಶಂಕರಂ ಶಂಭುಮೀಶಾನಮೀಡೇ ॥**

**ಅರ್ಥ:** ಪ್ರಾಣನಾಥನಾದ, ವಿಶ್ವಕ್ಕೆ ಅಧಿಪತಿಯಾದ, ಶಾಶ್ವತ ಆನಂದವನ್ನು ನೀಡುವ, ಭೂತಗಣಗಳ ಒಡೆಯನಾದ ಆ ಶಂಕರನಿಗೆ ನಾನು ಶರಣಾಗುತ್ತೇನೆ.

**ಉಪವಾಸ ಮತ್ತು ಜಾಗರಣೆಯ ತತ್ವ**

ಶಿವರಾತ್ರಿಯ ಪೂಜೆಯಲ್ಲಿ ಎರಡು ಪ್ರಮುಖ ಅಂಗಗಳಿವೆ: ಉಪವಾಸ ಮತ್ತು ಜಾಗರಣೆ.


**1. ಉಪವಾಸ:** ಆಹಾರದ ಮೇಲಿನ ನಿಯಂತ್ರಣವು ಮನಸ್ಸಿನ ಮೇಲಿನ ನಿಯಂತ್ರಣಕ್ಕೆ ದಾರಿಯಾಗುತ್ತದೆ. ದೇಹವನ್ನು ಶುದ್ಧೀಕರಿಸುವ ಮೂಲಕ ಸಾತ್ವಿಕ ಭಾವನೆಯನ್ನು ಬೆಳೆಸಿಕೊಳ್ಳುವುದು ಇದರ ಉದ್ದೇಶ.

**2. ಜಾಗರಣೆ:** ರಾತ್ರಿಯಿಡೀ ನಿದ್ರಿಸದೆ ಎಚ್ಚರವಾಗಿರುವುದು ಕೇವಲ ದೈಹಿಕ ಜಾಗರಣೆಯಲ್ಲ, ಅದು ಆತ್ಮದ ಜಾಗೃತ ಸ್ಥಿತಿ. ಅಧ್ಯಾತ್ಮದ ಹಾದಿಯಲ್ಲಿರುವವರಿಗೆ ಭೂಮಿಯ ಕಾಂತೀಯ ವಲಯದಲ್ಲಿ ಆಗುವ ಬದಲಾವಣೆಗಳು ಈ ರಾತ್ರಿಯಂದು ಬೆನ್ನೆಲುಬನ್ನು ನೇರವಾಗಿಟ್ಟು ಕುಳಿತರೆ ಶಕ್ತಿಯ ಸಂಚಲನಕ್ಕೆ ಪೂರಕವಾಗಿರುತ್ತವೆ ಎಂಬುದು ಯೋಗ ವಿಜ್ಞಾನದ ಮಾತು.

**ಭಾರತದಾದ್ಯಂತ ಸಂಭ್ರಮದ ಆಚರಣೆ**

**ಭಾರತವು ವೈವಿಧ್ಯತೆಯ ನಾಡು. ಪ್ರಾದೇಶಿಕವಾಗಿ ಶಿವರಾತ್ರಿಯನ್ನು ಬೇರೆ ಬೇರೆ ರೀತಿಯಲ್ಲಿ ಆಚರಿಸಲಾಗುತ್ತದೆ:**

- ಕರ್ನಾಟಕ: ದಕ್ಷಿಣದ ಕಾಶಿ ಎಂದು ಕರೆಯಲ್ಪಡುವ ನಂಜನಗೂಡು, ಧರ್ಮಸ್ಥಳ, ಮತ್ತು ಗೋಕರ್ಣದ ಮಹಾಬಲೇಶ್ವರ ದೇವಾಲಯಗಳಲ್ಲಿ ವಿಶೇಷ ಪೂಜೆಗಳು ನಡೆಯುತ್ತವೆ. ಮನೆಮನೆಗಳಲ್ಲಿ 'ಶಿವನ ಹಬ್ಬ'ವಾಗಿ ಆಚರಿಸುತ್ತಾರೆ.
- ಉತ್ತರ ಭಾರತ: ವಾರಣಾಸಿಯ ಕಾಶಿ ವಿಶ್ವನಾಥ ದೇವಾಲಯದಲ್ಲಿ ಗಂಗಾ ಆರತಿಯೊಂದಿಗೆ ಸಂಭ್ರಮ ಮನೆ ಮಾಡಿರುತ್ತದೆ. ಭಕ್ತರು ಕಾಶಿಯ ಗಲ್ಲಿಗಲ್ಲಿಗಳಲ್ಲಿ ಶಿವನ ಸ್ಮರಣೆ ಮಾಡುತ್ತಾರೆ.
- ತಮಿಳುನಾಡು: ಅಣ್ಣಾಮಲೈಯಾರ್ ದೇವಾಲಯದಲ್ಲಿ 'ಗಿರಿವಲಂ' ಅಂದರೆ ಬೆಟ್ಟದ ಸುತ್ತ ಪ್ರದಕ್ಷಿಣೆ ಹಾಕುವುದು ಅತ್ಯಂತ ಪುಣ್ಯದ ಕೆಲಸವೆಂದು ಪರಿಗಣಿಸಲಾಗುತ್ತದೆ.
- ಕಾಶ್ಮೀರ: ಇಲ್ಲಿ ಶಿವರಾತ್ರಿಯನ್ನು 'ಹೇರತ್' ಎಂದು ಕರೆಯಲಾಗುತ್ತದೆ. ಅಲ್ಲಿನ ಪಂಡಿತರು ಇದನ್ನು ಕುಟುಂಬದ ಹಬ್ಬವಾಗಿ ಅತ್ಯಂತ ವಿಭಿನ್ನವಾಗಿ ಆಚರಿಸುತ್ತಾರೆ.



ಆಚರಣೆಯ ವೈಜ್ಞಾನಿಕ ಆಯಾಮ

ನಮ್ಮ ಪೂರ್ವಜರು ಪ್ರತಿಯೊಂದು ಹಬ್ಬವನ್ನೂ ಪ್ರಕೃತಿಯ ಬದಲಾವಣೆಗಳಿಗೆ ಅನುಗುಣವಾಗಿ ರೂಪಿಸಿದ್ದಾರೆ. ಚಳಿಗಾಲ ಮುಗಿದು ಬೇಸಿಗೆ ಆರಂಭವಾಗುವ ಈ ಸಂಧಿಕಾಲದಲ್ಲಿ ದೇಹದ ಆರೋಗ್ಯ ಕಾಪಾಡಿಕೊಳ್ಳಲು ಲಘು ಆಹಾರ (ಉಪವಾಸ) ಮತ್ತು ಧ್ಯಾನ ಸಹಕಾರಿ. ಅಲ್ಲದೆ, ಈ ದಿನದಂದು ಭೂಮಿಯ ಉತ್ತರ ಗೋಳಾರ್ಧದಲ್ಲಿ ಮನುಷ್ಯನ ಪ್ರಾಣಶಕ್ತಿಯು ಸಹಜವಾಗಿಯೇ ಮೇಲ್ಮುಖವಾಗಿ ಚಲಿಸುತ್ತದೆ ಎನ್ನಲಾಗುತ್ತದೆ.



। ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

ಮಹಾ ಶಿವರಾತ್ರಿ ಎಂದರೆ ನಮ್ಮೊಳಗಿರುವ ಅಜ್ಞಾನದ ಕತ್ತಲೆಯನ್ನು ಸರಿಸುವುದು. ಶಿವನು ಸುಲಭವಾಗಿ ಒಲಿಯುವವನು (ಭೋಲೇನಾಥ). ನಮಗೆ ಬೇಕಿರುವುದು ಭಕ್ತಿ ಮತ್ತು ಏಕಾಗ್ರತೆ ಮಾತ್ರ. ಈ ದಿನದ ಜಾಗರಣೆಯು ನಮ್ಮ ಜೀವನದ ಮುಂದಿನ ದಿನಗಳಿಗೆ ಹೊಸ ಭರವಸೆ ಮತ್ತು ಶಾಂತಿಯನ್ನು ನೀಡಲಿ.

ನಮ್ಮ ದೈನಂದಿನ ಗಡಿಬಿಡಿಯ ಬದುಕಿನಲ್ಲಿ, ವರ್ಷಕ್ಕೊಮ್ಮೆ ಬರುವ ಈ ರಾತ್ರಿ ನಮ್ಮ ಅಂತರಾಳವನ್ನು ಇಣುಕಿ ನೋಡಲು ಇರುವ ಉತ್ತಮ ಅವಕಾಶ. ಶಾಂತಿಯಿಂದ ಕುಳಿತು ಆ 'ಶಿವೋಹಂ' (ನಾನೇ ಶಿವ) ಎಂಬ ಸತ್ಯವನ್ನು ಅರಿತುಕೊಳ್ಳೋಣ.

# ಗುಲಾಬಿ ಪ್ರೀತಿಯ ಸಂಕೇತವಷ್ಟೇ ಅಲ್ಲ , ಉತ್ತಮ ಆರೋಗ್ಯಕ್ಕೂ ವರದಾನ



ಸೌಮ್ಯಸನತ್

ಗುಲಾಬಿ, ರೋಸ್ ಎಂದರೆ ಯಾರಿಗೆ ಇಷ್ಟವಿಲ್ಲ ಹೇಳಿ? ಗುಲಾಬಿಯು ಹೂವುಗಳ ರಾಣಿ. ಅಷ್ಟೆ ಅಲ್ಲಾ ಇದು ಪ್ರೀತಿ ಮತ್ತು ಸೌಂದರ್ಯದ ಸಂಕೇತ. ಮುಳ್ಳಿನ ಗಿಡದಲ್ಲಿದ್ದರು, ಸದಾ ನಗು ನಗುವ ಗುಲಾಬಿಯ ಅಂದ ಎಂತವರನ್ನು ನಾಚಿಸುತ್ತದೆ. ಸೌಂದರ್ಯ ಹಾಗೂ ಪ್ರೀತಿಯ ಪ್ರತೀಕವಾದ ಗುಲಾಬಿ ಹೂ ಆರೋಗ್ಯ ಪ್ರಯೋಜನಗಳನ್ನು ನೀಡುವಲ್ಲಿಯೂ ಸಹ ತನ್ನದೇ ಆದ ಛಾಪು ಹೊಂದಿದೆ.

ಚರ್ಮದ ಪ್ರಯೋಜನಗಳು ಸೇರಿದಂತೆ ಇನ್ನಿತರ ಆರೋಗ್ಯಕರ ಲಾಭಗಳಿಗೆ ಗುಲಾಬಿ ಹೂಗಳನ್ನು ಯಾವ ರೀತಿ ಬಳಸಬಹುದು ಎಂಬುದನ್ನು ನಾವಿಂದು ನೋಡೋಣ.

1. ಗುಲಾಬಿ ಹೂಗಳ ದಳಗಳು ದೇಹದ ಮೆಟಬಾಲಿಸಂ ಪ್ರಕ್ರಿಯೆಯನ್ನು ಉತ್ತೇಜಿಸುವಲ್ಲಿ ಮತ್ತು ದೇಹದಿಂದ ವಿಷಕಾರಿ ಅಂಶಗಳನ್ನು ದೂರ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ ಮತ್ತು ದೇಹದ ತೂಕ ಕೂಡ ಇದರಿಂದ ನಿರ್ವಹಣೆಯಾಗುತ್ತದೆ.
2. ದೇಹದಲ್ಲಿ ವಿಪರೀತ ಉಷ್ಣದ ಪ್ರಕಾರದಿಂದ ಅಥವಾ ಹೆಚ್ಚು ಹೊತ್ತು ನಿರಂತರವಾಗಿ ಪ್ರತಿ ದಿನ ಕುಳಿತು ಕೆಲಸ ಮಾಡುವವರಿಗೆ ದೇಹದಿಂದ ವಿಷಕಾರಿ ಅಂಶಗಳನ್ನು ದೂರ ಮಾಡುವ ಜೊತೆಗೆ ಮೂಲವ್ಯಾಧಿ ಸಮಸ್ಯೆಗೆ ಪರಿಹಾರ ನೀಡಿ ನೋವು ನಿವಾರಣೆ ಮಾಡುತ್ತದೆ.
3. ಗುಲಾಬಿ ಹೂವಿನ ದಳಗಳನ್ನು ತಿನ್ನುತ್ತಾ ಹೋದರೆ ಮುಖದ ಮೇಲಿನ ಕಲೆಗಳು ದೂರವಾಗುತ್ತವೆ. ದಿನಂಪ್ರತಿ ಸೇವಿಸಿದರೆ ನಿಮ್ಮ ಸೌಂದರ್ಯ ಹೆಚ್ಚಾಗುತ್ತಾ ಹೋಗುತ್ತೆ. ಅದಕ್ಕೆ ಸಾಧ್ಯವಾದ್ರೆ ದಿನ ಗುಲಾಬಿ ದಳಗಳನ್ನು ತಿನ್ನಿರಿ.
4. ದಿನವೂ ಗುಲಾಬಿ ದಳಗಳನ್ನು ತಿನ್ನುತ್ತಾ ಹೋದರೆ, ಹೃದಯ ಸಮಸ್ಯೆ ನಿಯಂತ್ರಣ ಮಾಡುವುದರ ಜೊತೆಗೆ ಮಾನಸಿಕ ಹಾಗೂ ದೈಹಿಕ ಶಕ್ತಿಯನ್ನು ಸಹ ಹೆಚ್ಚಿಸುತ್ತದೆ.
5. ತಾಜಾ ಗುಲಾಬಿ ದಳಗಳನ್ನು ಕುದಿಯುವ ನೀರಿನಲ್ಲಿ ಹಾಕಿ ಚೆನ್ನಾಗಿ ಕುದಿಸಿ, ಸ್ವಲ್ಪ ಜೇನುತುಪ್ಪ ಮತ್ತು ದಾಲ್ಚಿನಿ ಪುಡಿ ಹಾಕಿ ಮಿಶ್ರಣ ಮಾಡಬೇಕು. ಬೆಳಗಿನ ಸಮಯದಲ್ಲಿ ಖಾಲಿಹೊಟ್ಟೆಯಲ್ಲಿ ಕುಡಿದ್ರೆ ಬೊಜ್ಜು ಕರಗಲು ಸಹಾಯವಾಗುತ್ತೆ.
6. ದೇಹದ ಆಯಾಸ ಮತ್ತು ಒತ್ತಡ, ನಿದ್ರಾಹೀನತೆ ಮತ್ತು ಸುಸ್ತು ಜೊತೆಗೆ ದೇಹದ ಕಿರಿಕಿರಿಯನ್ನು ಗುಲಾಬಿ ಹೂವಿನ ದಳಗಳು ಕಡಿಮೆ ಮಾಡುತ್ತವೆ. ಮಾನಸಿಕ ಒತ್ತಡ ಮತ್ತು ಖಿನ್ನತೆಯನ್ನು ದೂರ ಮಾಡುತ್ತದೆ
7. ಗುಲಾಬಿ ಹೂವಿನ ವಾಸನೆಯನ್ನು ಕುಡಿಯುವುದರಿಂದ ಶ್ವಾಸಕೋಶದ ಸಮಸ್ಯೆ ಪರಿಹಾರವಾಗುತ್ತದೆಯಂತೆ. ಸ್ನಾನ ಮಾಡುವಾಗ ಬಿಸಿ ನೀರಿಗೆ ಗುಲಾಬಿ ಹೂವಿನ ದಳಗಳನ್ನು ಹಾಕಿ ಸ್ವಲ್ಪ ಹೊತ್ತು ಬಿಟ್ಟು ಆನಂತರ ಸ್ನಾನ ಮಾಡಿದರೆ, ಗುಲಾಬಿ ಹೂವಿನ ಸುವಾಸನೆ ನಿಮ್ಮ ಮನಸ್ಸನ್ನು ಮುದಗೊಳಿಸುತ್ತದೆ.






**ಬಾಯಲ್ಲಿ ನೀರೂರಿಸುವ ಗುಲ್ಕನ್ ತಿನಿಸಿನಲ್ಲಿದೆ ಔಷಧೀಯ ಗುಣಾಂಶಗಳು** ಗುಲ್ಕನ್ ಅಥವಾ ರೋಸ್ ಪೆಟಲ್ ಜಾಮ್ ಎನ್ನುವುದು ಒಂದು ಸಿಹಿ ಪದಾರ್ಥ. ಇದರಲ್ಲಿನ ಪೋಷಕಾಂಶಗಳ ಮಹತ್ವವನ್ನು ಗುರುತಿಸಿ ಔಷಧೀಯ ವಸ್ತುವನ್ನಾಗಿ ಬಳಸಲಾಗುತ್ತಿದೆ.

1. ದೇಹವನ್ನು ತಂಪು ಮಾಡುವ ಗುಣ ಹೊಂದಿರುವ ಗುಲ್ಕನ್, ಮೌತ್ ಫ್ರೆಶನರ್ ಆಗಿ ಕೆಲಸ ಮಾಡುತ್ತದೆ. ಸುಸ್ತು, ಅಲಸ್ಯ, ತುರಿಕೆ, ನೋವನ್ನು ನಿಯಂತ್ರಿಸುವ ಗುಣಗಳನ್ನು ಹೊಂದಿದೆ.
2. ಅಲ್ಲದೆ ಅಂಗೈ ಮತ್ತು ಅಂಗಾಲುಗಳಲ್ಲಿ ಸೆಕೆ, ಉರಿ ಆಗುತ್ತಿದ್ದಲ್ಲಿ ಅದನ್ನು ನಿಯಂತ್ರಿಸಲು ಸಹಕಾರಿ. ಆಂಟಿ ಆಕ್ಸಿಡೆಂಟ್ ಗಳಿಂದ ತುಂಬಿರುವಂತಹ ಇದು ದೇಹದ ಕೋಶಗಳು ಪುನರ್ ಉತ್ಪತ್ತಿಯಾಗಲು ನೆರವಾಗುತ್ತದೆ.
3. ಒಂದರಿಂದ 2 ಚಮಚ ಗುಲ್ಕನ್ ಸೇವಿಸುವುದರಿಂದ ವೇಗವಾಗಿ ಹೈಪರ್ ಅಸಿಡಿಟಿ ಹಾಗೂ ಹೊಟ್ಟೆ ಉರಿ ಕಡಿಮೆ ಮಾಡಬಹುದು. ಹಾಗೆ ಅಲ್ಸರ್ ಹಾಗೂ ಕರುಳಿನಲ್ಲಿ ಬಾವು ಇದ್ದರೆ ಅದನ್ನು ಕಡಿಮೆ ಮಾಡುತ್ತದೆ.
4. ಬಾಯಿ ಹುಣ್ಣು ಕಡಿಮೆ ಮಾಡಲು, ಹಲ್ಲಿನ ಬಲವನ್ನು ಹೆಚ್ಚಿಸಲು, ಮುಟ್ಟಿನ ಸಮಯದಲ್ಲಿ ಕಾಡುವ ಹೊಟ್ಟೆ ನೋವನ್ನು ಕಡಿಮೆ ಮಾಡಲು, ಜೀರ್ಣಶಕ್ತಿಯನ್ನು ಹೆಚ್ಚಿಸಲು ಇದು ಸಹಾಯ ಮಾಡುತ್ತದೆ.
5. ದೇಹದಿಂದ ವಿಷ ವಸ್ತುಗಳನ್ನು ಹೊರ ಹಾಕಿ ಶುದ್ಧಿ ಮಾಡುವ ಕಾರ್ಯವನ್ನು ಗುಲ್ಕನ್ ಮಾಡುತ್ತದೆ. ಅಷ್ಟೇ ಅಲ್ಲದೆ ಚರ್ಮದ ಆರೋಗ್ಯಕ್ಕೂ ಉತ್ತಮ.

ಇಷ್ಟೆಲ್ಲಾ ಉಪಯೋಗ ಹೊಂದಿರುವ ಗುಲ್ಕನ್ ತಯಾರಿಯಲ್ಲಿ ಸಕ್ಕರೆಯನ್ನು ಬಳಸಲಾಗುತ್ತದೆ. ಆದ್ದರಿಂದ ತೊಳೆದ ಗುಲಾಬಿಗಳನ್ನು ನೆರಳಿನಲ್ಲಿ ಒಣಗಿಸಿ ಜೇನುತುಪ್ಪವನ್ನು ಉಪಯೋಗಿಸಿ ಮನೆಯಲ್ಲಿಯೇ ಗುಲ್ಕನ್ ತಯಾರಿಸಿ ಬಳಸುವುದು ಉತ್ತಮ.



**ರೋಸ್ ವಾಟರ್ ನ ಪ್ರಯೋಜನಗಳು ಮತ್ತು ಅದನ್ನು ಹೇಗೆ ಬಳಸುವುದು**

ಮುಖದ ಅಂದ ಹೆಚ್ಚಿಸಲು ಉಪಯೋಗಕ್ಕೆ ಬರುವ ಯಾವ ಅಪಾಯವೂ ಇಲ್ಲದಂತಹ ಒಂದು ಸುರಕ್ಷಿತ ದ್ರವ ಎಂದರೆ ರೋಸ್ ವಾಟರ್. ರೋಸ್ ವಾಟರ್ ಅನ್ನು ಕೇವಲ ಬ್ಯೂಟಿ ಹೆಚ್ಚಿಸಲು ಮಾತ್ರ ಬಳಸಲಾಗುತ್ತದೆ ಎಂಬುವುದಕ್ಕಿಂತ ಅದರಿಂದ ಇನ್ನೂ ಹಲವಾರು ಪ್ರಯೋಜನಗಳಿವೆ ಎಂದರೆ ತಪ್ಪಾಗಲಾರದು. ದೇಹದ ಚರ್ಮದ ಕಾಂತಿ ಹೆಚ್ಚಿಸುವುದರಿಂದ, ಕೂದಲಿಗೆ ಹೊಳಪು ನೀಡುವವರೆಗು ಇದರ ಉಪಯೋಗ ಬಹಳ.

1. ತಣ್ಣನೆಯ ನೀರಿಗೆ ಸ್ವಲ್ಪ ಕೋಲ್ಡ್ ರೋಸ್ ವಾಟರ್ ಅನ್ನು ಹಾಕಿ ಬೆರೆಸಿ ಅದರಿಂದ ಮುಖದ ಮೇಲೆ ಎರಚುವಂತೆ ಮಾಡಿ ಮುಖ ತೊಳೆದುಕೊಂಡರೆ ಮುಖದ ಮೇಲಿನ ಮೊಡವೆಗಳ ಸಮೇತ ಮುಖದ ಮೇಲಿನ ಕಲೆಗಳೂ ಸಹ ಮಾಯವಾಗುತ್ತವೆ . ಇದನ್ನು ದಿನಕ್ಕೆ ಮೂರು ಬಾರಿ ಮಾಡುವುದರಿಂದ ಉತ್ತಮ ಫಲಿತಾಂಶ ಕಾಣಬಹುದು . ಅಷ್ಟೇ ಅಲ್ಲದೆ ಕೋಲ್ಡ್ ರೋಸ್ ವಾಟರ್ ಅನ್ನು ಮುಲ್ತಾನಿ ಮಿಟ್ಟಿಯ ಜೊತೆ ಕೂಡ ಉಪಯೋಗಿಸಬಹುದು.
2. ರೋಸ್ ವಾಟರ್ ಕೂದಲಿಗೆ ಬಳಸುವುದರಿಂದ ಕೂದಲನ್ನು ಮೃದುಗಳಿಸುತ್ತದೆ. ಪ್ರತಿನಿತ್ಯ ನಿಯಮಿತವಾಗಿ ರೋಸ್ ವಾಟರ್ ಅನ್ನು ಕೂದಲಿಗೆ ಬಳಸುವುದರಿಂದ ತಲೆಹೊಟ್ಟು, ಎಣ್ಣೆಯಾಗುವುದನ್ನು ತಡೆಯಬಹುದು. ರೋಸ್ ವಾಟರ್‌ನಲ್ಲಿ ವಿಟಮಿನ್ ಎ, ಬಿ 3, ಸಿ ಮತ್ತು ಇ ಹೊಂದಿದ್ದು, ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.
3. ಸ್ನಾನ ಮಾಡುವಾಗ ಕೆಲವೊಂದು ಹನಿಗಳಷ್ಟು ರೋಸ್ ವಾಟರ್ ಅನ್ನು ನೀವು ಸ್ನಾನ ಮಾಡುವ ನೀರಿಗೆ ಹಾಕಿ ಬಿಸಿ ಮಾಡಿ . ಅದರ ಘಮಗುಡುವ ಪರಿಮಳ ನಿಮ್ಮನ್ನು ನಿಜಕ್ಕೂ ರಿಲಾಕ್ಸ್ ಮಾಡುತ್ತದೆ . ಮನಸ್ಸಿನ ತಳಮಳವೆಲ್ಲಾ ದೂರವಾಗಿ , ಹೊಸ ಉಲ್ಲಾಸ ನಿಮ್ಮ ಮನಸ್ಸಿನಲ್ಲಿ ಮನೆ ಮಾಡುತ್ತದೆ . ಅಷ್ಟೇ ಅಲ್ಲದೆ ರೋಸ್ ವಾಟರ್ ಹಾಕಿ ಸ್ನಾನ ಮಾಡುವುದರಿಂದ ನಿಮ್ಮ ದೇಹದ ಚರ್ಮಕ್ಕೆ ಕೂಡ ಬಹಳ ಉಪಯೋಗ ಇದೆ . ಚರ್ಮದ ರೋಗಗಳಿಂದ ದೂರ ಮಾಡಿ ಚರ್ಮವನ್ನು ಕಾಂತಿಯುಕ್ತ ಮಾಡುತ್ತದೆ .
4. ಮೊಸರಿಗೆ ಸ್ವಲ್ಪ ರೋಸ್ ವಾಟರ್ ಹಾಕಿ ಮುಖದ ಮೇಲೆ ಹಚ್ಚಿ ಅರ್ಧ ಗಂಟೆಗಳ ಕಾಲ ಹಾಗೆ ಬಿಡಿ . ಇದರಿಂದ ಚರ್ಮದ ಕಾಂತಿ ಇಮ್ಮಡಿ ಗೊಳ್ಳುತ್ತದೆ. ಮುಖದಲ್ಲಿ ಕಲೆಯಿದ್ದರೆ ಅರಿಶಿಣವನ್ನು ರೋಸ್ ವಾಟರ್ ಜತೆ ಮಿಕ್ಸ್ ಮಾಡಿ ಹಚ್ಚಿದರೆ ಕಲೆ ಮಾಯವಾಗುವುದು.
5. ಇದು ನಂಜುನಿರೋಧಕ ಗುಣಗಳನ್ನು ಹೊಂದಿರುವುದರಿಂದ ಯಾವುದೇ ಸೋಂಕನ್ನು ಗುಣಪಡಿಸಲು ರೋಸ್ ವಾಟರ್ ಅನ್ನು ವಿವಿಧ ನೈಸರ್ಗಿಕ ಔಷಧಿಗಳಲ್ಲಿ, ಚಿಕಿತ್ಸೆಗಳಲ್ಲಿ ಬಳಸಲಾಗುತ್ತದೆ

ರೋಸ್ ವಾಟರ್ ಮಾಡುವ ವಿಧಾನ


8–10 ಗುಲಾಬಿ ದಳಗಳನ್ನು ಮತ್ತು ಕುದಿಸಿದ ನೀರನ್ನು ತೆಗೆದುಕೊಂಡು ಗುಲಾಬಿ ದಳಗಳನ್ನು (Rose petals) ಚೆನ್ನಾಗಿ ಸ್ವಚ್ಛಗೊಳಿಸಿ, ಇದರಿಂದ ಬ್ಯಾಕ್ಟೀರಿಯಾಗಳು ನಿವಾರಣೆಯಾಗುತ್ತವೆ. ಒಂದು ದೊಡ್ಡ ಪಾತ್ರೆಯಲ್ಲಿ ನೀರನ್ನು ಕುದಿಸಿ ಅದರಲ್ಲಿ ಗುಲಾಬಿ ದಳಗಳನ್ನು ಹಾಕಿ. ಮಡಕೆಯನ್ನು ಮುಚ್ಚಿ ಮತ್ತು ಗ್ಯಾಸ್ ನಲ್ಲಿ ಸಣ್ಣ ಉರಿಯಲ್ಲಿ ಇಟ್ಟಾಗ. ಸ್ವಲ್ಪ ಸಮಯದ ನಂತರ, ಗುಲಾಬಿ ದಳಗಳ ಬಣ್ಣವು ನೀರಿನ ಬಣ್ಣಕ್ಕೆ ತಿರುಗಲು ಪ್ರಾರಂಭಿಸುತ್ತದೆ ಅಂದರೆ ಗುಲಾಬಿ ದಳ ಬಣ್ಣ ಬಿಡುತ್ತಿದೆ ಎಂದು ಅರ್ಥ. ಗ್ಯಾಸ್ ಆಫ್ ಮಾಡಿ ನೀರನ್ನು ಸ್ವಲ್ಪ ಸಮಯದವರೆಗೆ ತಣ್ಣಗಾಗಲು ಬಿಟ್ಟು ನಂತರ ನೀರನ್ನು ಬಸಿದು ಸೇವಿಸಬಹುದು.

---

## ಪದ ಬಂಧ

ಜ್ಯೋತಿ ರಾಜೇಶ್






### ಎಡದಿಂದ ಬಲಕ್ಕೆ....

1. ತಿಳಿಯಬೇಕಾದ ವಿಷಯವಿರುವ, ಈ ಹಾಳೆಯಲ್ಲಿ ಕೈ ಇದೆ.....(4)
4. ದೇವರು ಕುಡಿಯುವ ಈ ಪಾನೀಯದಲ್ಲಿ 'ವೃಕ್ಷ'ವಿದೆ....(4)
6. ಹೊಳೆಯುವುದನ್ನು ಹೀಗೂ ಹೇಳಬಹುದು.....(3)
8. ಸಂಶಯ ಬೇಡ.... ಇದು ಅದರದ್ದೇ 'ಚಿಹ್ನೆ'.....(3)
10. ಸಂಶಯಾಸ್ಪದ ವ್ಯಕ್ತಿಯನ್ನು ಹೀಗೆ ಕರೆಯಿರಿ..(3)
11. ಕರಾರಿಗಾಗಿ ಮಾಡಿದ ಆಕ್ಷೇಪಣೆ ತಿರುಗಿದೆ.....(4)
12. ನವರಸಗಳಲ್ಲಿ ಒಂದಿದು.....(3)
14. ಜನ, ಪಶು ಮುಂತಾದವುಗಳ ಎಣಿಕೆಗಾಗಿ ಉಪಯೋಗಿಸುವ ಪದವಿದು.....(3)
16. ಚಿಕ್ಕ ಹುಡುಗಿಯರು ಧರಿಸುವ ಉದ್ದ ಲಂಗಕ್ಕೆ ಹೀಗೊಂದು ಹೆಸರು......(4)
18. ಅತಿ ಹೆಚ್ಚಾಗಿದ್ದನ್ನು ಹೀಗೆ ಹೇಳಿ.....(3)
19. ತಿಂಡಿಯ ಜೊತೆ ಬರುವ ಜೋಡೀ ಪದವಿದು.(3)
21. ತಿರುಗು ಮುರುಗಾಗಿ ಬಂದ ಸಾಗರವಿದು.....(3)
23. ಘಟಿಸಲು ಅಸಾಧ್ಯವಾದುದನ್ನು ಹೀಗೆ ಹೇಳಿ.(4)
24. ಮೃತ್ಯು ದೇವತೆ ಇಲ್ಲಿ ತಿರುಗಿ ನಿಂತಿದ್ದಾನೆ......(4)

### ಮೇಲಿನಿಂದ ಕೆಳಕ್ಕೆ.....

2. ಸ್ತ್ರೀಯರು ತೊಡುವ ಈ ಉಡುಪು ಕೊನೆಯಲ್ಲಿ ದೀರ್ಘವಾಗಿದೆ..... (3)
3. ತಿರುಗಿ ಬಂದ ಸ್ನೇಹಿತನಿವ......(2)
4. ಕೃತಕವಾಗಿ ತೋರಿಸುವ ನಡವಳಿಕೆಯಿದು.....(2)
5. ಇದು ನಿಮಗಾಗಿ ಬಿಟ್ಟ ಪದ....... (5)
7. ಸೊಗಸಾಗಿ ಬಾಗಿರುವುದು, ಅಡಿಮೇಲಾಗಿದೆ...(3)
8. ಸಂದಿಯಲ್ಲಿ ಸೇರಿರುವ ಪೆಟ್ಟಿಗೆ ಇದು....(3)
9. ಈ ಯುವಕನಲ್ಲಿ ಮರವಿದೆಯಲ್ಲ?.....(3)
13. ಆತ್ಮೀಯ ಬಂಧ ಹೊಂದಿರುವ ನೆಂಟರು ಹಿಂದುಮುಂದಾಗಿ ಬಂದಿದ್ದಾರೆ.....(5)
14. ಪತಿಯೇ ಪರದೈವ ಎಂದುಕೊಂಡವಳಿವಳು.(3)
15. ಅರ್ಥವಾಗುವಂತೆ ಹೇಳಿದ್ದನ್ನು ಹೀಗೆ ಹೇಳಿ.(3)
17. ಯಾವುದೇ ವಸ್ತುವಿನ ಮಾದರಿಯನ್ನು ಹೀಗೆ ಹೇಳುವರಂತೆ.....(3)
20. ನಯವಾಗಿ ಹಾಕಿದ ನಿರ್ಬಂಧ.....(3)
21. ನೀರಾಗಿರುವದಕ್ಕೆ ಹೀಗೊಂದು ಹೆಸರು.....(2)
22. ಎಗ್ಗಿಲ್ಲದೆ ಮಜ ಮಾಡಿದ್ದಕ್ಕೆ ಸಿಕ್ಕ ಶಿಕ್ಷೆ ಇದು.....(2)
17. ಹಕ್ಕಿ ನುಡಿದ ಶುಭ ಸೂಚನೆಯೇ ಇದು.....(3)
18. ಸಂತೃಪ್ತಿಯಾಗದ ಆಪ್ತನಿವ....(3)

---

# ಶುದ್ಧಪ್ರೀತಿಯಿರದ ಪ್ರೇಮ..ಅದು ಪ್ರೇಮವೇ..?



ಹಿರಿಯೂರು ಪ್ರಕಾಶ್

**(ಪ್ರೇಮಿಗಳ ದಿನದಂದು ಹೀಗೊಂದು ಪ್ರೀತಿಯ ಪುರಾಣ)**

"ಪ್ರೀತಿ " ಅನ್ನೋ ಎರಡಕ್ಷರಕ್ಕೆ ಏನೆಲ್ಲಾ ಅರ್ಥ ಅನರ್ಥ, ವಿಶಾಲಾರ್ಥ, ಮಹತ್ವದರ್ಥ, ಗೂಡಾರ್ಥ, ಗಹನಾರ್ಥ ಇದೆಯಲ್ಲವೇ..? ಈ ಜಗತ್ತಿನ ಎಲ್ಲಾ ಜೈವಿಕ ಸಂಬಂಧಗಳ ಮೂಲ ಸೆಲೆಯೇ ಪ್ರೀತಿ ! ಪರಸ್ಪರರಲ್ಲಿ ನಂಬಿಕೆ, ಆತ್ಮೀಯತೆ, ವಿಶ್ವಾಸ, ಅಭಿಮಾನ, ಹೆಮ್ಮೆ ಮೂಡಲು ಮೂಲತಃ ಪ್ರೀತಿ ಇರಲೇಬೇಕು. ಸಿಂಪಲ್ಲಾಗಿ ಹೇಳಬೇಕೆಂದರೆ ಪ್ರೀತಿಯಿಲ್ಲದ ಜೀವನ ಚಂದ್ರ– ತಾರೆಗಳಿಲ್ಲದ ಬಾನಿನಂತೆ ಅಲ್ಲವೇ....! ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕಾದರೆ "ಪ್ರೀತಿ ನೀ ಇಲ್ಲದೆ ನಾನು ಹೇಗಿರಲಿ " ಎಂಬಂತೆ ಪ್ರೀತಿಯಿಲ್ಲದೆ ಜೀವನದ ಸಾರವೇ ಇಲ್ಲ! ಸೋ.... ಪ್ರೀತಿಯೇ ಎಲ್ಲಾ... ಅದಿಲ್ಲದೇ ಜೀವನವಿಲ್ಲ, ಇದ್ದರೂ ಅದರಲ್ಲಿ ಸಾರವಿಲ್ಲ. ಹೀಗಾಗಿ ಪ್ರೀತಿ ನಮ್ಮೊಳಗಿನ ಒಂದು ಪವರ್ ಫುಲ್ ಟೂಲ್ ಇದ್ದಂತೆ .

ನಿಮ್ಮಲ್ಲಿ ಕೋಟ್ಯಾಂತರ ಹಣ ,ಆಸ್ತಿ ,ಒಡವೆ– ವಸ್ತು ಕಾರು, ಬಂಗಲೆ, ಆಳು– ಕಾಳು ಎಲ್ಲವೂ ಇರಬಹುದು .ಆದರೆ ಮನೆಯಲ್ಲಿ ನಿಮ್ಮನ್ನು ಹೃದಯದಿಂದ ಪ್ರೀತಿಸುವ ಮನಸೊಂದಿಲ್ಲದಿದ್ದರೆ ಅವೆಲ್ಲವೂ ಜಸ್ಟ್ ವೇಸ್ಟ್ ! ಸಂತಸದ ಕ್ಷಣಗಳಲ್ಲಿ ಪ್ರೀತಿಯಿಂದ ಸಂಭ್ರಮಿಸುವ ಮನಸು , ಕಷ್ಟದ ಸಮಯದಲ್ಲಿ ಅಷ್ಟೇ ಪ್ರೀತಿಯಿಂದ ಸಾಂತ್ವನ ಹೇಳಿ ಸಂತೈಸುವ ಹೃದಯಗಳಿದ್ದಲ್ಲಿ ಮಿಕ್ಕೆಲ್ಲವೂ ಸೆಕೆಂಡರಿ ಕಣ್ರೀ..... ! ಸೋಲಲ್ಲೂ– ಗೆಲುವಲ್ಲೂ ನೋವಲ್ಲೂ– ನಲಿವಲ್ಲೂ, ಬಡತನದಲ್ಲೂ– ಸಿರಿತನದಲ್ಲೂ ಹಂಚಿಕೊಳ್ಳಲು ಬೇಕಾದದ್ದು ಪ್ರೀತಿಭರಿತ ಭಾವನೆಗಳೇ ಹೊರತು ಕೋಟಿ ಕೋಟಿ ಬೆಲೆಯಿರುವ ನಿರ್ಭಾವುಕ ವಸ್ತುಗಳಲ್ಲ. ಹಾಗಾದರೆ ಇಷ್ಟೆಲ್ಲಾ ಮೌಲ್ಯವುಳ್ಳ ಈ ಪ್ರೀತಿಯನ್ನು ಸಂಪಾದಿಸುವುದು ಅಷ್ಟು ಕಷ್ಟವೇ..?

ನೋ ವೇ......! ಖಂಡಿತಾ ಅದು ನಿಮ್ಮಲ್ಲೇ ಸುಪ್ತವಾಗಿದೆ. ಮೊಗೆದಷ್ಟೂ ಮುಗಿಯದ ನಿಧಿಯಂತೆ ! ನೀಡಿದಷ್ಟೂ ಉದ್ಭವಿಸುವ ಅಕ್ಷಯದಂತೆ ! ಹಂಚಿದಷ್ಟೂ ದ್ವಿಗುಣವಾಗುವ ವಿಸ್ಮಯದಂತೆ ! ಇಷ್ಟೆಲ್ಲಾ ಫ್ರೀಯಾಗಿ ಅದು ನಮ್ಮಲ್ಲೇ ಸುಪ್ತವಾಗಿದ್ದರೂ ಎಲ್ಲರೂ ಅದನ್ನು ಹಂಚಿಕೊಂಡು ಬಾಳಲು ಜಿಪುಣತನವೇಕೆ ? ಎಂಬ ಪ್ರಶ್ನೆ ಲಾಗಾಯ್ತಿನಿಂದಲೂ ಪ್ರಶ್ನೆಯಾಗಿಯೇ ಕಾಡುತ್ತಿದೆ..! ಕಾರಣ ಸಿಂಪಲ್....ನಾವು ಈ ಪ್ರಶ್ನೆಯನ್ನು ನಮಗೆ ನಾವೇ ಪ್ರಾಮಾಣಿಕವಾಗಿ ಕೇಳಿಕೊಂಡು ಅದಕ್ಕೆ ಬದ್ಧತೆಯಿಂದ ಉತ್ತರಿಸಲು ಹೋಗಿಲ್ಲ ಅಷ್ಟೇ. ! ಪ್ರೀತಿಯ ಅನಂತತೆಯನ್ನು ಲವ್ ನ ಸಂಕುಚಿತತೆಯೊಂದಿಗೆ ಸಮೀಕರಿಸಿ ನೋಡುವ ಸಾಮಾನ್ಯ ವ್ಯಾಪ್ತಿಯಿಂದ ಕೊಂಚ ಆಚೆ ಬಂದಾಗಲಷ್ಟೇ ಪ್ರೀತಿಯ ಆಳ–ಅಗಲ–ಹರಿವು.... ಅರಿವಿಗೆ ಬಂದೀತು !

ಈ ಪ್ರೀತಿ ಅನ್ನೋದು ಜೀವವಿರುವ ಎಲ್ಲಾ ಸಂಬಂಧಗಳಲ್ಲೂ ಒಂದಲ್ಲಾ ಒಂದು ರೂಪದಲ್ಲಿ ಬೆಸೆದುಕೊಂಡಿರುತ್ತೆ. ಪ್ರೀತಿ ಸಾಮಾನ್ಯವಾಗಿ ಸಂತಸವನ್ನೇ ಹರಿಸಿದರೂ ಕೆಲವು ಸಂಧರ್ಭದಲ್ಲಿ ಪ್ರೀತಿ ತಂದೊಡ್ಡುವ ನಿರಾಶೆಯನ್ನು ಅನುಭವಿಸಿದ ಕೆಲವರಲ್ಲಿ ಪ್ರೀತಿಯಲ್ಲಿನ ದೋಷವೂ, ಆಕ್ರೋಷವೂ ಕಂಡಿದ್ದಿರಬಹುದು. ಹೀಗಾಗಿಯೇ ಒಮ್ಮೊಮ್ಮೆ ಪ್ರೀತಿ ಕಡಿಮೆಯಾದರೂ ಕಷ್ಟ, ಹೆಚ್ಚಾದರೂ ಕಷ್ಟ.

ವಿಶೇಷವೆಂದರೆ ತಾಯಿ– ಮಕ್ಕಳ ಪ್ರೀತಿಯಲ್ಲಿ ಮಾತ್ರ ಕಳಂಕ, ಕೃತಕ, ಕಲ್ಮಷ, ಕೆಡುಕು, ಇರಲಾರದು . ಅದೊಂದು ಪದಗಳಿಗೆ ನಿಲುಕಲಾರದ ದಿವ್ಯಾನುಬಂಧ , ಅಮೋಘ ಅನುಭೂತಿ ಹಾಗೂ ನಿಸ್ವಾರ್ಥ ಪ್ರೀತಿಯ ಪರಾಕಾಷ್ಠೆ. ತಾಯಿ ಮಗುವಿನ ಪ್ರೀತಿಗೆ ಜಗತ್ತಿನ ಬೇರಾವುದೇ , ಬೇರೆ ಯಾರ ಪ್ರೀತಿಯ ತೂಕವೂ ಸರಿದೂಗಲಾರದು.ತಾಯಿ ಮಗುವಿನ ಪ್ರೀತಿಯ ಈ ಅನುಬಂಧ ಕೇವಲ ಮನುಷ್ಯರಲ್ಲಿ ಮಾತ್ರವಲ್ಲ, ಪ್ರಾಣಿಗಳಲ್ಲೂ ಧಾರಾಳವಾಗಿ ಕಾಣಬಹುದು.

ವಿಷಾದವೆಂದರೆ ಅದೇ ಮಟ್ಟದ ಈ ಪ್ರೀತಿಯ ನಿರಂತರ ಭಾವ ಇನ್ನಿತರೆ ಸಂಬಂಧಗಳಲ್ಲಿ ಸಲೀಸಾಗಿ ಕಾಣಸಿಗುವುದಿಲ್ಲ . ಗಂಡ– ಹೆಂಡತಿ, ಅಣ್ಣ ತಮ್ಮ, ಅಕ್ಕ ತಂಗಿ, ಅಜ್ಜ ಅಜ್ಜಿ, ಅತ್ತೆ– ಸೊಸೆ, ಮಾವ ಅಳಿಯ, ಗೆಳೆಯ ಗೆಳತಿ, ಸಂಬಂಧಿಕರು, ಬಂಧುಗಳು ಇತ್ಯಾದಿ ಈ ಎಲ್ಲಾ ಸಂಬಂಧಗಳಲ್ಲಿನ ಪ್ರೀತಿಗೆ ಆಗಾಗ್ಗೆ ಬಿರುಕು, ಕಸ ಕಡ್ಡಿ ಧೂಳು ಸೇರುತ್ತಲೇ ಇರುತ್ತವೆ. ಬಹುಶಃ ಮಾನವ ಸಂಬಂಧಗಳೇ ಹಾಗೆ ಅನ್ನುತ್ತೆ. ಹಾಗಂತ ಅಂತಹಾ ಧೂಳನ್ನೊರೆಸಿ ಮುಂದಡಿಯಿಡುವ ಪ್ರಯತ್ನವೂ ನಮ್ಮಲ್ಲೇ ಇದೆಯಲ್ಲವೇ...? ಏನೇ ಅಡೆತಡೆ ಬಂದರೂ ಪರಸ್ಪರ ಪ್ರೀತಿಯ ಬಂಧ ಸ್ಟ್ರಾಂಗ್ ಆಗಿದ್ದಾಗ ಯಾವ ಸಂಬಂಧಗಳೂ ಅಷ್ಟು ಸುಲಭಕ್ಕೆ ಕಳಚಿ ಬೀಳೋಲ್ಲ, ಹಾಗೆಯೇ ಇಸ್ಪೀಟ್ ಎಲೆಗಳಂತೆ ಉದುರುವ ಸಂಬಂಧಗಳಿಗೆ ಪ್ರೀತಿಯ ಬೆಲೆ ಗೊತ್ತೇ ಇರೋಲ್ಲ.

ಪ್ರೀತಿ ಹೃದಯದಿಂದ ಹೊಮ್ಮಿದಾಗಲಷ್ಟೇ ಅದಕ್ಕೆ ಮಿಲಿಯನ್ ಗಟ್ಟಲೆ ಮೌಲ್ಯವಿರಲು ಸಾಧ್ಯ. ಮನದೊಳಗೆ ಹುಸಿಪ್ರೀತಿ ತುಂಬಿಕೊಂಡು ಕೇವಲ ಬಾಯಿ ಮಾತಿಗೆ ಅಥವಾ ತೋರಿಕೆಗೆ ಪ್ರೀತಿ ವ್ಯಕ್ತಪಡಿಸಿದಲ್ಲಿ ಅದು ಪ್ರೀತಿಯಾಗಲಾರದು, ಬದಲಿಗೆ ಅದು ಸ್ವಾರ್ಥ ಸಾಧನೆಯ ತೋರಿಕೆಯ ಪ್ರೀತಿ. ಹೀಗಾಗಿಯೇ ನಿಜವಾದ ಪ್ರೀತಿಯೆನ್ನುವುದು ಅನಂತದಷ್ಟು ಆಳವಾದರೆ, ನಕಲಿ ಪ್ರೀತಿಯಿದೆಯಲ್ಲಾ, ಅದು ಕಾಲದಷ್ಟೇ ಕ್ಷಣಿಕ. !

ನೈಜ ಪ್ರೀತಿ ಹೊರಬರುವುದು ಪರಸ್ಪರ ಮನಸುಗಳು ಪರಿಶುದ್ಧವಾಗಿದ್ದಾಗ ಮಾತ್ರವೇ. ! ಮನಸುಗಳು ಬಗ್ಗಡವಿರದ ತಿಳಿನೀರಿನಂತೆ ಪಾರದರ್ಶಕವಾಗಿದ್ದಾಗ ಮಾತ್ರ ಮೌಲ್ಯಯುತವಾದ ಪ್ರೀತಿ ತಾನೇತಾನಾಗಿ ಉಕ್ಕುತ್ತದೆ. ಇಷ್ಟೆಲ್ಲಾ ಪ್ರೀತಿಗೆ ಮಹತ್ವವಿದ್ದರೂ, ಅದೊಂದು ಬಹುಮೌಲ್ಯಯುತವಾದ ಭಾವನೆ ಎಂದು ತಿಳಿದಿದ್ದರೂ ಅದನ್ನು ಪರಸ್ಪರ ಹಂಚಿಕೊಳ್ಳಲು ಏಕೆ ಚೌಕಾಸಿ ಮಾಡುತ್ತೇವೆ? ಬಹುತೇಕ ಸಂಬಂಧಗಳಲ್ಲಿ ಬಾಲ್ಯದಲ್ಲಿರುವ ಪ್ರೀತಿಯ ಅಗಾಧತೆ ದೊಡ್ಡವರಾದಂತೆ ಕಳೆಗುಂದಲು ಕಾರಣವೇನು ?

ಎಂಬ ಸಂಕೀರ್ಣ ಪ್ರಶ್ನೆಗೆ.....

" ಮನುಷ್ಯನಿಗೆ ನೆಮ್ಮದಿ ಸುಖ ದಕ್ಕುವುದು ಭೌತಿಕ ವಸ್ತುಗಳ ಮೇಲಾಟ ಬಯಲಾಟಗಳ ಹಾರಾಟಗಳಿಂದಲ್ಲ! ಬದಲಿಗೆ ಜೈವಿಕ ಸಂಬಂಧಗಳ ಮಧುರ ಭಾವನೆಗಳ ಹುಡುಕಾಟದಿಂದ ಅಥವಾ ಪ್ರೀತಿಯೆಂಬ ಜೋಕಾಲಿಯಲ್ಲಿ ಮನದುಂಬಿ ಜೀಕುವುದರಿಂದ..".

ಎಂಬ ಈ ಸಾಲುಗಳ ಸಾರ ಸರಿಯಾಗಿ ಅರ್ಥಮಾಡಿಕೊಳ್ಳದಿರುವುದೇ ಅದಕ್ಕೆ ಉತ್ತರವಿದ್ದೀತೇ....?

ಸಿಂಪಲ್ಲಾಗಿ ಹೇಳೋದಾದರೆ ತನ್ನದಲ್ಲದ ವಸ್ತುಗಳಿಗೆ ಬಾಯಿ ಬಿಡುವ ಮನುಷ್ಯ , ತನ್ನಲ್ಲಿಯೇ ಅಗಾಧವಾಗಿರುವ ಪ್ರೀತಿಯನ್ನು ಪಡೆಯಲು– ಕೊಡಲು ತಿಣುಕಾಡುತ್ತಾನೇಕೆ ಎಂಬ ಸರಳ ಆತ್ಮವಿಮರ್ಶೆ ಈ ಹೊತ್ತಿನ ಆದ್ಯತೆಯಾಗಬೇಕಿದೆ. ನಮಗೆ ಕಾರು, ಬಂಗಲೆ, ಹಣ, ಒಡವೆ, ಐಶ್ವರ್ಯ ಅಧಿಕಾರ ,ಪದವಿ, ಸಾಧನೆಗಳಷ್ಟೆ ಮುಖ್ಯವಾಗಿ ಅಥವಾ ಅದಕ್ಕಿಂತಲೂ ಮಿಗಿಲಾಗಿ ನಮ್ಮನ್ನು ಮನಸಾರೆ ಪ್ರೀತಿಸುವ ನಿಷ್ಕಲ್ಮಶ ಮನಸುಗಳು, ನಿರ್ಮಲಂತಃಕರಣದಿಂದ ಆರಾಧಿಸುವ ಹೃದಯಗಳ ಕೊರತೆ ದಿನೇ ದಿನೇ ಹೆಚ್ಚುತ್ತಲೇ ಇವೆ. ಹಾಗೆಯೇ ನಾವೂ ಸಹಾ ಇತರರನ್ನು ಪ್ರೀತಿಯಿಂದಲೇ ನೋಡುವ ಹೃದಯ ವೈಶಾಲ್ಯತೆಗೂ ಸ್ವಪ್ರತಿಷ್ಠೆಯ, ಸ್ವಾರ್ಥದ, ಅಸೂಯೆಯ, ಅಧಿಕಾರ ಅಂತಸ್ತಿನ ವಿನಾಶದ ಗರ ಬಡಿಯುತ್ತಲೇ ಇರುತ್ತದೆ.... !

ಅಲ್ಲಿಗೆ ಮನುಷ್ಯನೊಳಗಿನ ಬಹುತೇಕ ಎಲ್ಲಾ ರೀತಿಯ ಅಶಾಂತಿ, ಅಸಮಾಧಾನ, ಅವಿವೇಕದ ಉಗಮಕ್ಕೆ ಪ್ರೀತಿಯ ಕೊರತೆಯೂ ಬಹು ಮುಖ್ಯ ಕಾರಣ ಎಂಬುದು ಅರಿವಿಗೆ ಬಂದಲ್ಲಿ ಮಾತ್ರ ಪ್ರೀತಿಯ ಬೆಲೆ ಅರ್ಥವಾದೀತು ! ನಮ್ಮಲ್ಲೇ ಅಗಾಧವಾಗಿ ಸಿಕ್ಕು, ಬದುಕಿನುದ್ದಕ್ಕೂ ಹಂಚಿದರೂ ಖಾಲಿಯಾಗದ ಪ್ರೀತಿ ಹಂಚಲು ಜಿಪುಣತನವೇಕೆ...?

**ಮರೆಯುವ ಮುನ್ನ:** ಅಂದಹಾಗೆ ಪ್ರೀತಿ ಅಂದಾಕ್ಷಣ ಅದರರ್ಥ ಕೇವಲ ಹರೆಯದ ಹುಡುಗ ಹುಡುಗಿಯರ ನಡುವಿನ ಲವ್ ಎಂದಷ್ಟೇ ಸಂಕುಚಿತಗೊಂಡಿರುವ ಇಂದಿನ ಜ಼ಮಾನಾದಲ್ಲಿ ಪ್ರೀತಿಯನ್ನು ಪಾವಿತ್ರ್ಯತೆ ಅನುಬಂಧ ಬೆಸುಗೆಗಳ ವಿಶಾಲಾರ್ಥದಲ್ಲಿ ನೋಡುವ ನೋಟ, ಹುಡುಕಾಟ ಕೂಡಾ ಕಡಿಮೆಯೇ . ಪ್ರೀತಿ ಕೇವಲ ಹರೆಯದ ಮನಸುಗಳ ನಡುವಿನ ಭಾವನೆ ಮಾತ್ರವಲ್ಲ. ಅದು ಪ್ರತಿಯೊಂದು ಜೀವಿಗಳ ನಡುವಿನ ಪವಿತ್ರ ಬಂಧ.

ಪ್ರೀತಿಗೂ ಪ್ರೇಮಕ್ಕೂ ಸೂಕ್ಷ್ಮವಾದ ವ್ಯತ್ಯಾಸವಿದೆ. ಪ್ರೀತಿ ಅನ್ನೋದು ಯೂನಿವರ್ಸಲ್ ಇದ್ದಂತೆ. ಆದರೆ ಪ್ರೇಮಕ್ಕೆ ಇದೇ ಭಾಷ್ಯ ಬರೆಯಲಾಗಲ್ಲ. ಅದೇನಿದ್ದರೂ ಕೆಲವು ಸಂಬಂಧಗಳಿಗೆ ಮಾತ್ರ ಸೀಮಿತ. ಪ್ರೇಮವಿಲ್ಲದ ಪ್ರೀತಿಯನ್ನು ನೋಡಬಹುದು ಆದರೆ ಪ್ರೀತಿಯಿಲ್ಲದ ಪ್ರೇಮ .....ಅಸಲು ಅದು ಪ್ರೇಮವೇ ಅಲ್ಲ. !

ಪ್ರೀತಿಯೆಂಬುದು ನಮ್ಮ ನಿಮ್ಮೆಲ್ಲರ ನಡುವೆ ಸಾಕಷ್ಟು ಕೊಟ್ಟು ತೆಗೆದುಕೊಳ್ಳುವಷ್ಟು ಇದೆ. ನೀವು ಎಷ್ಟು ಪಡೆದು ಎಷ್ಟು ಕೊಡುತ್ತೀರಿ ಅನ್ನೋದು ನಿಮಗೇ ಬಿಟ್ಟದ್ದು. ಸಾಮಾನ್ಯವಾಗಿ ನನ್ನ ಎಲ್ಲಾ ಬರಹಗಳ ಕೊನೆಯಲ್ಲಿ " ಪ್ರೀತಿಯಿಂದ " ಎನ್ನುವ ಟ್ಯಾಗ್ ಲೈನ್ ನನಗೆ ಗೊತ್ತಿಲ್ಲದಂತೆಯೇ ಹಾಕುವ ಮೂಲಕ ಪ್ರೀತಿಯೆಂಬ ಭಾವ ತಾನೇ ತಾನಾಗಿ ಸ್ಫುರಿಸಲಿ ಎಂಬ ಆಶಯವೂ ಇದ್ದಿರಬಹುದೇನೋ... !

ಪ್ರೀತಿ ಪ್ರೇಮ ಮುಂತಾದ ಭಾವನೆಗಳು ನಮ್ಮ ಉಸಿರಿನೊಂದಿಗೇ ಬೆರೆತಿರುವ ಅವಿಚ್ಛಿನ್ನ ಭಾವಗಳು. ಅವು ಅನುಕ್ಷಣವೂ ನಮ್ಮೊಂದಿಗೇ ಬೆಸೆದಿರುತ್ತವೆ. ಅದಕ್ಕೇ ಅಂತ ವಿಶೇಷ ಸಮಯ–ದಿನ ಅಂತೇನಿಲ್ಲ. ಪ್ರೀತಿ ಪ್ರೇಮಕ್ಕೇ ಅಂತಾನೇ ಯಾರಾದ್ರೂ ವ್ಯಾಲೆಂಟೈನ್ ಡೆ ಆಚರಿಸಿಕೊಂಡ್ರೆ ಅದು ಅವರವರ ಖುಷಿ! ಅದಕ್ಕಾಗಿ ಬೇರಾರೂ ವ್ಯಲೆಂಟ್ ಆಗೋ ಅವಶ್ಯಕತೆಯೂ ಇಲ್ಲ.!

ಪ್ರೀತಿಯನ್ನು ಪ್ರೀತಿಯಿಂದ ಪ್ರೀತಿಸುವ ಪ್ರೀತಿಪಾತ್ರ ಹೃದಯಗಳಿಗೆಲ್ಲಾ ಪ್ರೀತಿಯಿಂದ ಪ್ರೀತಿಯ ಶುಭಾಶಯಗಳು.



**ನೆನಪಿಡಿ....! ಪ್ರೀತಿಯನ್ನು ಹೆಚ್ಚು ಹೆಚ್ಚು ಹಂಚಿದಷ್ಟೂ ಬದುಕಿನ ಅಷ್ಟೂ ಆನಂದದ ಮೌಲ್ಯ ಹೆಚ್ಚೆಚ್ಚು ನಿಮ್ಮಲ್ಲಿ ಡೆಪಾಸಿಟ್ ಆಗುತ್ತಲೇ ಹೋಗುತ್ತದೆ..! ನಿಮ್ಮೆಲ್ಲರ ಪ್ರೇಮಹಣತೆಯಲ್ಲಿ ಪ್ರೀತಿಯ ಜ್ಯೋತಿ ಸದಾ ಬೆಳಗುತಿರಲಿ.**

ವಾಸ್ತವ ವರ್ತಮಾನ

---



## ಪ್ರೇಮ ದಿನವೊಂದೇ ಸಾಕೇ ! ?

ಭಾವನೆಗಳ ಬುತ್ತಿ ಬಿಚ್ಚಿ
ಒಲವ ಹಸಿವಿನಿಂದ
ತೆರೆದ ಕನಸುಗಳ
ಬಿಗಿಯಾಗಿ ಕಟ್ಟಿ
ಹೇಳುವೆ ಗೆಳೆಯ
ಪ್ರೀತಿಯ ಗಾಯನ
ಅದಕೆ ಈ ಪ್ರೇಮ ದಿನ ಒಂದೇ
ಸಾಕೇ! ?

ಪ್ರತಿ ಕಣವು ಪ್ರತಿಕ್ಷಣವು
ತಮ್ಮಗಳ ಕಾರ್ಯದಿ ಮಘ್ನ
ಕಿರುನಗೆ ಹೊತ್ತ ಅಧರ
ಮಿಡಿದಿದೆ ವೀಣೆಯ
ಮುಟ್ಟಿ ಹೇಳುತಿರಲು ಎದೆಯಾ
ಬಾನ ಚಂದಿರನು ಗೈರಾದ
ಬಾನ ಪಥ ತಪ್ಪಿ
ಹೇಳುವೆ ಗೆಳೆಯ
ಪ್ರೇಮದ ಕಥನ
ಅದಕೆ ಈ ಪ್ರೇಮ ದಿನ ಒಂದೇ
ಸಾಕೇ ! ?

ಕಟ್ಟಿ ನಗು–ಮುನಿಸುಗಳ ಮಾಲೆ
ತಾರೆಗಳ ಹೊಳಪಲ್ಲಿ ಮಿಂದು
ನನಗೆ ನೀನು, ನಿನಗೆ ನಾನು ಎಂಬ
ಮಿಥ್ಯಮೆಟ್ಟಿ ನನ್ನೊಳಗೆ ನೀನು,
ಉಸಿರಾಗಿ ಬೆರೆತಿರುವಾಗ
ಪ್ರತಿ ಉಸಿರು ನಿನ್ನ ಇರುವಿಕೆಗೆ
ಆಧಾರ
ನೆನೆದು ಕಣ್ಣು ತುಂಬಿ
ಬೆರೆತಿರುವೆ ಜನ್ಮ ಜನ್ಮದಿ
ಹೇಳುವೆ ಗೆಳೆಯ ಒಲವ ಕವನ
ಅದಕೆ ಈ ಪ್ರೇಮ ದಿನ ಒಂದೇ ಸಾಕೇ ! ?

। ಅಶ್ವಿನಿ ಅಂಗಡಿ
ಬಾದಾಮಿ



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,